ಸಂಪುಟ : 13 Volume | ಸಂಚಿಕೆ : 225 Issue | ಪುಟಗಳು : 08 Pages | ಬುಧವಾರ 22 ಅಕ್ಟೋಬರ್ 2025 | ₹2 | PRGINO.120927(RNINO:KARKAN/2011/48371) | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಬಳ್ಳಾರಿ | ವಿಜಯನಗರ | ಕೊಪ್ಪಳ & ಬಾಗಲಕೋಟೆ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

'ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇ ಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲ ಪ್ರೀತಿ ಇದ್ದೇ ಇರುವುದು

ಸಂತ ಕಬೀರ.

2. ಇಲಾಖೆಯ ಅಧಿಕಾರಿಗಳ ಕಾರ್ಯಕ್ಕೆ ಜನರ ಶ್ಲಾಘನೆ | 3. ಹಡಪದ ಅಭಿವೃದ್ಧಿ ನಿಗಮ ಘೋಷಣೆ | 7 ಮರಿಯಮ್ಮದೇವಿ ಮತ್ತು ಸೇವಾಲಾಲ ಮಹಾರಾಜರ

## ನಾಳೆ ಬಿಡುವು



ದೀಪಾವಳಿ ಹಬ್ಬದ ಪ್ರಯುಕ್ತ ನಾಳೆ ನಮ್ಮ ಪತ್ರಿಕಾ ಕಚೇರಿಗೆ ಬಿಡುವು. ಆದ್ದರಿಂದ ದಿನಾಂಕ 23.10.2025 ಮಲ್ಲಮ್ಮನುಡಿ ಸಂಚಿಕೆ ಪ್ರಕಟವಾಗುವುದಿಲ್ಲ. ನಮ್ಮೆಲ್ಲಾ ಓದುಗರಿಗೆ, ಜಾಹೀರಾತುದಾರರಿಗೆ, ಪತ್ರಿಕಾ ವಿತರಕರಿಗೆ, ಹಿತೈಷಿಗಳಿಗೆ ದೀಪಾವಳಿ ಹಬ್ಬದ ಶುಭಾಶಯಗಳು.

-ಸಂಪಾದಕರು.

# ಸಂವಿಧಾನ ವಿರೋಧಿ ಅನೈತಿಕ ಪೊಲೀಸ್‌ಗಿರಿಗೆ ಕಡಿವಾಣ:ಸಿಎಂ

ಬೆಂಗಳೂರು, ಅ21:ಪೊಲೀಸ್ ಇಲಾಖೆ ಶಾಂತಿ-ಸುವ್ಯವಸ್ಥೆ ಕಾಪಾಡಿದರೆ ರಾಜ್ಯದ ಅಭಿವೃದ್ಧಿ ಸಾಧ್ಯವಾಗುತ್ತದೆ. ಹೀಗಾಗಿ ಅನೈತಿಕ ಪೊಲೀಸ್ ಗಿರಿಗೆ ಕಡಿವಾಣ ಬಿದ್ದಿರುವುದು ಉತ್ತಮ ಕೆಲಸ. ಹಾಗೆಯೇ ಮಾದಕ ವಸ್ತು ಹಾವಳಿಗೂ ಬ್ರೇಕ್ ಬಿದ್ದಿದ್ದು ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಬೇಕಿದೆ. ಈ ಸಾಧನೆಯ ಶ್ರೇಯಸ್ಸು ಪೊಲೀಸ್ ಇಲಾಖೆಗೆ ಸಲ್ಲಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಂದು ಬೆಂಗಳೂರಿನ ಮೈಸೂರು ರಸ್ತೆ ಸಿ.ಎ.ಆರ್ ಕೇಂದ್ರ ಸ್ಥಾನದ ಹುತಾತ್ಮರ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾದ ಪೊಲೀಸ್ ಸಂಸ್ಮರಣಾ ದಿನಾಚರಣೆಯಲ್ಲಿ ಹುತಾತ್ಮ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ಸಂತಾಪ ಸಲ್ಲಿಸಿ ಮಾತನಾಡಿದ ಮುಖ್ಯಮಂತ್ರಿಗಳು, ರಾಜ್ಯದ ಘನತೆ, ಅಭಿವೃದ್ಧಿ ಮತ್ತು ಪ್ರಗತಿಗೆ ಕಂಟಕವಾಗಿದ್ದ ಸಂವಿಧಾನ ವಿರೋಧಿ ಅನೈತಿಕ ಪೊಲೀಸ್ ಗಿರಿಗೆ ರಾಜ್ಯದಲ್ಲಿ ಕಡಿವಾಣ ಬಿದ್ದಿದೆ. ಇದರ ಶ್ರೇಯಸ್ಸು ಪೊಲೀಸ್ ಇಲಾಖೆಗೆ ಸಲ್ಲಬೇಕು ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಪರಿಶಿಷ್ಟ ಜಾತಿ ವರ್ಗದವರ ಮೇಲಿನ ದೌರ್ಜನ್ಯ ತಡೆಗೆ ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಕಾರ್ಯೋನ್ಮುಖಗೊಳಿಸಿದ್ದೇವೆ. ಇವು ಪರಿಣಾಮಕಾರಿಯಾಗಿ ಕೆಲಸ



ಮಾಡುವ ಮೂಲಕ ಸಾಂವಿಧಾನಿಕ ಹಕ್ಕು ಮತ್ತು ಮೌಲ್ಯಗಳನ್ನು ಕಾಪಾಡುವ ಕೆಲಸ ಆಗಬೇಕಿದೆ ಎಂದರು. ಒಂದು ವರ್ಷದಲ್ಲಿ ರಾಜ್ಯದ 8 ಮಂದಿ ಸೇರಿ ದೇಶದಲ್ಲಿ 191 ಮಂದಿ ಕರ್ತವ್ಯ ನಿರ್ವಹಣೆ ವೇಳೆ ಪ್ರಾಣ ತ್ಯಾಗಮಾಡುವ ಹುತಾತ್ಮರಾಗಿದ್ದಾರೆ. ಇವರ ತ್ಯಾಗ, ಬಲಿದಾನಕ್ಕೆ ಬೆಲೆ ಕಟ್ಟಲಾಗದು. ಇವರನ್ನು ಇಡೀ ದೇಶ ಸ್ಮರಿಸಿ, ವಂದಿಸುವುದು ಪ್ರತಿಯೊಬ್ಬರ ಕರ್ತವ್ಯ. ದೇಶದ ಶಾಂತಿ ಸುವ್ಯವಸ್ಥೆ ಕಾಪಾಡುವುದರಲ್ಲಿ ಪೊಲೀಸ್ ಸಿಬ್ಬಂದಿ ಅಗ್ರ ಸ್ಥಾನದಲ್ಲಿದ್ದಾರೆ. ಕೋಮು ಶಕ್ತಿಗಳು, ದುಷ್ಟಶಕ್ತಿಗಳ ನಿಗ್ರಹದಲ್ಲಿ ನಿಮ್ಮ ಪಾತ್ರ ದೊಡ್ಡದಿದೆ ಎಂದರು. ಸಂವಿಧಾನದಲ್ಲಿ ಜನರಿಗೆ ಕೊಟ್ಟಿರುವ ಹಕ್ಕುಗಳನ್ನು ಕಾಪಾಡುವ ಜವಾಬ್ದಾರಿಯನ್ನೂ ಪೊಲೀಸ್ ಇಲಾಖೆ ನಿರ್ವಹಿಸುತ್ತಿದೆ ಎಂದರು. ಪೊಲೀಸ್ ಇಲಾಖೆಯಲ್ಲಿ 116 ಮಂದಿಗೆ ಅನುಕಂಪದ ಕೆಲಸ ನೀಡಲಾಗಿದೆ. ನಿವೃತ್ತ ಪೊಲೀಸ್ ಆರೋಗ್ಯ ಯೋಜನೆಯ ವೈದ್ಯಕೀಯ ಮರುಪಾವತಿ ವೆಚ್ಚವನ್ನು ವಾರ್ಷಿಕ 1 ಲಕ್ಷ ರೂಗಳಿಂದ 1.50 ಲಕ್ಷಕ್ಕೆ ಹೆಚ್ಚಿಸಲಾಗಿದೆ ಹಾಗೂ ಎಲ್ಲಾ ಪೊಲೀಸ್ ಸಿಬ್ಬಂದಿಯ ಆರೋಗ್ಯ ತಪಾಸಣಾ ವೆಚ್ಚವನ್ನು 1000 ರೂ ಗಳಿಂದ 1500 ರೂ ಗೆ ಹೆಚ್ಚಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.


2ನೇ ಪುಟನೋಡಿ

## 53 ಸಾವಿರ ರೂ. ಗಾಂಜಾ ಜಪ್ತಿ

ಕಲಬುರಗಿ, ಅ.21-ಆಳಂದ ಪಟ್ಟಣದ ಎಪಿಎಂಸಿ ಆವರಣದಲ್ಲಿ ಅನಧಿಕೃತವಾಗಿ ಗಾಂಜಾ ಮಾರಾಟ

2ನೇ ಪುಟನೋಡಿ

## ಕಾರು-ಟಂ ಟಂ ಮಧ್ಯೆ ಡಿಕ್ಕಿ, ಸ್ಥಳದಲ್ಲೆ ಇಬ್ಬರ ದುರ್ಮರಣ



ಮಲ್ಲಮ್ಮನುಡಿ ವಾರ್ತೆ

ಕಲಬುರಗಿ:ಅ.21:ಜಿಲ್ಲೆಯ ಜೇವರ್ಗಿ ತಾಲೂಕಿನ ನೇದಲಗಿ ಗ್ರಾಮದ ಬಳಿ ಕಾರು-ಟಂ ಟಂ ಮಧ್ಯೆ ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲೆ ಇಬ್ಬರ ದುರ್ಮರಣ ಸಂಭವಿಸಿದ ಘಟನೆ ಮಂಗಳವಾರ ನಡೆದಿದೆ.

ಭೀಕರ ಅಪಘಾತದಲ್ಲಿ ಟಂ ಟಂ ನಜ್ಜುಗುಜ್ಜಾದರೆ ಪಲ್ಟಿಯಾಗಿ ಕಾರು ಬಿದ್ದಿದೆ. ಟಂಟಂನಲ್ಲದ್ದ ಇಬ್ಬರು ಸ್ಥಳದಲ್ಲೆ ಸಾವಿಗೀಡಾಗಿದ್ದಾರೆ. ಬಾಷಾಸಾಬ್ (45), ಶಂಕ್ರೆಪ್ಪ (41) ಎಂಬುವವರೇ ಮೃತ ದುದೈವಿಗಳಾಗಿದ್ದಾರೆ. ನೇಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದೇ ತಮ್ಮ ಪ್ರಥಮಾದ್ಯತೆ:ವೆಂಕಟ ಸಿಂಗ್

ಕಲಬುರಗಿ,ಅ.21:ಸಾರ್ವಜನಿಕ ಹಿತಾಸಕ್ತಿದಡಿ ಕೋರುವ ಮಾಹಿತಿಯನ್ನು ಸಾರ್ವಜನಿಕರಿಗೆ ತ್ವರಿತಗತಿಯಲ್ಲಿ ಮಾಹಿತಿ ಒದಗಿಸುವುದೇ ತಮ್ಮ ಪ್ರಥಮಾದ್ಯತೆಯಾಗಿರಲಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ಮಾಹಿತಿ ಆಯುಕ್ತ ವೆಂಕಟಸಿಂಗ್ ಅವರು ಹೇಳಿದರು.

ಮಂಗಳವಾರ ಇಲ್ಲಿನ ಕರ್ನಾಟಕ ಮಾಹಿತಿ ಆಯೋಗದ ಕಚೇರಿಯಲ್ಲಿ ಕಲಬುರಗಿ ಪೀಠದ ಮಾಹಿತಿ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಹಿತಿ ಅಧಿಕಾರಿಗಳಿಗೆ ದಂಡ ವಿಧಿಸುವ ಬದಲು ಸಾರ್ವಜನಿಕರಿಗೆ ಮಾಹಿತಿ ನೀಡುವ ಮೂಲಕ ನ್ಯಾಯ ಒದಗಿಸುವ ಕೆಲಸ ಪೀಠ ಮಾಡಲಿದೆ ಎಂದರು.

ಉತ್ತರದಾಯಿತ್ವದ ಹಿನ್ನೆಲೆಯಲ್ಲಿ 2005ರಲ್ಲಿ ಕೇಂದ್ರ ಸರ್ಕಾರ ಜಾರಿಗೆ



ತಂದ ಮಾಹಿತಿ ಹಕ್ಕು ಕಾಯ್ದೆಯನ್ನು ಅದೇ ವರ್ಷ ರಾಜ್ಯದಲ್ಲಿ ಅನುಷ್ಠಾನ ಮಾಡುವ ಮೂಲಕ ಕಾಯ್ದೆ ಅನುಷ್ಠಾನಕ್ಕೆ ತಂದ ಮೊದಲ ರಾಜ್ಯ ಕರ್ನಾಟಕವಾಗಿದೆ. ಕಲಬುರಗಿ ಪೀಠದಲ್ಲಿ ಸುಮಾರು 7 ಸಾವಿರ ಅರ್ಜಿಗಳು ವಿಚಾರಣೆಗೆ ಬಾಕಿ ಇದ್ದು, ಇದನ್ನು ಹಂತ ಹಂತವಾಗಿ ವಿಲೇವಾರಿ ಮಾಡಲಾಗುವುದು ಎಂದರು.

ದೇಶದ ವಿವಿಧ ರಾಜ್ಯಕ್ಕೆ ಹೋಲಿಸಿದಾಗ ಮಹಾರಾಷ್ಟ್ರದಲ್ಲಿ 60 ಸಾವಿರ, ತಮಿಳುನಾಡಿನಲ್ಲಿ 51 ಸಾವಿರ ಅರ್ಜಿ ವಿಚಾರಣೆಗೆ ಬಾಕಿ ಇದ್ದರೆ, ರಾಜ್ಯದ ಮಾಹಿತಿ ಹಕ್ಕು ಆಯೋಗದಲ್ಲಿ 38 ಸಾವಿರ ಅರ್ಜಿಗಳಿವೆ. ಇತ್ತೀಚೆಗೆ ರಾಜ್ಯದಲ್ಲಿ ಹೊಸ ಆಯುಕ್ತರ ನೇಮಕಾತಿ ಆಗಿರುವುದರಿಂದ ಇದೀಗ ಅರ್ಜಿಗಳ ವಿಲೇವಾರಿ ವೇಗ ಪಡೆಯಲಿದೆ. ಪಾರದರ್ಶಕವಾಗಿ ಮತ್ತು ನ್ಯಾಯಸಮ್ಮತವಾಗಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಆಯೋಗ ಹಿಂದಿನಗಿಂತ ಹೆಚ್ಚು ಕಾರ್ಯೋನ್ಮುಖವಾಗಿರಲಿದೆ ಎಂದರು.

ಕಳೆದ 2-3 ವರ್ಷಗಳಿಂದ ಕಲಬುರಗಿ ಪೀಠ ಶಾಶ್ವತವಾಗಿ ಕಲಬುರಗಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ, ಪೀಠಕ್ಕೆ ಸ್ವಂತ ಕಟ್ಟಡ ಇಲ್ಲ. ಹೈಕೋರ್ಟ್ ಬಳಿ

2ನೇ ಪುಟನೋಡಿ

## ದೇಶದ ಆಂತರಿಕ ಭದ್ರತೆಗೆ ಪೊಲೀಸರ ಕೊಡುಗೆ ಅಪಾರ:ಕರ್ನಲ್ ಶರಣಪ್ಪ ಸಿಕೆನಪುರೆ



ಮಲ್ಲಮ್ಮನುಡಿ ವಾರ್ತೆ

ಬೀದರ, ಅ.21 : ದೇಶದಲ್ಲಿ ಶಾಂತಿ, ಸುವ್ಯವಸ್ಥೆ ಜೊತೆಗೆ ಆಂತರಿಕ ಭದ್ರತೆಗಾಗಿ ಪೊಲೀಸರು ಹಗಲಿರುಳು ಶ್ರಮಿಸುವ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ ಎಂದು ಕರ್ನಲ್ ಶರಣಪ್ಪ ಸಿಕೆನಪುರೆ ತಿಳಿಸಿದರು.

ಅವರು ಮಂಗಳವಾರ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಹೂದಂಡೆ (ರೀಥ) ಸಮರ್ಪಿಸಿ ಗೌರವ ಸಲ್ಲಿಸಿ ಮಾತನಾಡಿದರು.

ಪೊಲೀಸರು ನಿಷ್ಠೆಯಿಂದ ಕೆಲಸ ಮಾಡುತ್ತಿರುವದರಿಂದ ದೇಶದ ಜನ ನೆಮ್ಮದಿಯಿಂದ ಇದ್ದೇವೆ.

2ನೇ ಪುಟನೋಡಿ

## ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೋಲಿಸ್ ಇಲಾಖೆಯ ಪಾತ್ರ ಪ್ರಮುಖ:ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್



ಮಲ್ಲಮ್ಮನುಡಿವಾರ್ತೆ ಕಲಬುರಗಿ : ಅ.21: ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲಿಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಾತ್ರ ಬಹಳಷ್ಟು ಪರಿಣಾಮಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನಮ್ ಅವರು ಹೇಳಿದರು.

ಮಂಗಳವಾರದಂದು ಪೊಲೀಸ್ ಹುತಾತ್ಮರ ಸ್ಮಾರಕ ಡಿ.ಎ.ಆರ್ ಮೈದಾನದಲ್ಲಿ ಕಲಬುರಗಿ ನಗರ ಮತ್ತು ಕಲಬುರಗಿ ಜಿಲ್ಲಾ ಪೊಲೀಸ್ ವತಿಯಿಂದ ಕರ್ತವ್ಯ ಪಾಲನೆಯಲ್ಲಿ ಪ್ರಾಣವನ್ನು ಸಮರ್ಪಿಸಿದ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ ಅರ್ಪಿಸಿ ಮಾತನಾಡಿದರು.

ಪ್ರತಿಯೊಂದು ಸರ್ಕಾರದ ಕೆಲಸ ಪೊಲೀಸ್ ಇಲಾಖೆ, ಜಿಲ್ಲಾಡಳಿತ ಸಮನ್ವಯತೆಯಿಂದ ಕೆಲಸ ಮಾಡುತ್ತೇವೆ ಚುನಾವಣೆಗಳು, ಜಾತ್ರೆಗಳು ಮತ್ತು ಅಗತ್ಯ ಸಂದರ್ಭಗಳಲ್ಲಿ ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲಿಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಾತ್ರ ಬಹಳಷ್ಟು ಪರಿಣಾಮಕಾರಿಯಾಗಿದೆ ಎಂದು ಅವರು ಹೇಳಿದರು.

ಪ್ರಕೃತಿ ವಿಕೋಪಗಳಾದ ಅತಿವೃಷ್ಠಿ ಮತ್ತು ಅನಾವೃಷ್ಠಿಯಂತಹ ಸಂದರ್ಭದಲ್ಲಿ ಪೋಲಿಸ್ ಇಲಾಖೆಯವರು ನೀಡುವ ಸಹಕಾರದಿಂದ ಯಾವುದೆ ಸಮಸ್ಯೆಗಳನ್ನು ಎದುರಿಸಲು ಪೋಲಿಸ್ ಇಲಾಖೆಯ ಸೇವೆ ಸಹಕಾರಿಯಾಗಿದೆ ಎಂದರು.

ನಿವೃತ್ತ ಪೊಲೀಸ್ ಅಧಿಕಾರಿಳು ತಮ್ಮ ಅಸೋಷಿಯೇಷನ್ ಮೂಲಕ ಬಹಳಷ್ಟು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರಗಳನ್ನು ಆಯೋಜಿಸುವ ಮುಖಾಂತರ ಸಾಮಾಜಿಕ ಸೇವೆಯನ್ನು ಸಲ್ಲಿಸುವ ಮುಖಾಂತರ ಕರ್ತವ್ಯದಲ್ಲಿ ಸೇವೆಯನ್ನು ಸಲ್ಲಿಸುತಿರುವ ಸಂದರ್ಭದಲ್ಲಿ ಹುತಾತ್ಮರ ಪೊಲೀಸ್ ಸಿಬ್ಬಂದಿಗಳಿಗೆ

2ನೇ ಪುಟನೋಡಿ

## ಸಹಕಾರಿ ಚಳುವಳಿ ಬಲಪಡಿಸುವಲ್ಲಿ ರಾಜ್ಯದ ಹೈನುಗಾರಿಕೆ ಮುಂಚೂಣಿಯಲ್ಲಿ: ಸಚಿವ ಕೆ.ವೆಂಕಟೇಶ್


ಬೆಂಗಳೂರು, ಅ21:ಕರ್ನಾಟಕ ಹಾಲು ಮಹಾಮಂಡಳಿ ನಿಯಮಿತ (ಕೆಎಂಎಫ್) ಸಂಸ್ಥೆಯು ಕಳೆದ ಐದು ದಶಕಗಳಿಂದ ರಾಜ್ಯದ ಹೈನುಗಾರಿಕೆ ಮತ್ತು ಸಹಕಾರ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದ್ದು, ಹಾಲು ಉತ್ಪಾದಕರ ರೈತರ ಹಿತದೃಷ್ಟಿಯಿಂದ ರಾಜ್ಯದ ಹೈನುಗಾರಿಕೆ ಸಹಕಾರಿ ಚಳುವಳಿಯನ್ನು ಬಲಪಡಿಸುವಲ್ಲಿ ಮುಂಚೂಣಿಯಲ್ಲಿದೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರು ತಿಳಿಸಿದರು. ಇಂದು ವಿಕಾಸಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಪ್ರತಿದಿನ ರಾಜ್ಯದ ವಿವಿಧ ಹೈನುಗಾರ ರೈತರಿಂದ ಸರಾಸರಿ 1 ಕೋಟಿ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದ್ದು, ಅದರಲ್ಲಿ ಸುಮಾರು 65 ಲಕ್ಷ ಲೀಟರ್ ಹಾಲು, ಮೊಸರು ಹಾಗೂ ಯುಎಚ್ ಹಾಲು ಉತ್ಪನ್ನಗಳನ್ನು ರಾಜ್ಯ ಮತ್ತು ಹೊರ ರಾಜ್ಯ ಮಾರುಕಟ್ಟೆಗಳಲ್ಲಿ ಗ್ರಾಹಕರಿಗೆ ತಲುಪಿಸಲಾಗುತ್ತಿದೆ.

ನಂದಿನಿ ಬ್ರಾಂಡ್ ನಡಿಯಲ್ಲಿ ಹಾಲಿನೊಂದಿಗೆ ತುಪ್ಪ ಬೆಣ್ಣೆ, ಪನೀರ್, ಸಿಹಿ-ತಿನಿಸುಗಳು, ಹಾಲಿನ ಪುಡಿ, ಪಾನೀಯಗಳು ಸೇರಿದಂತೆ 175 ಕ್ಕೂ ಅಧಿಕ ಬಗೆಯ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ರಾಜ್ಯ, ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಗೋವಾ, ಕೇರಳ ಹಾಗೂ ದೆಹಲಿ, ಅಸ್ಸಾಂ ಮತ್ತು ಹೊರದೇಶಗಳ ಮಾರುಕಟ್ಟೆಗಳಿಗೂ ಯಶಸ್ವಿಯಾಗಿ ಮಾರಾಟ ಮಾಡಲಾಗುತ್ತಿದೆ.

ಹಾಲು ಮತ್ತು ಹಾಲಿನ ಉತ್ಪನ್ನಗಳ ಶುದ್ಧತೆ, ಗುಣಮಟ್ಟ ಮತ್ತು ಕೈಗೆಟುಕುವ ಬೆಲೆಯು ನಂದಿನಿ ಬ್ರಾಂಡ್ ಅನ್ನು ಗ್ರಾಹಕರ ವಿಶ್ವಾಸದ ಪ್ರತೀಕವನ್ನಾಗಿ ಮಾಡಿದೆ. ಪ್ರತಿವರ್ಷ ದಸರಾ ಮತ್ತು ದೀಪಾವಳಿ ಹಬ್ಬಗಳ ಸಂದರ್ಭದಲ್ಲಿ ಸಿಹಿ ತಿನಿಸುಗಳಿಗೆ ರಾಜ್ಯದಾದ್ಯಂತ ಹೆಚ್ಚಿನ ಬೇಡಿಕೆ ಕಂಡುಬರುತ್ತದೆ. ಈ ಹಬ್ಬದ ಅವಧಿಯಲ್ಲಿ ನಂದಿನಿ ಬ್ರಾಂಡ್‌ನಡಿಯಲ್ಲಿ ಲಭ್ಯವಿರುವ 40 ಕ್ಕೂ ಹೆಚ್ಚು ಸಿಹಿ ಉತ್ಪನ್ನ

2ನೇ ಪುಟನೋಡಿ

## ಬಿಜೆಪಿಯಿಂದಲೂ ರಾಜ್ಯದಿಂದ ಹಣ ಹೋಗಿದೆ: ರಾ.ರೆಡ್ಡಿ



ಬೆಂಗಳೂರು,ಅ.21-ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ರಾಜ್ಯದ ಸಂಪತ್ತನ್ನು ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ಚುನಾವಣೆಗಳಿಗೆ ಕಳುಹಿಸಿದ್ದೀರಿ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಬಿಜೆಪಿ ವಿರುದ್ಧ ಇಂದಿಲ್ಲಿ ನೇರ ವಾಗ್ದಾಳಿ ನಡೆಸಿದ್ದಾರೆ. ರಾಜ್ಯದಲ್ಲಿ 2008-2013 ನತ್ತು 2019-2023 ಅವಧಿಯಲ್ಲಿ ಬಿಜೆಪಿ ಸರ್ಕಾರ ಇದ್ದ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಬಿಎಸ್ ಯಡಿಯೂರಪ್ಪ, ಡಿ.ವಿ ಸದಾನಂದಗೌಡ, ಜಗದೀಶ್ ಶೆಟ್ಟರ್, ಬಸವರಾಜಬೊಮ್ಮಾಯಿ ಅವರು ಬೇರೆ ರಾಜ್ಯಗಳ ವಿಧಾನಸಭೆ ಚುನಾವಣೆಗೆ ಹಣ ಕಳುಹಿಸಿಲ್ಲವೇ ತಾವು ಮಾಡಿದ ತಪ್ಪನ್ನು ಇನ್ನೊಬ್ಬರ ಮೇಲೆ ಹಾಕುವ ಪ್ರಯತ್ನ ಸರಿಯಲ್ಲ ಎಂದಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು ಕರ್ನಾಟಕ ಬಿಜೆಪಿಯ

2ನೇ ಪುಟನೋಡಿ

## ಶೋಭಾ ರಾಜಶೇಖರ ಪಾಟೀಲ್ ನಿವಾಸಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಭೇಟಿ

ಮಲ್ಲಮ್ಮನುಡಿ ವಾರ್ತೆ

ಚಿಟಗುಪ್ಪ:ಅ.21: ತಾಲೂಕಿನ ಮುಸ್ತರಿ ಗ್ರಾಮದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕಿ ಮಹಿಳಾ ಆಯೋಗದ ಮಾಜಿ ನಿರ್ದೇಶಕಿ ಶೋಭಾ ರಾಜಶೇಖರ ಪಾಟೀಲ್ ರವರ ನಿವಾಸಕ್ಕೆ ಮಂಗಳವಾರ ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ್ ಅವರು ಭೇಟಿ ನೀಡಿದರು.



ಈ ಸಂದರ್ಭದಲ್ಲಿ ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ವೈಷ್ಣವಿ ಆರ್. ಪಾಟೀಲ್, ರಾಜಶೇಖರ ಪಾಟೀಲ್, ವೀರೇಶ್ ಆರ್.ಪಾಟೀಲ್, ಗ್ರಾಮಪಂಚಾಯತ್ ಅಧ್ಯಕ್ಷ ಸಿದ್ದು ಅಡಕಾಯಿ, ಚಿಟಗುಪ್ಪ ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್, ಉಪಾಧ್ಯಕ್ಷ ನಸೀರ್ ಖಾನ, ಅಶೋಕ ಸ್ವಾಮಿ,

ಬಾಬಾ ಆರ್.ಸಿ.ಸಿ., ಮುಜಾಫರ್ ಪಟೇಲ್, ರಾಜದೀಪ್ ಜಾಬಾ, ವಿಶಾಲ ಬೋರಳೆ, ಮಹಮ್ಮದ್ ಶರೀಫ್, ಸುರೇಶ್ ಚೌದ್ರಿ,


ಬಾಬುರೆಡ್ಡಿ, ಮೊಯಿಜೋದ್ದಿನ ಬಾರುದವಾಲೆ, ವೀರೇಶ್ ತುಗಾಂವ, ಬಸಯ್ಯ ಡಿಗ್ರಿ, ಹಣಮಂತಹಳ್ಳಿ, ಪ್ರಭು ತಂಗಾ, ಪ್ರಭು ತುಗಾಂವ ಸೇರಿದಂತೆ

ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

## ನ.2 ರಂದು ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನ ಗ್ಯಾರಂಟಿ: ವಿಜಯೇಂದ್ರ

ಬೆಂಗಳೂರು:ಅ.21:ನವೆಂಬರ್ 2 ರಂದು ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನ ನಡದೇ ನಡೆಯುತ್ತದೆ ಅಂತ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು. ಪ್ರಿಯಾಂಕ್ ಖರ್ಗೆಗೆ ಆರ್‌ಎಸ್‌ಎಸ್ ಟೀಕೆ ಮಾಡೋ ದುರ್ಬುದ್ಧಿ ಯಾಕೆ ಬಂದಿದೆಯೋ ಗೊತ್ತಿಲ್ಲ. ಆರ್‌ಎಸ್‌ಎಸ್ ಟೀಕೆ ಮಾಡ್ತಿರೋದು ಪ್ರಚಾರಕ್ಕೋ ಅಥವಾ ಸಿಎಂ ಕುರ್ಚಿಗೆ ಟವಲ್ ಹಾಕೋಕೆ ಗೊತ್ತಿಲ್ಲ. ಮಲ್ಲಿಕಾರ್ಜುನ ಖರ್ಗೆ ಹೇಳಿದ ಹಾಗೆ ಪ್ರಿಯಾಂಕ್ ಖರ್ಗೆ ಏಕಾಂಗಿ ಆಗಿದ್ದಾರೆ. ಗಾಂಧಿ ಕುಟುಂಬದಿಂದಲೇ ಆರ್‌ಎಸ್‌ಎಸ್ ಮಣಿಸೋಕೆ ಆಗಲಿಲ್ಲ. ಇಂತಹ ಹೇಳಿಕೆ ನಿತ್ಯ ಕೊಡೋ ಮೂಲಕ ವಾಸ್ತವಿಕ ಸತ್ಯ ಮರೆ ಮಾಚೋ ಕೆಲಸ ಕಾಂಗ್ರೆಸ್ ಮಾಡ್ತಿದೆ. ಆಡಳಿತ ಪಕ್ಷದ ವೈಫಲ್ಯ ಮುಚ್ಚಿಕೊಳ್ಳೋಕೆ



2ನೇ ಪುಟನೋಡಿ

**ರಿಷಭ್ ಪಂತ್: ದಕ್ಷಿಣ ಆಫ್ರಿಕಾ ಎ ವಿರುದ್ಧದ ರೆಡ್-ಬಾಲ್ ಸರಣಿಗೆ ಭಾರತ ಎ ತಂಡದ ನಾಯಕ**

# ಒಂದನೇಪುಟದಿಂದ

## ಅನೈತಿಕ ಪೊಲೀಸ್‌ಗಿರಿಗೆ ಕಡಿವಾಣ:ಸಿಎಂ

ಈಸಂದರ್ಭದಲ್ಲಿಗೃಹಸಚಿವರಾದಡಾ.ಜಿ.ಪರಮೇಶ್ವರ,ಮುಖ್ಯಮಂತ್ರಿಗಳ ರಾಜಕೀಯಕಾರ್ಯದರ್ಶಿ ನಸೀರ್ ಅಹಮ್ಮದ್, ಕರ್ನಾಟಕ ಪೊಲೀಸ್ ಮಹಾ ನಿರ್ದೇಶಕರಾದ ಅಲೋಕ್ ಮೋಹನ್, ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ತುಷಾರ್ ಗಿರಿನಾಥ್ ಸೇರಿದಂತೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## 53 ಸಾವಿರ ರೂ. ಗಾಂಜಾ ಜಪ್ತಿ

ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ಎಸ್‌ಪಿ ಮಹೇಶ್ ಮೇಘಣ್ಣನವರ್, ಆಳಂದ ಡಿವೈಎಸ್‌ಪಿ ತಮ್ಮಾರಾಯ ಪಾಟೀಲ ಅವರ ಮಾರ್ಗದರ್ಶನದಲ್ಲಿ ಪಿಐ ಶರಣಬಸಪ್ಪಕೋಡ್ಲಾ, ಸಿಬ್ಬಂದಿಗಳಾದಗಣಪತರಾವಘಂಟೆ, ಮಹಿಬೂಬ್ ಶೇಖ್, ಶೇಖರ್, ಜಾಕೀರ್, ಸಿದ್ದರಾಮ, ವೆಂಕಟೇಶ್, ಮೌಲಾಲಿ ಅವರು ದಾಳಿ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ.

ತುಳಜಾಪುರ ತಾಲ್ಲೂಕಿನ ಕುನಸಾವಳಗಿ ಗ್ರಾಮದ ಅರ್ಜುನ ತಂದೆ ವಿಶ್ವನಾಥ ಸಿಂದೆ (45) ಮತ್ತು ಹೆಬ್ಬಳಿ ಗ್ರಾಮದ ಜೀವನ್ ತಂದೆ ವಿಶ್ವನಾಥ ದೇಡೆ (25) ಎಂಬುವವರನ್ನು ಬಂಧಿಸಿ 53 ಸಾವಿರ ರೂಪಾಯಿ ಮೌಲ್ಯದ 503 ಗ್ರಾಂ.ಗಾಂಜಾ ವಶಪಡಿಸಿಕೊಂಡಿದ್ದಾರೆ.

ಅನಧಿಕೃತವಾಗಿಗಾಂಜಾಮಾರಾಟಮಾಡುತ್ತಿದ್ದಇಬ್ಬರುಆರೋಪಿಗಳನ್ನು ಬಂಧಿಸುವಲ್ಲಿಯಶಸ್ವಿಯಾಗಿರುವಪೊಲೀಸ್ ಅಧಿಕಾರಿಗಳುಮತ್ತುಸಿಬ್ಬಂದಿ ಕಾರ್ಯವನ್ನು ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

## ತಮ್ಮ ಪ್ರಥಮಾದ್ಯತೆ:ವೆಂಕಟ ಸಿಂಗ್

2ನೇ ಪುಟನೋಡಿ ಸಿ.ಎ.ಸೈಟ್ ಲಭ್ಯವಿರುವುದರಿಂದನಗರಾಭಿವೃದ್ಧಿ ಪ್ರಾಧಿಕಾರವನ್ನು ಸಂಪರ್ಕಿಸಿ ನಿವೇಶನ ಪಡೆದು ಸ್ವಂತ ಕಟ್ಟಡ ಹೊಂದಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಜಿಲ್ಲಾವಾರು ಕಾರ್ಯಾಗಾರ: ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ಹಲವು ಅಧಿಕಾರಿಗಳು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಹೀಗಾಗಿ ಅನಗತ್ಯ ಅರ್ಜಿ ವಲೇವಾರಿ ಮಾಡದೆ ಹಾಗೆ ಇಟ್ಟುಕೊಂಡಿದ್ದರಿಂದ ಮಲ್ಮವಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಅರ್ಜಿ ಸಲ್ಲಿಸಿದ 30 ದಿನದೊಳಗೆ ಅರ್ಜಿದಾರನಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾಹಿತಿ ನೀಡದಿದ್ದಾಗ ಅರ್ಜಿದಾರ ಪ್ರಥಮ ಮೇಲ್ಮನವಿ ಪ್ರಾಧಿಕಾರದ ಮುಂದೆ ಹೋಗುತ್ತಾನೆ. ಅಲ್ಲಿಯೂ ಅವರಿಗೆ ಸಮರ್ಪಕ ಉತ್ತರ ಸಿಗದಿದ್ದಾಗ ಆಯೋಗದ ಕದ ತಟ್ಟುತ್ತಾರೆ. ಹೀಗಾಗಿ ಕಲಬುರಗಿ ಪೀಠಕ್ಕೆ ಒಳಪಡುವ ಕಲಬುರಗಿ ವಿಭಾಗದ ಏಳು ಜಿಲ್ಲೆಗಳ ಅಧಿಕಾರಿಗಳಿಗೆ ಕಾಯ್ದೆ ಬಗ್ಗೆ ಸಮರ್ಪಕ ಮಾಹಿತಿ ನೀಡಲು ಜಿಲ್ಲಾ ಮಟ್ಟದಲ್ಲಿ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗಾರ ಆಯೋಜಿಸಲಾಗುವುದು ಎಂದು ಆಯುಕ್ತ ವೆಂಕಟ ಸಿಂಗ್ ತಿಳಿಸಿದರು

## ಕರ್ನಲ್ ಶರಣಪ್ಪ ಸಿಕೆನಪುರೆ

ಪ್ರತಿ ವರ್ಷ ಸಾವಿರಾರು ಪೊಲೀಸರು ಕರ್ತವ್ಯದ

ಸಮಯದಲ್ಲಿ ಹುತಾತ್ಮರಾಗುತ್ತಾರೆ ಅವರ ಸ್ಮರಣೆಯನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸಬೇಡಿ. ಪೊಲೀಸ್ ಕರ್ತವ್ಯ ನಿಷ್ಠೆಗೆ ಅವರ ಕುಟುಂಬ ಸದಸ್ಯರ ಸಹಕಾರ ಸಾಕ್ಷಿದೆ. ಪೊಲೀಸ್ ಹುತಾತ್ಮರ ಮಕ್ಕಳಿಗೆ ತಮ್ಮ ಶಾಲೆಯಲ್ಲಿ ಕಡಿಮೆ ಶುಲ್ಕದಲ್ಲಿ ಶಿಕ್ಷಣ ನೀಡಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿ ಪ್ರದೀಪ್ ಗುಂಟಿ ಮಾತನಾಡಿ, 1959 ರ ಅಕ್ಟೋಬರ್ 21 ರಂದು ಲಡಾಕ್ ಪ್ರದೇಶದಲ್ಲಿ ಎಸ್.ಐ ಕರಂ ಸಿಂಗ್ ನೇತೃತ್ವದ 21 ಜನ ಕೇಂದ್ರ ಪೊಲೀಸ್ ಮೀಸಲು ಪಡೆಯ ಸಿಬ್ಬಂದಿಗಳ ತಂಡ ಗಸ್ತು ತಿರುಗುವ ಸಂದರ್ಭದಲ್ಲಿ ಚೀನಾ ಸೈನ್ಯ ಏಕಾಏಕಿ ದಾಳಿ ನಡೆಸಿತು ಈ ಸಮಯದಲ್ಲಿ ವೀರಾವೇಶದಿಂದ ಹೋರಾಡಿ ನಮ್ಮ 10 ಜನ ಪೊಲೀಸ್ ಸಿಬ್ಬಂದಿಗಳು ಮಡಿದರು ಹಾಗೂ 11 ಜನ ಒತ್ತೆಯಾಳಾದರು, ಅವರ ತ್ಯಾಗ ಬಲಿದಾನದ ಸಂಕೇತವಾಗಿ ಪೊಲೀಸ್ ಹುತಾತ್ಮರ ಆಚರಣೆ ಮಾಡಲಾಗುತ್ತಿದೆ ಎಂದರು. ಇದೇ ಸಮಯದಲ್ಲಿ ಅವರ ಕಳೆದ ಒಂದು ವರ್ಷದಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಹುತಾತ್ಮರಾದ ಪೊಲೀಸರ ಹೆಸರುಗಳನ್ನೂ ವಾಚಿಸಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಅಧೀಕ್ಷಕರು ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರಿಂದ ಹಾಗೂ ಇತರೆ ಪೊಲೀಸ್ ಅಧಿಕಾರಿ ಸಿಬ್ಬಂದಿಗಳು ಮತ್ತು ಗಣ್ಯರಿಂದ ಹುತಾತ್ಮ ಸ್ಮಾರಕಕ್ಕೆ ಹೂದಂಡೆ(ರೀಥ) ಸಮರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ಜಿಲ್ಲಾ ಶಸ್ತ್ರ ಚಿಕಿತ್ಸಕ ಚಂದ್ರಕಾಂತ್ ಗುದಗೆ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಪೂಜಾರಿ, ಡಿವೈಎಸ್ಪಿ ಶಿವನಗೌಡ ಪಾಟೀಲ್, ಭಾಲ್ಕಿ ಡಿಎಸ್ಪಿ ಶಿವಾನಂದ ಪವಾಡಶೆಟ್ಟಿ ಇತರೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು, ನಗರದ ಗಣ್ಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮುಂಚೂಣಿಯಲ್ಲಿ: ಸಚಿವ ಕೆ.ವೆಂಕಟೇಶ್

ಮಾದರಿಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಕೆಎಂಎಫ್ ಮುಂಚಿತ ಸಿದ್ಧತೆ ಕೈಗೊಂಡಿತ್ತು. 2024ರ ದಸರಾ ಮತ್ತು ದೀಪಾವಳಿ ಹಬ್ಬದ ಅವಧಿಯಲ್ಲಿ ಒಟ್ಟು 725 ಮೆಟ್ರಿಕ್ ಟನ್ ಸಿಹಿ ಉತ್ಪನ್ನಗಳನ್ನು ಮಾರಾಟ ಮಾಡಿ ರೂ. 33.48 ಕೋಟಿ ವಹಿವಾಟು ದಾಖಲಿಸಲಾಗಿತ್ತು. ಈ ಬಾರಿ 2025ರ ಹಬ್ಬದ ಅವಧಿಗೆ ಹೆಚ್ಚುವರಿ ಬೇಡಿಕೆಯನ್ನು ಪರಿಗಣಿಸಿ, ಸುಮಾರು ಎರಡು ತಿಂಗಳುಗಳ ಮುಂಚಿತವಾಗಿ ಎಲ್ಲ ಸದಸ್ಯ ಹಾಲು ಒಕ್ಕೂಟಗಳ ಸಹಕಾರದೊಂದಿಗೆ ನಿಖರ ಯೋಜನೆ ರೂಪಿಸಿ 1000 ಮೆಟ್ರಿಕ್ ಟನ್ ಮಾರಾಟ ಗುರಿ ನಿಗಿದಪಡಿಸಲಾಯಿತು. ಸದರಿ ಗುರಿಯನ್ನು ಮೀರಿ ಈ ವರ್ಷ ಕೆಎಂಎಫ್ ಮತ್ತು ಸದಸ್ಯ ಹಾಲು ಒಕ್ಕೂಟಗಳು ಒಟ್ಟಾಗಿ 1100 ಮೆಟ್ರಿಕ್ ಟನ್ ಸಿಹಿ ಉತ್ಪನ್ನಗಳನ್ನು ಮಾರಾಟ ಮಾಡಿದ್ದು, ಒಟ್ಟಾರೆ ರೂ. 46.00 ಕೋಟಿಗಳ ದಾಖಲೆಯ ವಹಿವಾಟು ಸಾಧಿಸುವ ಮೂಲಕ ಒಂದು ಮಹತ್ವದ ಮೈಲುಗಲ್ಲು ನಿರ್ಮಿಸಲಾಗಿದೆ. ಕಳೆದ ಸಾಲಿಗೆ ಹೋಲಿಕೆ ಮಾಡಿದಾಗ ಶೇ. 38 ರಷ್ಟು ವಹಿವಾಟು ಪ್ರಗತಿಯಾಗಿದ್ದು, ಇದು ಕೆ.ಎಂ.ಎಫ್ ಇತಿಹಾಸದಲ್ಲಿಯೇ ಸರ್ವಕಾಲಿಕ ದಾಖಲೆಯಾಗಿರುತ್ತದೆ.

ಈ ಸಾಧನೆ ನಂದಿನಿ ಬ್ರಾಂಡ್ ನ ಗುಣಮಟ್ಟ ಶುದ್ಧತೆ ಮತ್ತು ಗ್ರಾಹಕರ ವಿಶ್ವಾಸದ ಪ್ರತಿಫಲವಾಗಿದ್ದು, ರಾಜ್ಯದ ಹಾಲು ಉತ್ಪಾದಕರ ಶ್ರಮ ಮತ್ತು ಸಹಕಾರಿ ಬಲದ ದೃಢತೆಗೂ ಸಾಕ್ಷಿಯಾಗಿದೆ ಎಂದು ಸಚಿವರು ತಿಳಿಸಿದರು.

## ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್

2ನೇ ಪುಟನೋಡಿ ಗೌರವವನ್ನು ಸಲ್ಲಿಸೋಣ ಎಂದು ತಿಳಿಸಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಮಾತನಾಡಿ, ಪ್ರತಿವರ್ಷ ಅಕ್ಟೋಬರ್ 21 ಪೋಲಿಸ್ ಹುತಾತ್ಮರ ದಿನ ಈ ದಿನ ನಮ್ಮ ಇಲಾಖೆಗೆ ಒಂದು ಕಡೆ ದು:ಖದ ದಿನವಾದರೆ ಜೊತೆಗೆ ಹೆಮ್ಮೆಯ ದಿನವು ಆಗಿದೆ ಎಂದರು.

1959 ಅಕ್ಟೋಬರ್ 21 ರಂದು ಭಾರತ ದೇಶದ ಉತ್ತರ ಗಡಿಯ ಲಡಾಕ್‌ನಲ್ಲಿ 10 ಜನ ವೀರ ಭಾರತಿಯ ಪೊಲೀಸರು ತಮಗಿಂತಲೂ ಹೆಚ್ಚು ಸಂಖ್ಯೆಯಲ್ಲಿದ್ದ ಮತ್ತು ಆಧುನಿಕ ಶಾಸ್ತ್ರಾಸ್ತ್ರಗಳನ್ನು ಹೊಂದಿದ್ದ. ಚೀನಾ ದೇಶದ ಸೈನಿಕರೊಂದಿಗೆ ತಮ್ಮ ಪ್ರಾಣವನ್ನು ಪಣವಾಗಿಟ್ಟು ಹೋರಾಡಿ ದೇಶಕ್ಕಾಗಿ ಪ್ರಾಣಾರ್ಪಣೆಯನ್ನು ಮಾಡಿದ್ದಾರೆ. 2024 – 2025 ನೇ ಸಾಲಿನಲ್ಲಿ ವಿವಿಧ ರಾಜ್ಯ ಮತ್ತು ಕೇಂದ್ರಿಯ ಪೋಲಿಸ್ ಪಡೆಗಳಲ್ಲಿ ಹುತಾತ್ಮರಾದ 191 ಪೋಲಿಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಹೆಸರನ್ನು ಸ್ಮರಿಸುವ ಭಾಗ್ಯ ನನ್ನದಾಗಿದೆ ಎಂದು ಅವರು ಹೇಳಿದರು.

ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರು ಅಧ್ಯಕ್ಷತೆ ವಹಿಸಿದ್ದರು.

ಕರ್ತವ್ಯ ನಿರತ ಪೋಲಿಸ್ ಅಧಿಕಾರಿಗಳಿಗೆ ಗೌರವ ಸಲ್ಲಿಸಲು ಪೋಲಿಸ್ ಹುತಾತ್ಮರ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಿ, ಕವಾಯತು ತಂಡದಿಂದ ಮೂರುಸುತ್ತು ಗಾಳಿಯಲ್ಲಿ ಗುಂಡುಗಳನ್ನು ಹಾರಿಸಿ ಪೊಲೀಸ್ ಬ್ಯಾಂಡನಿಂದ ರಾಷ್ಟ್ರಗೀತೆಯನ್ನು ನೆರವೇರಿಸಿ ಗೌರವ ಸಲ್ಲಿಸಲಾಯಿತು.

## ಗ್ಯಾರಂಟಿ: ವಿಜಯೇಂದ್ರ

ಆರ್‌ಎಸ್‌ಎಸ್ ಟೀಕೆ ಮಾಡ್ತಿದ್ದಾರೆ ಅಂತ ಕಿಡಿಕಾರಿದರು.

ಚಿತ್ತಾಪುರದಲ್ಲಿ 2ನೇ ತಾರೀಖು ಆರ್‌ಎಸ್‌ಎಸ್ ಪಥಸಂಚಲನ ನಡೆದೇ ನಡೆಯುತ್ತೆ. ಹೈಕೋರ್ಟ್ ಕೂಡ ಹೇಳಿದೆ. ರಾಜ್ಯದ ಎಲ್ಲಾ ಕ್ಷೇತ್ರದಲ್ಲಿ ಪಥ ಸಂಚಲನ ಆಗ್ತಿದೆ. ಹಾಗೇ ಚಿತ್ತಾಪುರದಲ್ಲಿ ನಡೆಯುತ್ತದೆ. 2ನೇ ಪುಟನೋಡಿ

ಪ್ರಿಯಾಂಗ್ ಖರ್ಗೆ ಹೀಗೆ ಟೀಕೆ ಮಾಡಿ ಆರ್‌ಎಸ್‌ಎಸ್ ಅವಹೇಳನ ಮಾಡೋದು ಸರಿಯಲ್ಲ. ಆರ್‌ಎಸ್‌ಎಸ್ ಇಂತಹ ಅನೇಕ ಅಗ್ನಿ ಪರೀಕ್ಷೆ ಎದುರಿಸಿದೆ. ಆರ್‌ಎಸ್‌ಎಸ್ ಯಾವುದೇ ವಿಷಯಕ್ಕೆ ಪ್ರತಿಕ್ರಿಯೆ ನೀಡದೇ ಸಮಾಜಸೇವೆ ಕೆಲಸ ಮುಂದುವರೆಸಿಕೊಂಡು ಹೋಗ್ತಿದೆ ಅಂತ ತಿಳಿಸಿದರು.

ಬಿಜೆಪಿ ಅವರು ಸೀಳು ನಾಯಿಗಳು ಎಂಬ ಪ್ರಿಯಾಂಕ್ ಖರ್ಗೆ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಪ್ರಿಯಾಂಕ್ ಖರ್ಗೆ ಅವರ ಅಪ್ರಬುದ್ಧ ಹೇಳಿಕೆಗೆ ನಾನು ಪ್ರತಿಕ್ರಿಯೆ ಕೊಡಲ್ಲ. ಪ್ರಿಯಾಂಕ್ ಖರ್ಗೆ ಅವರೇ ಕೆಲಸಕ್ಕೆ ಬಾರದನ್ನ ಮಾತಾಡೋದು ಬಿಡಿ. ನಿಮ್ಮ ಕುಟುಂಬ 40–50 ವರ್ಷಗಳ ಕಾಲ ರಾಜಕೀಯದಲ್ಲಿ ಹಿಡಿತ ಇಟ್ಟುಕೊಂಡು ಬಂದಿದೆ. ನಿಮ್ಮ ಅಧಿಕಾರದಲ್ಲಿ ಕಲಬುರಗಿ ಏನಾಗಿದೆ ಮೊದಲು ಹೇಳಿ? ಶಿಕ್ಷಣದಲ್ಲಿ ಎಷ್ಟನೇ ಸ್ಥಾನದಲ್ಲಿ ಇದೆ ಮೊದಲು ಹೇಳಿ? ಅವರ ಜಿಲ್ಲೆ ಏನ್ ಅಭಿವೃದ್ಧಿ ಆಗಿದೆ ಮೊದಲು ಪ್ರಿಯಾಂಕ್ ಖರ್ಗೆ ನೋಡಲಿ. ಬಿಜೆಪಿ ಅವಧಿಯಲ್ಲಿ ಕಲಬುರ್ಗಿಗೆ ಎಷ್ಟು ಹಣ ಬಿಡುಗಡೆ ಆಗಿತ್ತು. ಕಾಂಗ್ರೆಸ್ ಅವಧಿಯಲ್ಲಿ ಎಷ್ಟು ಹಣ ಕೊಟ್ಟಿದ್ದಾರೆ? ಮೊದಲು ಪ್ರಿಯಾಂಕ್ ಖರ್ಗೆ ಹೇಳಲಿ ಅಂತ ಪ್ರಿಯಾಂಕ್ ವಿರುದ್ಧ ವಿಜಯೇಂದ್ರ ಕಿಡಿಕಾರಿದರು.

## ರಾಜ್ಯದಿಂದ ಹಣ ಹೋಗಿದೆ: ರಾ.ರೆಡ್ಡಿ

ಸುಳ್ಳಿನ ಕಾರ್ಖಾನೆ ಮತ್ತೆ ಓವರ್‌ಟೈಮ್ ಕೆಲಸ ಮಾಡುತ್ತಿದೆ. ಬಿಹಾರ ಚುನಾವಣೆಗೆ ಕಾಂಗ್ರೆಸ್ ಸರ್ಕಾರ ಹಣ ನೀಡುತ್ತಿದೆ ಎಂಬ ನಿಮ್ಮ ಕಪೋಲಕಲ್ಪಿತ ಆರೋಪ ಹಾಸ್ಯಾಸ್ಪದ ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿಯ ಸುಳ್ಳಿನ ಸರಮಾಲೆಗೆ ಕೊನೆಯೇ ಇಲ್ಲವೇ. ಚುನಾವಣೆಗೆ ಅಕ್ರಮ ಭ್ರಷ್ಟಾಚಾರದ ಹಣವನ್ನು ಬಳಸುವುದು ನಿಮ್ಮ ಜಾಯಮಾನ, ಕಾಂಗ್ರೆಸ್‌ನದ್ದಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ದೇಶಕ್ಕೆ ನೀಡಿದ ಕೊಡುಗೆ ಮತ್ತು ಜನಪರ ಕೆಲಸಗಳಿಂದ ಕಾಂಗ್ರೆಸ್ ಪಕ್ಷ ಇಂದಿಗೂ ಸದೃಢವಾಗಿದೆ. ನಿಮ್ಮದೇ ಆಡಳಿತದ ಕರಾಳ ಇತಿಹಾಸ ನೋಡಿ ಎಂದು ಹೇಳಿದ್ದಾರೆ.

2008–2013 ಮತ್ತು 2019–2023 ಅವಧಿಗಳಲ್ಲಿ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವಿತ್ತು. ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ್ ಶೆಟ್ಟರ್ ಮತ್ತು ಬಸವರಾಜ ಬೊಮ್ಮಾಯಿ ಕಾಲದಲ್ಲಿ ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಚುನಾವಣೆಗೆ ಕರ್ನಾಟಕದ ಸಂಪತ್ತನ್ನು ಚುನಾವಣೆಗಳಿಗೆ ಹಂಚಿದಿದ್ದೀರಾ ಈ ಬಗ್ಗೆ ರಾಜ್ಯದ ಜನತೆಯ ಮುಂದೆ ಉತ್ತರಿಸುವ ಧೈರ್ಯ ನಿಮಗಿದೆಯೇ ಎಂದು ಪ್ರಶ್ನಿಸಿದ್ದಾರೆ.

ಹಣದ ಹೊಳೆ ಹರಿಸಿ, ಶಾಸಕರನ್ನು ಕುದುರೆಗಳಂತೆ ಖರೀದಿಸಿ ಪ್ರಜಾಪ್ರಭುತ್ವವನ್ನೇ ಕಗ್ಗೊಲೆ ಮಾಡಿದ 'ಆಪರೇಷನ್ ಕಮಲ'ದ ಪಿತಾಮಹರು ನೀವು ಎನ್ನುವುದು ರಾಜ್ಯದ ಮೂಲೆ ಮೂಲೆಯಲ್ಲಿರುವ ಸಾಮಾನ್ಯ ಪ್ರಜೆಗೂ ತಿಳಿದಿದೆ. ಭ್ರಷ್ಟಾಚಾರದ ಗಂಗೋತ್ರಿಯಾದ ನೀವು, ಶುದ್ಧ ಹಸ್ತರೆಂದು ಬಿಂಬಿಸಿಕೊಳ್ಳಲು ಹೊರಟಿರುವುದು ಶತಮಾನದ ಅತಿದೊಡ್ಡ ಜೋಕ್ ಎಂದಿದ್ದಾರೆ.

ಅಧಿಕಾರಕ್ಕಾಗಿ ನೀವು ಖರೀದಿಸಿದ ಕ್ರಿಮಿನಲ್ ಹಿನ್ನೆಲೆಯ ಶಾಸಕರನ್ನು ಕರ್ನಾಟಕ ಎಂದಿಗೂ ಮರೆಯುವುದಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯ ಗುತ್ತಿಗೆದಾರರ ಸಂಘ ಶೇಕಡಾ '40 ರಷ್ಟು ಕಮಿಷನ್' ಆರೋಪ ಮಾಡಿ ಪ್ರಧಾನಿ ನರೇಂದ್ರ ಮೋದಿ ಪತ್ರ ಬರೆದು ನಿಮ್ಮ ಸರ್ಕಾರದ ಭ್ರಷ್ಟಾಚಾರವನ್ನು ಜಗಜ್ಜಾಹೀರು ಮಾಡಿತ್ತು. ಆ ಕಮಿಷನ್ ಹಣ ಯಾವ ಯಾವ ರಾಜ್ಯಗಳಿಗೆ ಹೋಯಿತು ಎಂದು ಜನತೆಗೆ ಈಗಲಾದರೂ ಲೆಕ್ಕ ಕೊಡುವಿರ ಎಂದಿದ್ದಾರೆ.

ರಾಜ್ಯ ಸರ್ಕಾರ ಜಾರಿ ಮಾಡಿರುವ 'ಗ್ಯಾರಂಟಿ'ಗಳ ಮೂಲಕ ರಾಜ್ಯದ ಬಡವರ ಖಾತೆಗೆ ನೇರವಾಗಿ ಹಣ ಜಮೆ ಮಾಡುತ್ತಿದೆ. ನಿಮ್ಮಂತೆ ಚುನಾವಣಾ ಬಾಂಡ್‌ಗಳ ಹೆಸರಿನಲ್ಲಿ ಕಪ್ಪು ಹಣವನ್ನು ಬಿಳಿ ಮಾಡುವ ಚಾಳಿ ನಮಗಿಲ್ಲ ಎಂಬುದಾಗಿ ಗುಡುಗಿದ್ದಾರೆ.

# ಕತ್ತಿ ವಿರುದ್ಧ ಚಿತ್ತಾಪುರದಲ್ಲಿ ಪ್ರತಿಭಟನೆ

ಚಿತ್ತಾಪುರ, ಅ.21– ವಾಲ್ಮೀಕಿ ಸಮಾಜದವರನ್ನು ಅಶ್ಲೀಲವಾಗಿ ನಿಂದಿಸಿದ ಬೆಳಗಾವಿ ಮಾಜಿ ಸಂಸದ ರಮೇಶ ಕತ್ತಿ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಮಂಗಳವಾರ ತಾಲ್ಲೂಕು ಮಹರ್ಷಿ ವಾಲ್ಮೀಕಿ ಸಮಾಜದ ವತಿಯಿಂದ ತಹಸಿಲ್ದಾರ್ ನಾಗಯ್ಯ ಹಿರೇಮಠ ಹಾಗೂ ಪಿಎಸ್‌ಐ ಮಂಜುನಾಥರೆಡ್ಡಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಪ್ರತ್ಯೇಕವಾಗಿ ಪ್ರತಿಭಟನಾ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಮಾಜದ ತಾಲ್ಲೂಕು ಯುವ ಘಟಕದ ಅಧ್ಯಕ್ಷ ರಾಜು ದೊರೆ ಅವರು ಮಾತನಾಡಿ, ವಾಲ್ಮೀಕಿ ಸಮಾಜದವರನ್ನು ಅಶ್ಲೀಲವಾಗಿ ನಿಂದಿಸಿದ ಬೆಳಗಾವಿ ಮಾಜಿ ಸಂಸದ ರಮೇಶ ಕತ್ತಿ ವಿರುದ್ಧ ದಲಿತ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು. ಬೆಳಗಾವಿಯ ಜಿಲ್ಲಾ ಸಹಕಾರ ಬ್ಯಾಂಕ್ ಚುನಾವಣಾ ಮತದಾನ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ರಮೇಶ್ ಕತ್ತಿ ಅವರು ವಾಲ್ಮೀಕಿ ಸಮುದಾಯದವರನ್ನು ಕುರಿತು ಅಶ್ಲೀಲ ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿ ಅವಮಾನಿಸಿದ್ದಾರೆ. ಇದರಿಂದ ರಾಜ್ಯದ 75 ಲಕ್ಷ ವಾಲ್ಮೀಕಿ ಸಮುದಾಯದವರಿಗೆ ತೀವ್ರ ನೋವುಂಟಾಗಿದೆ. ನಮ್ಮ ಭಾವನೆಗಳಿಗೆ ದಕ್ಕೆ ತಂದಿದ್ದಾರೆ. ಜಿಲ್ಲೆಯ ಬೇರೆ ಬೇರೆ ಸಮುದಾಯಗಳ ಮಧ್ಯೆ ವಿಷ ಬೀಜ ಬಿತ್ತಿ ಘರ್ಷಣೆ ಉಂಟು ಮಾಡುತ್ತಿದ್ದಾರೆ. ದಲಿತ ಸಮುದಾಯದ ಭಾವನೆಗಳಿಗೆ ದಕ್ಕೆ ತರಿದಿರುವ ಕತ್ತಿ ಅವರ ಮೇಲೆ ದೌರ್ಜನ್ಯ ತಡೆ ಕಾಯ್ದೆ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕೆಂದು ಅವರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮಹರ್ಷಿ ವಾಲ್ಮೀಕಿ ಸಮಾಜದ ತಾಲ್ಲೂಕು ಅಧ್ಯಕ್ಷ ಭೀಮರಾಯ ದೊರೆ, ಪ್ರಧಾನ ಕಾರ್ಯದರ್ಶಿ ಹುಸನಪ್ಪ ಲಾಡ್ಲಾಪುರ, ಪ್ರಮುಖರಾದ ಮಹಾದೇವಪ್ಪ ಚೂರಿ, ಸಾಬಣ್ಣ ಮುಸಲಾ, ಭಾಗಪ್ಪ ನಾಯ್ಕೋಡಿ, ಸಾಬಣ್ಣ ಕುಂಬಾರಹಳ್ಳಿ, ಹಣಮಂತ ಗಲಗಿನ್, ಚಂದ್ರುನಾಯ್ಕೋಡಿ, ಮಾನಪ್ಪ ದೊರೆ, ರಾಯಪ್ಪ ದೊರೆ, ರಮೇಶ್ ಕೋರವಾರ್, ರಾಜು ಕಲಬುರಗಿ, ಮರಲಿಗಪ್ಪ ಮಳಗಿ, ದೇವಿಂದ್ರಪ್ಪ ನಾಯಕ, ಶಿವಶರಣ್ಣ ಸುಬೇದಾರ್, ಸಿದ್ದಪ್ಪ ದೊರೆ, ರಮೇಶ್

ನಾಯ್ಕೋಡಿ, ನಾಗಪ್ಪ ಬೊಮ್ಮನಳ್ಳಿ, ಗೋಪಿಕೃಷ್ಣ ಸುಬೇದಾರ್, ಪ್ರೇಮ್ ಸುಬೇದಾರ್, ಶಾಮ್ ಸುಬೇದಾರ್, ಸುಭಾಶ್ಚಂದ್ರ ದೊರೆ, ರಾಮಕೃಷ್ಣ ಸುಬೇದಾರ್, ಸಂಜಯ

ಬುಳಕರ್ ಮುಂತಾದವರು ಪಾಲ್ಗೊಂಡಿದ್ದರು.

# ಡಾ. ಬಸವಲಿಂಗ ಅವಧೂತರ ಅಭಿನಂದನಾ ಗ್ರಂಥ: ಲೇಖನಗಳ ಆಹ್ವಾನ

ಬೀದರ್: ಅ.21: ಜಹೀರಾಬಾದ್ ತಾಲ್ಲೂಕಿನ ಮಲ್ಲಯ್ಯಗಿರಿ, ದೇಗಲಮಡಿ ಮತ್ತು ಬಸವಕಲ್ಯಾಣ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರ 50ನೇ ಜನ್ಮದಿನ ಪ್ರಯುಕ್ತ ಅಭಿನಂದನಾ ಗ್ರಂಥ ಹಿರಿಯ ಸಾಹಿತಿ, ಚಿಂತಕ ಡಾ. ಬಸವರಾಜ ಬಲ್ಲೂರ ಸಂಪಾದಕತ್ವದಲ್ಲಿ ಹೊರ ತರಲು ಅವರ ಶಿಷ್ಯ ಬಳಗ ನಿರ್ಧರಿಸಿದ್ದು, ಲೇಖನಗಳನ್ನು ಆಹ್ವಾನಿಸಿದೆ. ಅವಧೂತರು ಮೂರು ದಶಕಗಳಿಂದ ಕರ್ನಾಟಕ ಹಾಗೂ ನೆರೆ ರಾಜ್ಯಗಳಲ್ಲಿ ಸಮಾಜೋ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ ಪ್ರವಚನಗಳ ಮೂಲಕ ಜನರಲ್ಲಿ ಧಾರ್ಮಿಕ ಪ್ರಜ್ಞೆ, ದೇಶ ಪ್ರೇಮ ಬೆಳೆಸುತ್ತಿದ್ದಾರೆ. ಪಾಲಕರಿಗೆ ಸಂಸ್ಕಾರದ ಮಹತ್ವ ಮನವರಿಕೆ ಮಾಡುತ್ತಿದ್ದಾರೆ. ಭಕ್ತರಿಗೆ ಸನ್ಮಾರ್ಗ ತೋರುತ್ತಿದ್ದಾರೆ.



ಹೀಗಾಗಿ ಅಭಿನಂದನಾ ಗ್ರಂಥದ ಮೂಲಕ ಅವರನ್ನು ಅಭಿನಂದಿಸಲು ನಿರ್ಣಯಿಸಲಾಗಿದೆ ಎಂದು ದೇವೇಂದ್ರ ಕರಂಜೆ ತಿಳಿಸಿದ್ದಾರೆ.

ಶ್ರೀಗಳು ಲೋಕಕಲ್ಯಾಣಕ್ಕಾಗಿ ಕಾಶಿ, ಶ್ರೀಶೈಲ, ಹಿಮಾಲಯ ಪರ್ವತ ಸೇರಿದಂತೆ ದೇಶದ ವಿವಿಧ ಪವಿತ್ರ ಸ್ಥಳಗಳಲ್ಲಿ ಅನುಷ್ಠಾನ ನಡೆಸಿದ್ದಾರೆ.

ಸಾಕಷ್ಟು ಜನರ ಬಾಳಲ್ಲಿ ಹೊಸ ಬೆಳಕು ಮೂಡಿಸಿದ್ದಾರೆ. ದುಶ್ಚಟಗಳ ವಿರುದ್ಧ ಜನಜಾಗೃತಿ ಮೂಡಿಸುತ್ತಿದ್ದಾರೆ. ಸಾಮಾಜಿಕ ಪರಿವರ್ತನೆಗೆ ಅವಿರತ ಶ್ರಮಿಸುತ್ತಿದ್ದಾರೆ. ಅಸಂಖ್ಯಾತ ಭಕ್ತರ ಆರಾಧ್ಯ ದೈವವಾಗಿರುವ ಅವರು ಪ್ರಖರ ವಾಗ್ಮಿಯೂ ಆಗಿದ್ದಾರೆ ಎಂದು ಹೇಳಿದ್ದಾರೆ.

ಅವಧೂತರ ಜೀವನ ಹಾಗೂ ಸಾಧನೆಗಳನ್ನು ಬಲ್ಲ ಸಾಹಿತಿಗಳು, ಬರಹಗಾರರು ಹಾಗೂ ಶಿಷ್ಯರು ನವೆಂಬರ್ ಅಂತ್ಯದೊಳಗೆ ಲೇಖನಗಳನ್ನು ಬರೆದು, ಯುನಿಕೋ???ನಲ್ಲಿ ಟೈಪ್ ಮಾಡಿ, ಇ–ಮೇಲ್ ವಿಳಾಸ karanjedevendra@gmail.com ಗೆ ಕಳುಹಿಸಬಹುದು.

ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9241979444 (ದೇವೇಂದ್ರ ಕರಂಜೆ)


**ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಯವರ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಬೀದರ ಜಿಲ್ಲೆ.**

No: DPI/2025-26/SE0389 Date: 16/10/2025

**ಸಮಗ್ರ ಶಿಕ್ಷಣ ಕರ್ನಾಟಕ, ಯೋಜನೆಯಡಿ ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ಶಾಲೆ ಕೆ.ಜಿ.ಬಿ.ವಿ.ಟೈಪ–4 ಬೀದರ ಜಿಲ್ಲೆಯ ವಸತಿ ಶಾಲೆಗಳಲ್ಲಿ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಅರೆಕಾಲಿಕ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು.**

**ಟೆಂಡರ್ ವೇಳಾ ಪಟ್ಟಿ ಹಾಗೂ ವಿವರಗಳು:–** 1) ಟೆಂಡರ್‌ಗೆ ಇಟ್ಟಿರುವ ಮೊಬಲಗು **ರೂ:14.34 ಲಕ್ಷ,** 2) ಟೆಂಡರ್ ಡಾಕ್ಯುಮೆಂಟ್‌ನ್ನು ವೆಬ್‌ಸೈಟ್ ನಿಂದ ಡೌನಲೋಡ್ ಮಾಡಕೊಳ್ಳಬೇಕಾದ ದಿನಾಂಕ **ದಿ:16–10–2025 ರಿಂದ 06–11–2025. ಸಂಜೆ: 5.00,** 3) ಟೆಂಡರ್ ಬಿಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್ ಸೈಟ್ ಮೂಲಕ) ಸಮಯ **ದಿ:06–11–2025 ಸಮಯ ಸಂಜೆ: 5.00,** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಸಮಯ **ದಿ:07–11–2025 ಸಮಯ ಸಂಜೆ: 5.15,** 5) ಆರ್ಥಿಕ ಬಿಡ್ ಗಳನ್ನು ತೆರೆಯ ಬಹುದಾದ ಸಂಭಾವ್ಯ ದಿನಾಂಕ & ಸಮಯ **ದಿ:10–11–2025 ಸಮಯ ಮು:11.30 ಗಂಟೆ** / ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತಿಳಿಸಲಾಗುವುದು. 6) ಇ.ಎಂ.ಡಿ. ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) **ರೂ: 35850/–,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ **9448999388/ 9480695090,** 8) ಅಂತರ ಜಾಲತಾಣದ ವಿಳಾಸ www.kppp.karnataka.gov.in

**ಸಹಿ/–ಉಪ ನಿರ್ದೇಶಕರು (ಆಡಳಿತ)ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸರ್ವ ಶಿಕ್ಷಣ ಅಭಿಯಾನ, ಬೀದರ ಜಿಲ್ಲೆ.**

ವಾ.ಸಾ.ಸಂ.ಇ/ಬೀದರ/212/ಕೆ.ಎಸ್.ಎಂ.ಸಿ.&ಎ/2025–26


# ಹೋಪ್ ಕ್ಲಿನಿಕ್ 5ನೇ ವಾರ್ಷಿಕೋತ್ಸವ, ಉಚಿತ ಆರೋಗ್ಯ ತಪಾಸಣೆ ಶಿಬಿರ

ಹುಮನಾಬಾದ್: ಅ.21: ಪ್ರತಿಷ್ಠಿತ ಮೇಡಿಕೇರ ಡೈಗ್ನೋಸ್ಟಿಕ್ ಸೆಂಟರ್, ಹಾಗೂ ಹೋಪ್ ಕ್ಲಿನಿಕ್‌ನ 5ನೇ ವಾರ್ಷಿಕೋತ್ಸವದ ಅಂಗವಾಗಿ ನಗರದ ಇದ್ಗಾ ಮೈದಾನ ಹತ್ತಿರದ ಹೋಪ ಕ್ಲಿನಿಕ್‌ನಲ್ಲಿ ಖ್ಯಾತ ವೈದ್ಯರಾದ ಡಾ. ಮುಜ್‌ತಬಾ ಹುಸೇನ್ ಪಟೇಲ್ ಅವರ ನೇತ್ರತ್ವದಲ್ಲಿ ಈಚೆಗೆ ಬ್ರಹತ ಉಚಿತ ಆರೋಗ್ಯ ತಪಾಸಣೆ ಶಿಬಿರ ಜರುಗಿತು.



ಖ್ಯಾತ ತಜ್ಞ ವೈದ್ಯರಾದ ಡಾ. ಮುಜ್‌ತಬಾ ಹುಸೇನ್ ಪಟೇಲ್ ಅವರ ಮಾತನಾಡಿ, ಮೇಡಿಕೇರ ಡೈಗ್ನೋಸ್ಟಿಕ್ ಸೆಂಟರ್ ಹೋಪ್ ಕ್ಲಿನಿಕ್‌ನ 5ನೇ ವಾರ್ಷಿಕೋತ್ಸವದ ಪ್ರಯುಕ್ತ ನಮ್ಮ ಆಸ್ಪತ್ರೆಯಲ್ಲಿ ಬ್ರಹತ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಿದ್ದೇವೆ ಎಂದರು.

ಪ್ರಖ್ಯಾತ ವೈದ್ಯರಾದ ಡಾ. ನಾಜೀಯಾ ಸುಲ್ತಾನ, ಡಾ.ಮೀನಹಜ್ ಹರಸುರಿ, ಡಾ. ಅಕ್ರಮ ಖುರೇಶಿ, ಡಾ.ನುರೇ ಇಲಾಹಿ ಹಾಗೂ ಗುಡಗೆ ಆಸ್ಪತ್ರೆ ವೈದ್ಯರಿಂದ ಹೃದಯ, ಕಿಡ್ನಿ, ಶ್ವಾಸಕೋಶ, ಮೂಳೆಗಳಿಗೆ ಸಂಬಂಧಪಟ್ಟಂತ ಉಚಿತ ಆರೋಗ್ಯ ತಪಾಸಣೆ ಮಾಡಲಾಗಿದೆ. ಒಟ್ಟು ಸುಮಾರು 180 ರಿಂದ 200 ರೋಗಿಗಳ ಬ್ಲಡ್, ಶುಗರ್, ಬಿಪಿ ಮುಂತಾದ ಟೆಸ್ಟ್‌ಗಳನು ಉಚಿತವಾಗಿ ಮಾಡಲಾಗಿದೆ, ಅಲ್ಲದೆ 2ಆ ಇಕೊ ಶೇ 60 ಪ್ರತಿಷತ ರಿಯಾಯತಿದರದಲ್ಲಿ ತಪಾಸಣೆ ಮಾಡಲಾಗಿದೆ ಎಂದು ತಿಳಿಸಿದರು.

ಪ್ರಮುಖವಾಗಿ ದಮ್ಮು, ಅಸ್ತಮ ಸಮಸ್ಯೆ ಉಳ್ಳ ರೋಗಿಗಳಿಗೆ ವೈದ್ಯರು ಸೂಕ್ತ ಚಿಕಿತ್ಸೆ ಹಾಗೂ ಔಷಧಿ ನೀಡಿದ್ದಾರೆ ಎಂದು ಮಾಹಿತಿ ನೀಡದ ಅವರು ಹೋಪ್ ಕ್ಲಿನಿಕ್ ದಿನದ 24 ಗಂಟೆ ಜನರಿಗೆ ಸೇವೆ ನೀಡುತ್ತಿದ್ದು

ಇಲ್ಲಿ ಎಲ್ಲಾ ತರಹದ ಲ್ಯಾಬ್ ಟೆಸ್ಟ್ ಹಾಗೂ ಡೈಗಾಸ್ಟಿಕ್ ಸೆಂಟರ್ ಲಭ್ಯವಿದೆ ಎಂದು ಡಾ.ಮುಜತಬಾ ಹುಸೇನ ಪಟೇಲ ಹೇಳಿದರು.

## ಭವಾನಿ ಕಾಲೋನಿಗೆ ತೆರಳುವ ರಸ್ತೆ ಮಾಡಿಕೊಟ್ಟ ಎನ್ ಎಚ್ 9 ಇಲಾಖೆಯ ಅಧಿಕಾರಿಗಳ ಕಾರ್ಯಕ್ಕೆ ಜನರ ಶ್ಲಾಘನೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್: ಅ.21: ಇಲ್ಲಿನ ಭವಾನಿ ಕಾಲೋನಿಯ ಸಂಪರ್ಕವನ್ನು ಸುಧಾರಿಸಲು ಸ್ಥಳೀಯ ಆಡಳಿತ ಮತ್ತು ಸಂಬಂಧಿತ ಪ್ರಾಧಿಕಾರಿಗಳು ಸೇರಿಕೊಂಡು ಕಾಲೊನಿಗೆ ತೆರಳು ರಸ್ತೆಯನ್ನು ವೆಚ್ಚಕಾರಿಯಾಗಿ ಹಾಗೂ ತ್ವರಿತವಾಗಿ ನಿರ್ಮಿಸಿದ್ದಕ್ಕೆ ಭವಾನಿ ಕಾಲೋನಿ ನಿವಾಸಿಗಳು ಸಂತೋಷ ವ್ಯಕ್ತಪಡಿಸಿ ಎನ್ ಎಚ್ 9 ಅಧಿಕಾರಿಗಳ ಕಾರ್ಯವನ್ನು ಶ್ಲಾಘನೀಯ ಎಂದು ಮೆಚ್ಚಿದ್ದಾರೆ.

ಜನರು ಹೇಳಿರುವಂತೆ, ಈ ರಸ್ತೆ ನಿರ್ಮಾಣದಿಂದ ದೈನಂದಿನ ಪ್ರಯಾಣ, ಸರಕು ಸಾಗಣೆ ಮತ್ತು ತುರ್ತುವಿನ ಸೇವೆಗಳ ಲಭ್ಯತೆಯಲ್ಲಿ ಫಲನಯಕಾರಿ ಸುಧಾರಣೆ ಆಗಿದ್ದು, ಕಾಲೋನಿಯ ವಾಸಿಗಳ ಜೀವನಗಣನೆ ಉತ್ತಮಗೊಳ್ಳಲಿದೆ. ನಿಧಾನ ಬಿಕ್ಕಟ್ಟುಗಳು ಕಡಿಮೆಯಾದು ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರಿಗೆ ಆತುರದ ಪ್ರಯಾಣ ಸುಲಭವಾಗಿದೆ ಎಂಬುದು ಸಹ ನಿವಾಸಿಗಳ ಮನೋಭಾವ.

ಸ್ಥಳೀಯ ಅಧಿಕಾರಿಗಳು ಮತ್ತು ಮಾರ್ಗ ನಿರ್ವಹಣೆ ವಿಭಾಗದ ಸಿಬ್ಬಂದಿಗಳನ್ನು ಕಾರ್ಯಚಟುವಟಿಕೆಗೆ ಗಮನಕೊಟ್ಟು ಕೋರಿಕೊಂಡು, ಜನರು

ಭವಾನಿ ಕಾಲೋನಿಯಲ್ಲಿನ ವಹಿವಾಟು ವೃದ್ಧಿಸಲು ಮತ್ತು ಪ್ರದೇಶದ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಯೋಜನೆಗಳನ್ನು ನಿರೀಕ್ಷಿಸುತ್ತಿರುವುದಾಗಿ ಅನೇಕರು ಹೇಳಿದರು. ಸಾರ್ವಜನಿಕರು ಪ್ರಾಥಮಿಕ ಅಗತ್ಯಗಳ ಮೇಲೆ ಗಮನ ನೀಡಿದ ಅಧಿಕಾರಿಗಳಿಗೆ ಸಾಮಾಜಿಕ ಮಾಧ್ಯಮದಲ್ಲಿ ಮತ್ತು ಮುಖಾಮುಖಿ ಸಭೆಗಳಲ್ಲಿ ಅಭಿನಂದನೆ ಸಲ್ಲಿಸಿದ್ದಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಇಂಧುಧರ, ಸಹಾಯಕ ಇಂಜಿನಿಯರ್ ಗಣಪತಿ ಗಡವಂತಿ. ಹಾಗೂ ಗುತ್ತಿಗೆದಾರರಿಗೊ ಕಾಲೊನಿ ನಿವಾಸಿಗಳು ಅಭಿನಂದಿಸಿದ್ದಾರೆ.

## ಶಾಂತಿ, ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಸೇವೆ ಸ್ಮರಣೀಯ: ಜಿಲ್ಲಾಧಿಕಾರಿ ನಿತೀಶ್ ಕೆ.



ರಾಯಚೂರು ಅ. 21 : ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಗಲಿರುಳು ಶ್ರಮಿಸುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ.

ತುರ್ತು ಸಂದರ್ಭದಲ್ಲಿ ಸಿದ್ಧರಾಗುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಪ್ರಾಣ ತ್ಯಾಗವನ್ನು ನಾವೆಲ್ಲರೂ ಸ್ಮರಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಹೇಳಿದರು.

ಅಕ್ಟೋಬರ್ 21ರ ಮಂಗಳವಾರ ದಂದು ನಗರದ ಜಿಲ್ಲಾ ಪೊಲೀಸ್ ಡಿಎಆರ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿದ್ದರೆ ಮಾತ್ರ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ದೇಶದ ಏಳಿಗೆಗೆ ಕಾನೂನು ಸುವ್ಯವಸ್ಥೆ, ಶಾಂತಿ ಪಾಲನೆ ಭದ್ರ ಬುನಾದಿ ಇದ್ದಂತೆ. ಇಂತಹ ಕೆಲಸವನ್ನು ಕೈಗೊಳ್ಳುವ ವೇಳೆ ಕರ್ತವ್ಯದಲ್ಲಿದ್ದಾಗ ಪ್ರಾಣ ತ್ಯಾಗ ಮಾಡುವ ಪೊಲೀಸ್ ಸಿಬ್ಬಂದಿ ಬಗ್ಗೆ ಸಮಾಜ ಹೆಮ್ಮೆ ಪಡಬೇಕು ಎಂದರು.

ರಾಯಚೂರು ಜಿಲ್ಲೆಯು ಶಾಂತಿ ಸೌಹಾರ್ತಗೆ ಹೆಸರಾಗಿದೆ. ಶಿಕ್ಷಣ, ಆರೋಗ್ಯ ಸೇರಿದಂತೆ ಬೇರೆ ಬೇರೆ ರಂಗಗಳಲ್ಲಿ ಪ್ರಗತಿಯಾಗುತ್ತಿದೆ ಎಂದರು.

ಕೆ.ಕೆ.ಆರ್.ಡಿ.ಬಿ ಅನುದಾನ ಬಳಸಿಕೊಂಡು ಪೊಲೀಸ್ ಇಲಾಖೆಯಲ್ಲಿ ವಿವಿಧ ಕಾಮಗಾರಿಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾಡಿರುವ ಸೇವೆ ಸ್ಮರಣೀಯವಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ಅವರು ಮಾತನಾಡಿ, 2025ರಲ್ಲಿ ರಾಷ್ಟ್ರಮಟ್ಟದಲ್ಲಿ ಕಾನೂನು ಶಾಂತಿ ಪಾಲನೆಯ ಹೋರಾಟದಲ್ಲಿ 191 ಪೊಲೀಸರು ಹಾಗೂ ಕರ್ನಾಟಕದಲ್ಲಿ 9 ಪೊಲೀಸರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಅವರ ಸೇವೆ ಸ್ಮರಿಸೋಣ ಎಂದು ತಿಳಿಸಿದರು. ಹುತಾತ್ಮರಿಗೆ ಗೌರವ: ಜಿಲ್ಲಾ ಪೊಲೀಸ್ ಮುಖ್ಯಾಲಯದ ಆವರಣದಲ್ಲಿ ನಡೆದ ಹುತಾತ್ಮರ ಸ್ಮಾರಕದ ಬಳಿಯಲ್ಲಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಕುಮಾರಸ್ವಾಮಿ, ಜಿ.ಹರೀಶ್ ಅವರು ಹುತಾತ್ಮರಿಗೆ ಗೌರವ ವಂದನೆ ಸಲ್ಲಿಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಪೊಲೀಸ್ ಹುತಾತ್ಮರ ಸ್ಮಾರಕ–ಕ್ಕೆ ಅತಿಥಿಗಳು ಪುಷ್ಪಗುಚ್ಛವಿರಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಪೊಲೀಸ್ ಬ್ಯಾಂಡ್‌ನವರು ಶೋಕಗೀತೆ ನುಡಿಸಿದರು. ನಂತರ ಪೊಲೀಸ್ ಶಸ್ತ್ರಪಡೆಯ ಸಿಬ್ಬಂದಿ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಪೊಲೀಸ್ ಹುತಾತ್ಮರಿಗೆ ಗೌರವ ಸಲ್ಲಿಸಿದರು. ಪೊಲೀಸ್ ಧ್ವಜ ಅರ್ಧಕ್ಕೆ ಇಳಿಸಿ ಎರಡು ನಿಮಿಷ ಮೌನ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಸರ್ಕಾರಿ ನೌಕಕರ ಸಂಘದ ಜಿಲ್ಲಾಧ್ಯಕ್ಷರಾದ

ಕೃಷ್ಣ ಶಾವಂತಗೇರಿ, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಪೊಲೀಸ್ ಇಲಾಖೆಯ ವಿವಿಧ ಅಧಿಕಾರಿ, ಸಿಬ್ಬಂದಿ ಇದ್ದರು.

## ಸಚಿವರಾದ ಎನ್.ಎಸ್.ಬೋಸರಾಜು ರಾಯಚೂರು ಜಿಲ್ಲಾ ಪ್ರವಾಸ

ರಾಯಚೂರು ಅ. 21 : ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು 22ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ ಬೆಳಿಗ್ಗೆ 11 ಗಂಟೆಗೆ ಸಿರವಾರ ಹಾಗೂ ಕವಿತಾಳನಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಸಂಜೆ 4 ಗಂಟೆಗೆ ಕವಿತಾಳದಿಂದ ನಿರ್ಗಮಿಸಿ ಅಲ್ಲಿಂದ ರಾಯಚೂರಿಗೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಯಾದ ವೀರಭದ್ರ ಹಂಚಿನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಯಚೂರು ಜಿಲ್ಲೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಅ 21 : ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಅಕ್ಟೋಬರ್ 22ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 8 ಗಂಟೆಗೆ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದುಕೊಂಡು ಅಲ್ಲಿಂದ 9.30ಕ್ಕೆ ನಿರ್ಗಮಿಸಿ ಬೆಳಿಗ್ಗೆ 10 ಗಂಟೆಗೆ ರಾಯಚೂರು ತಾಲೂಕಿನ ಬಿಚ್ಚಾಲಿ ಗ್ರಾಮಕ್ಕೆ ಆಗಮಿಸಿ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗುವರು. 10.30ಕ್ಕೆ ಬಿಚ್ಚಾಲಿಯಿಂದ ನಿರ್ಗಮಿಸಿ 11 ಗಂಟೆಗೆ ರಾಯಚೂರು ಗ್ರಾಮೀಣ ಪ್ರದೇಶದಲ್ಲಿನ ಶ್ರೀಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಬೆಳಿಗ್ಗೆ 11.30ಕ್ಕೆ ಪಕ್ಷದ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಮಧ್ಯಾಹ್ನ 12.30ಕ್ಕೆ ಪಂಚಮುಖಿಯಿಂದ ನಿರ್ಗಮಿಸಿ ಮಂತ್ರಾಲಯಕ್ಕೆ ತೆರಳುವರು. ಸಂಜೆ 6.55ಕ್ಕೆ ಮಂತ್ರಾಲಯದಿಂದ ರೈಲು ಮಾರ್ಗವಾಗಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಉಪಮುಖ್ಯಮಂತ್ರಿಗಳ ಹೆಚ್ಚುವರಿ ಖಾಸಗಿ ಕಾರ್ಯದರ್ಶಿ ಬಿ.ಎಸ್. ಶ್ರೀಧರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಅಕ್ಟೋಬರ್ ಕೊನೆ ವಾರದಲ್ಲಿ 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ

ರಾಯಚೂರು ಅ 21 : ಇಲ್ಲಿನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಕರ್ನಾಟಕ ಉದ್ಯಮಶಿಲತಾಭಿವೃದ್ಧಿ ಕೇಂದ್ರ (ಸಿಡಾಕ್) ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಲು ಜಿಲ್ಲೆಯ ಆಸಕ್ತ ಪರಿಶಿಷ್ಟ ಜಾತಿಯ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮವನ್ನು 2025 ಅಕ್ಟೋಬರ್ ಕೊನೆ ವಾರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಸ್ವಯಂ ಉದ್ಯಮಗಳ ಬಗ್ಗೆ ಮಾಹಿತಿ, ಉದ್ಯಮಶೀಲತೆ, ಯಶಸ್ವಿ ಉದ್ಯಮಶೀಲರ ಗುಣಲಕ್ಷಣಗಳು, ನಾಯಕತ್ವದ ಗುಣಲಕ್ಷಣಗಳು, ಉದ್ಯಮವನ್ನು ಆಯ್ಕೆಮಾಡುವ ವಿಧಾನ, ವ್ಯಾಪಾರೋದ್ಯಮಗಳ ಅವಕಾಶಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ ಮಾಡುವ ಬಗ್ಗೆ, ಸಾಲ ಮತ್ತು ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳ ಬಗ್ಗೆ, ಲೆಕ್ಕ ಪತ್ರ ನಿರ್ವಹಣೆ. ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವುದು ಹಾಗೂ ಈಗಾಗಲೇ ಸಿಡಾಕ್ ಮುಖಾಂತರ ತರಬೇತಿ ಪಡೆದು ಉದ್ಯಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವ ಉದ್ಯಮಶೀಲರ ಅನುಭವ ಹಂಚಿಕೆ ಮತ್ತು ಸಂಬಂಧಪಟ್ಟ ಇತ್ಯಾದಿ ವಿಷಯಗಳ ಬಗ್ಗೆ ಅನುಭವಿ ಅತಿಥಿ ಬೋಧಕರಿಂದ ಉಪನ್ಯಾಸ / ಮಾಹಿತಿ ನೀಡಲಾಗುವುದು.ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವ 20 ರಿಂದ 45 ವರ್ಷದೊಳಗಿನ ಕನಿಷ್ಠ ಎಸ್‌ಎಸ್‌ಎಲ್‌ಸಿ ಪಾಸ್/ಫೇಲ್ ಆದ ಪರಿಶಿಷ್ಟ ಜಾತಿಯ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಜಂಟಿ ನಿರ್ದೇಶಕರು, ಸಿಡಾಕ್, ಕಟ್ಟಡ ಸಂಖ್ಯೆ : 1–4–156 (ಹಳೆಯ) 1–4–805 (ಹೊಸ), ನಂದೀಶ್ವರ ಗುಡಿ ಹತ್ತಿರ, ನವೀನ್ ಹಾಸ್ಪಿಟಲ್ ಪಕ್ಕದಲ್ಲಿ, ಐ.ಬಿ ರಸ್ತೆ, ರಾಯಚೂರು–584103 ಮೊಬೈಲ್ ಸಂಖ್ಯೆ: 9986600631ಗೆ ಕರೆ ಮಾಡಿ ಅಕ್ಟೋಬರ್ 25ರೊಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಸಿಡಾಕ್ ಜಂಟಿ ನಿರ್ದೇಶಕರಾದ ಜಿ.ಯು. ಹುಡೇದ್ ಅವರು ಪ್ರಕಟಣೆಯಲ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಅ. 31ರಂದು ಪ್ರಧಾನಮಂತ್ರಿ ರಾಷ್ಟ್ರೀಯ ಶಿಷ್ಯ ವೃತ್ತಿ ಮೇಳ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಅ 21: ಜಿಲ್ಲೆಯ ಲಿಂಗಸುಗೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಿವಿಧ ಉದ್ದಿಮೆದಾರರ ವತಿಯಿಂದ ಐಟಿಐ ಅಭ್ಯರ್ಥಿಗಳಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಶಿಷ್ಯ ವೃತ್ತಿ ಜಿಲ್ಲಾ ಮಟ್ಟದ ಮೇಳವನ್ನು ಅಕ್ಟೋಬರ್ 31ರ ಬೆಳಿಗ್ಗೆ 10 ಗಂಟೆಗೆ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.ಸಂದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಭಾಗವಹಿಸಿ ಮೇಳದ ಲಾಭವನ್ನು ಪಡೆಯುವಂತೆ ಲಿಂಗಸುಗೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಅ. 23ರಂದು ಜಿಲ್ಲಾಡಳಿತದಿಂದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಅ 21: ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮವನ್ನು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಅಕ್ಟೋಬರ್ 23ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ.ಎಂ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕುರಿತು ಪರಮೇಶ್ವರ ಸಾಲಿಮಠ ಅವರು ಉಪನ್ಯಾಸ ನೀಡಲಿದ್ದಾರೆ

# ಹಡಪದ ಅಭಿವೃದ್ಧಿ ನಿಗಮ ಘೋಷಣೆ ಸಮಾಜ ವತಿಯಿಂದ ರಾಜ್ಯ ಸರ್ಕಾರಕ್ಕೆ ಅಭಿನಂದನೆ



ಮಲ್ಲಮ್ಮನುಡಿ ವಾರ್ತೆ ಕಲಬುರಗಿ: ಅ.21:ಹಡಪದ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಹಡಪದ ಸಮಾಜದ ಅಭಿವೃದ್ಧಿ ನಿಗಮ ಮಂಡಳಿ ಘೋಷಣೆ ಮಾಡಿದಕ್ಕೆ ಜಿಲ್ಲಾ ಹಡಪದ ಸಮಾಜ ಕಲಬುರಗಿ ವತಿಯಿಂದ ನಗರದ ಸರ್ದಾರ ವಲ್ಲಾಬಾಯಿ ಪಟೇಲ್ ಚೌಕ್ ಹತ್ತಿರ ಹಡಪದ ಅಪ್ಪಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಲ್ಲಾಯಿತು.

ಈ ಹಿಂದೆ ಬಿ.ಜೆ.ಪಿ. ಸರ್ಕಾರ ಇದ್ದಾಗ ಬಸವರಾಜ ಬೊಮ್ಮಾಯಿ ರವರು ಮುಖ್ಯಮಂತ್ರಿಗಳಾಗಿದ್ದು, ಹಡಪದ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಹಡಪದ ಸಮಾಜದ ಅಭಿವೃದ್ಧಿ ನಿಗಮ ಮಂಡಳಿ ಘೋಷಣೆ ಮಾಡಿದರು, ಅದು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೊಳ್ಳಲಾರದೆ ನೆಲಗುದಿಗೆ ಬಿದ್ದಿದ್ದು, ಈಗಿನ ಕಾಂಗ್ರೇಸ್ ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಹಿಂದುಳಿದ ಇಲಾಖೆಯ ಸಚಿವರಾದ ಶಿವರಾಜ ತಂಗಡಗಿ ಅವರು ಹಡಪದ ಸಮಾಜಕ್ಕೆ ದೀಪಾವಳಿಯ ಸಿಹಿ ಸುದ್ದಿ ನೀಡಿದ್ದು ಈ ಒಂದು ನಿಗಮವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೋಳಸಿ ಆದೇಶ ಹೊರಡಿಸಿದ್ದು, ಇದಕ್ಕೆ ಪ್ರತೇಕ್ಷವಾಗಿ ಪರೋಕ್ಷವಾಗಿ ಒತ್ತಡ ನೀಡಿದ ಮಾನ್ಯ ಮುಖ್ಯಮಂತ್ರಿಗಳಿಗು ಹಾಗೂ ಎಲ್ಲಾ ಸಚಿವರಿಗು ಶಾಸಕರಿಗೂ ರಾಜ್ಯ ಹಡಪದ ಸಮಾಜದ ವತಿಯಿಂದ ಹಾಗೂ ಜಿಲ್ಲಾ ಹಡಪದ ಸಮಾಜ ಕಲಬುರಗಿ ವತಿಯಿಂದ ಅನಂತ ಅನಂತ ಕೃತಜ್ಞತೆಗಳು ಧನ್ಯವಾದಗಳು, ಹಾಗೂ ಈ ಒಂದು ನಿಗಮಕ್ಕೆ ಮುಂಬರುವ ದಿನಗಳಲ್ಲಿ ಒಂದು ನೂರು ಕೋಟಿ ಅನುದಾನ ನೀಡಿ ಹಡಪದ ಸಮಾಜದ ಜನಾಂಗವು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಮಾಜಿಕವಾಗಿ, ರಾಜಕೀಯವಾಗಿ, ಅಭೀವೃದ್ಧಿ ಹೊಂದಲು ತಾವು ಕಾರಣಿಬೂತರಾಗಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಈರಣ್ಣ ಹಡಪದ ಸಣ್ಣೂರ, ಜಿಲ್ಲಾ ಗೌರವಾಧ್ಯಕ್ಷ ಬಸವರಾಜ ಹಡಪದ ಸುಗೂರ, ಜಿಲ್ಲಾ ಕಾರ್ಯಾಧ್ಯಕ್ಷ ಎನ್. ಭಗವಂತ ಹಡಪದ ಹೊನ್ನಕಿರಣಗಿ ಶಿಕ್ಷಕರು, ಜಿಲ್ಲಾ ಪ್ರ ಕಾರ್ಯದರ್ಶಿ ರಮೇಶ್ ನೀಲೂರ, ಜಿಲ್ಲಾ ಉಪಾಧ್ಯಕ್ಷರಾದ ರುದ್ರಮಣಿ ಬಟಗೇರಾ, ಮಹಾಂತೇಶ ಇಸ್ಲಾಂಪೂರೆ, ಶಿವಾನಂದ ಬಬಲಾದಿ, ಜಿಲ್ಲಾ ಖಂಜಾಚಿ ಆನಂದ ಖೇಳಗಿ ಮತ್ತು ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಲ್ಲಿಕಾರ್ಜುನ ಬಿ ಹಡಪದ ಸುಗೂರ ಎನ್, ಜಿಲ್ಲಾ ಸಹ ಸಂಘಟನಾ ಕಾರ್ಯದರ್ಶಿ ಸಂತೋಷ ಹಡಪದ ಬಗದುರಿ, ಜಿಲ್ಲಾ ಸಹ ಕಾರ್ಯದರ್ಶಿ ನಿಂಗಣ್ಣ ಯಾತನೂರ, ಕಲಬುರಗಿ ಜಿಲ್ಲೆಯ ನಗರಾಧ್ಯಕ್ಷ ಮಲ್ಲಿಕಾರ್ಜುನ ಹಡಪದ ಸಾವಳಗಿ, ಸುನೀಲ್ ಕುಮಾರ್ ಹಡಪದ ಭಾಗಹಿಪ್ಪರಗಾ, ಚಂದ್ರಶೇಖರ ಬಿ. ತೊನಸನಹಳ್ಳಿ (ಟಿ), ಕಂಠು ಹಡಪದ ಕಲಬುರಗಿ, ಶ್ರೀಮಂತ ಹಡಪದ ಅರನೂರ, ಶಂಕರ್ ತಾವರಗೇರಾ, ರಮೇಶ್ ಹಡಪದ ಕರಾರಿ, ರಮೇಶ್ ಕವಲಗಾ, ಸಿದ್ದು ಯಳಸಂಗಿ, ಶಿವಕುಮಾರ್ ಹಡಪದ ಕಟ್ಟಿಸಂಗಾವಿ, ಅನೀಲ ಜೀವಾ, ಪರಮೇಶ್ವರ ಹಡಪದ ಕಲಬುರಗಿ, ಅಪ್ಪಣ ಬಿದ್ದಾಪೂರ, ಸುದೀಪ್ ಹಡಪದ ಸೇರಿದಂತೆ

# ಶರಣಬಸವೇಶ್ವರ ತತ್ವಾದರ್ಶ ಪಾಲನೆ ಅಗತ್ಯ: ಡಾ. ದಾಕ್ಷಾಯಿಣಿ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಅ.21:ದಾಸೋಹ, ಕಾಯಕ ಹಾಗೂ ಮಹಾಮನೆಯ ಪ್ರಸಾದದ ಸೇವೆಗೈದ ಪೂಜ್ಯ ಶರಣಬಸವೇಶ್ವರರ ತತ್ವಾದರ್ಶಗಳು ನಿಜ ಜೀವನದಲ್ಲಿ ಅಳವಡಿಸಿಕೊಂಡು ಪಾಲನೆ ಮಾಡಬೇಕು ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮಾತೋಶ್ರೀ ಡಾ. ದಾಕ್ಷಾಯಿಣಿ ಎಸ್ ಅಪ್ಪಾ ಅವರು ನುಡಿದರು.

ನಗರದ ನಾಗನಹಳ್ಳಿ ಕ್ರಾಸ್ ಓವರ್ ಬ್ರಿಡ್ಜ್ ಹತ್ತಿರವಿರು ಶರಣಬಸವೇಶ್ವರ ನಗರದಲ್ಲಿ ಸೋಮವಾರ ಜರುಗಿದ ಶರಣಬಸವೇಶ್ವರ ನಗರ ವೆಲ್‌ಫೇರ್ ಸೊಸೈಟಿ ಹಾಗೂ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ ಅಕ್ಕನ ಬಳಗವನ್ನು ಉದ್ಘಾಟಿಸಿ ಶುಭ ನುಡಿಗಳನ್ನಾಡಿದ ಅವರು, ನಾವೆಲ್ಲ ಸ್ವಾರ್ಥ ಜೀವನ ನಡೆಸಿಮಾನವೀಯ ಮೌಲ್ಯಗಳು ಕಳೆದುಕೊಂಡಿದ್ದೇವೆ. ಇಂಥ ಇಂದಿನ ಕಲುಷಿತ ವಾತಾವರಣದಲ್ಲಿ ನಾವು ಶರಣಬಸವೇಶ್ವರರು ಕಂಡ ಸಾರ್ಥಕ ಜೀವನವನ್ನು ಪುನ: ಸ್ಥಾಪಿಸಬೇಕಾಗಿದೆ. ಪ್ರೀತಿ, ವಿಶ್ವಾಸ, ನಂಬಿಕೆ, ಸತ್ಯ, ನಿಷ್ಠೆ, ಕಾಯಹಕ, ಮಾನವೀಯತೆ, ಹೃದಯ ವೈಶಾಲ್ಯತೆ ಮೈಗೂಡಿಸಿಕೊಂಡು ಬದುಕಬೇಕಾಗಿದೆ ಎಂದು ಹೇಳಿದ ಅವರು, ಮಹಾನಗರದಲ್ಲಿ ಶರಣಬಸವೇಶ್ವರರ ಹೆಸರಲ್ಲಿ ಸೊಸೈಟಿಯೊಂದನ್ನು ಸ್ಥಾಪಿಸಿದ್ದು ಹೆಮ್ಮೆಯ ಸಂಗತಿ. ಶರಣರು ನುಡಿ ನಡೆದಂತೆ ದಾಸೋಹ ಸೂತ್ರಗಳನ್ನು ಪಾಲಿಸುವಂತೆ ಹೇಳಿದರು.

ಮಹಿಳೆಯರು ಆತ್ಮವಿಶ್ವಾಸ ಮತ್ತು ಸ್ವಾಭಿಮಾನಿಗಳಾಗಿ ಸ್ವತಂತ್ರರಾಗಿ ಬದುಕು ಕಟ್ಟಿಕೊಳ್ಳುವರಾಗಬೇಕು. ಇಂದಿನ ಒತ್ತಡದ ಜೀವನದಲ್ಲಿ ಮಹಿಳೆಯರು ಸಮಾಜಮುಖಿ ಚಿಂತಕರಾಗಿ ಪ್ರಗತಿ ಸಾಧಿಸಲಿ ಹಾಗೂ ಅವಳ ಶಕ್ತಿ ಸಾಮರ್ಥ್ಯದಿಂದ ಏನೆಲ್ಲ ಸಾಧಿಸಲು ಸಾಧ್ಯ ಎಂದು ನುಡಿದರು.

ಶರಣಬಸವೇಶ್ವರ ನಗರ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷ ಡಾ. ಶರಣಕುಮಾರ ಕಂಠಿ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಅಲ್ಲಮಪ್ರಭು ಪಾಟೀಲ, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಡಾ. ಸುರೇಶ ಆರ್. ಸಜ್ಜನ್, ರಾಜೇಂದ್ರ ಕರೇಕಲ್, ಶರಣಬಸಪ್ಪ ಬೆಣ್ಣೂರ, ಅರುಣಕುಮಾರ ಪಾಟೀಲ, ಸುರೇಶ ಮುಗುಳಿ, ಸೊಸೈಟಿಯ ರವೀಂದ್ರ ಬೋಗಶೆಟ್ಟಿ, ವಿಜಯಕುಮಾರ ಪಾಟೀಲ ತೇಗಲತಿಪ್ಪಿ, ಸಂಜಯ ಚಿಂದೆ, ರಮೇಶ ಶಂಕರಶೆಟ್ಟಿ, ಶಿವಕುಮಾರ ನಾಸಿ, ಸೋಮಶೇಖರ ಕಲಶೆಟ್ಟಿ, ಶಿವಾನಂದ ಕೆ ಸ್ವಾಮಿ, ಮಹಾಂತೇಶ ಕುಂಬಾರ, ಗುರುಲಿಂಗ ಧನ್ನೂರ, ಗುರುರಾಜ ಪಾಟೀಲ, ಶರಣಬಸಪ್ಪ ಚಿಂಚನಸೂರ, ಮಹೇಶ ಟೆಂಗಳಿ, ವಿಷ್ಣುಕಾಂತ ಕೊಡದೂರ, ಅಮರೇಶ ಹಿರೇಮಠ, ಮಹೇಶ ಅನೀಲ, ಸಂತೋಷ ಭಾಲ್ಕಿ, ವೆಂಕಟೇಶ ತೇಲ್ಕರ್, ಬಲರಾಮ ದತ್ತು, ಡಾ. ಮುರುಳಿಧರ, ಮಾತೋಶ್ರೀ ದಾಕ್ಷಾಯಿಣಿ ಅವ್ವಾಜಿ ಅಕ್ಕನ ಬಳಗದ ಸಂಗೀತಾ ಚಿಂಚನಸೂರ, ಸುರೇಖಾ ಸ್ವಾಮಿ, ಗಂಗಮ್ಮ ಬೋಗಶೆಟ್ಟಿ, ಜ್ಯೋತಿ ಧನ್ನೂರ, ಸುನೀತಾ ತೇಲ್ಕರ್, ಮಲ್ಲಮ್ಮ ಕುಂಬಾರ, ಶಿಲ್ಪಾ ಕೋರಿ, ಶಿವಲೀಲಾ ಪಾಟೀಲ, ತನುಜಾ ಶಂಕರಶೆಟ್ಟಿ, ಡಾ. ಪ್ರಭಾವತಿ ಕಂಠಿ, ಸುವರ್ಣಾ ಹಿರೇಮಠ, ಸುಜಾತಾ ಚಿಂದೆ, ಶಿಲ್ಪಾರಾಣಿ ಮಹೇಶ, ಸುವರ್ಣಾ ಕೊಡದೂರ, ಭಾಗ್ಯಶ್ರೀ ನಾಸಿ, ಪ್ರೀತಿ ಕಲಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗೈರು ಸಹ ಶಿಕ್ಷಕ ಮನೋಹರಗೆ ಸೂಚನೆ

ಮಲ್ಲಮ್ಮನುಡಿ ವಾರ್ತೆ ಯಾದಗಿರಿ : ಅ 21 : ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮಂಗಿಹಾಳ ಗ್ರಾಮದಲ್ಲಿ ಬರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರಾದ ಶ್ರೀ ಮನೋಹರ ಅವರು 2025ರ ಫೆಬ್ರವರಿ 10 ರಿಂದ ಪ್ರಸ್ತುತ ವರಗೆ ಶಾಲಾ ಕರ್ತವ್ಯಕ್ಕೆ ಅನಧೀಕೃತ ಗೈರು ಹಾಜರಾಗಿರುತ್ತನೆ ಎಂದು ಸುರಪುರ ಕ್ಷೇತ್ರ ಶಿಕ್ಷಣಾಧಿಕಾರಿ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಮಂಗಿಹಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರಾದ ಶ್ರೀ ಮನೋಹರ ಅವರು 2025ರ ಫೆಬ್ರವರಿ 10 ರಿಂದ ಪ್ರಸ್ತುತ ವರಗೆ ಶಾಲಾ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತೀರಿ. ಈಗಾಗಲೇ ಈ ಕಛೇರಿಯಿಂದ ಕರ್ತವ್ಯಕ್ಕೆ ಹಾಜರಾಗಲು ತಿಳಿಸಿ ನಿಮಗೆ ಈ ಕಛೇರಿಯಿಂದ 3 ನೋಟಿಸ್ ಪತ್ರಗಳನ್ನು ನೀಡಿದರೂ ಸಹ ನೀವು ಕರ್ತವ್ಯಕ್ಕೆ ಹಾಜರಾಗದೇ ಅನಧಿಕೃತವಾಗಿ ಗೈರು ಹಾಜರಾಗಿ ಬೇಜವಾಬ್ದಾರಿತನ ಮತ್ತು ಕರ್ತವ್ಯ ನಿರ್ಲಕ್ಷ ತನ ಮಾಡಿರುತ್ತೀರಿ, ಆದ್ದರಿಂದ ಈ ಪ್ರಕಟಣೆ ಹೊರಡಿಸಿದ 15 ದಿನ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಪುನಃ ತಿಳಿಸಿದೆ. ನೀವು ನಿಗದಿತ ಅವಧಿ ಒಳಗೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ನಿಮ್ಮ ವಿರುದ್ಧ ಕರ್ನಾಟಕ ನಾಗರಿಕಸೇವಾ ನಿಯಮ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ 1957ರ ಪ್ರಕಾರ ಸೇವೆಯಿಂದ ವಜಾಗೊಳಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಮಾನ್ಯ ಜ್ಞಾನವಿಲ್ಲದ ಶಾಸಕ ವಜ್ಜಲ್, ಜಿಲ್ಲಾಧ್ಯಕ್ಷ ವೀರನಗೌಡಗೆ ಬುದ್ಧಿಭ್ರಮಣೆ




ಲಿಂಗಸುಗೂರು:ಅ.20: ಹಿಂದೆ ಬಿಜೆಪಿ ಪಕ್ಷದಲ್ಲಿದ್ದಾಗ ಶಾಸಕರ ಒತ್ತಾಯದ ಮೇರೆಗೆ ಅನಿವಾರ್ಯವಾಗಿ ನಾನು ಒಬ್ಬ ರಾಜಕಾಣಿಯಾಗಿ ಆರ್‌ಎಸ್‌ಎಸ್ ಸಮವಸ್ತ್ರ ಧರಿಸಿ ಫಥಸಂಚಲನದಲ್ಲಿ ಭಾಗವಹಿಸಿದ್ದೇನೆ ಹೊರತು ನಾನು ಸರ್ಕಾರಿ ನೌಕರನಲ್ಲ ನನ್ನ ವಿರುದ್ಧ ಕ್ರಮ ತೆಗೆದುಕೊಳ್ಳಲಿಕ್ಕೆ ಅಷ್ಟು ಸಾಮಾನ್ಯ ಜ್ಞಾನ ಇಲ್ಲದ ಶಾಸಕ ಮಾನಪ್ಪ ವಜ್ಜ ಲ್ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳರವರಿಗೆ ಬುದ್ಧಿ

ಭ್ರಮಣೆಯಾಗಿರಬಹುದು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದನಾಯಕ ಲೇವಡಿ ಮಾಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆರ್‌ಎಸ್‌ಎಸ್ ಯಾವುದೇ ಶಾಖೆಯಲ್ಲಿ ನಾನು ಭಾಗಿಯಾಗಿಲ್ಲ ಮತ್ತು ಆರ್‌ಎಸ್ ಎಸ್ ಸದಸ್ಯನು ನಾನು ಅಲ್ಲ.

ಆರ್‌ಎಸ್‌ಎಸ್‌ನಲ್ಲಿ ಭಾಗವಹಿಸಿದರೆ ಚುನಾವಣೆಯಲ್ಲಿ ಮತಪಡೆಯಬಹುದು ಎಂಬ ಉದ್ದೇಶಕ್ಕೆ ಅವರು ಆರ್‌ಎಸ್‌ಎಸ್ ಪಿಡಿಓ ಪ್ರವೀಣ್ ಕುಮಾರ್ ಪಥಸಂಚಲನದಲ್ಲಿ ಭಾಗಯಾಗುತ್ತಿದ್ದಾರೆ. ಹೊರತು ಇನ್ನಾವುದಕ್ಕೂ ಅಲ್ಲ, ಪ್ರವೀಣ ಬುದ್ದಿವಂತನಂದು ತಮ್ಮ ಆಪ್ತ ಸಹಾಯಕನನ್ನಾಗಿ ನೇಮಿಸಿಕೊಂಡಿದ್ದೇನೆ ಅದನ್ನು ಸಹಿಸಿದೇ ಕಾಂಗ್ರೆಸ್ ಪಕ್ಷದವರು ಅಮಾನತ್ತುಗೊಳಿಸಿದ್ದಾರೆ ಎಂದು ಹೇಳುವ ಶಾಸಕರು. ಈ ಹಿಂದೆ ಇದೆ ಪ್ರವೀಣಕುಮಾರ ಅಕ್ರಮ ಆಸ್ತಿ ಗಳಿಸಿದ್ದಾನೆಂದು ದೂರು ನೀಡಿರುವುದು ಜ್ಞಾನಪಕವಿಲ್ಲವೇ ಎಂದು ಪ್ರಶ್ನಿಸಿದರು

ದೇವದುರ್ಗದ ಸಣ್ಣಪುಟ್ಟ ಗುತ್ತಿಗೆದಾರರಿಗೆ ತಮ್ಮ ಕಂಪನಿಯಿಂದ ಉಪ ಗುತ್ತಿಗೆ ನೀಡಿ ಕೆಲಸ ಮಾಡಿಸಿಕೊಂಡು ವರ್ಷಗಳು ಕಳೆದರು ಅವರ ಬಿಲ್ ಪಾವತಿ ಮಾಡದೇ ಅವರನ್ನು ಅಲೆದಾಡಿಸುವಂತೆ ಮಾಡಿದ ತಾವು ಮಾನವೀಯತೆಯನ್ನು ಮರೆತು ಬಿಟ್ಟಿರುವುದು ಸರಿಯೇ? ಇನ್ನು ತಮ್ಮ ಕನಸಿನ ಕೂಸು ಎಂದು ಬಿಂಬಿಸಿಕೊಂಡು ನಂದವಾಡಗಿ ಏತ ನೀರಾವರಿಯ ರೂವಾರಿ ಎಂದು ಕರೆಸಿಕೊಳ್ಳುವ ತಾವು ಆ ನೀರಾವರಿ ಕಾಮಗಾರಿ ಪೂರ್ಣಗೊಂಡಿದೆ–ಯೇ, ಕಾಮಗಾರಿಯಿಂದ ಎಷ್ಟು ಜನ ರೈತರು ಭೂಮಿಗೆ ನೀರು ಒದಗಿಸಿದ್ದೀರಿ ಎಂಬುವುದು ಈ ಕ್ಷೇತ್ರದ ಜನತೆಗೆ ತಿಳಿದಿದೆ. ಕಾಂಗ್ರೆಸ್ ಪಕ್ಷವನ್ನು ಟೀಕಿಸುವುದೇ ನಿಮ್ಮ ಕೆಲಸವಾಗಿದೆ ಹೊರತು ಈ ಕ್ಷೇತ್ರದ ಅಭಿವೃದ್ಧಿ ಎಂದಾದರೂ ಯೋಚನೆ ಮಾಡಿದ್ದೀರಾ, ಶಾಸಕರಾಗಿ ಕಳೆದ 2 ವರ್ಷಗಳಲ್ಲಿ ಎಷ್ಟು ಗ್ರಾಮಗಳಿಗೆ ಭೇಟಿ ನೀಡಿ ಕ್ಷೇತ್ರದ ಜನತೆಯ ಸಮಸ್ಯೆಯನ್ನು ಪರಿಹರಿಸಿದ್ದೀರೆಂದು ತಿಳಿಸಿ ಎಂದು ಖಾರವಾಗಿ ನುಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮುದಕಪ್ಪ ಎಪಿಎಂಸಿ ಅಧ್ಯಕ್ಷ ಅಮರೇಶ ಚಿಕ್ಕಹೆಸರೂರು, ಎಂ.ಡಿ.ರಫೀ, ನೀಲಪ್ಪ ಪವಾರ, ಸಂಜೀವಪ್ಪ ಚಲುವಾದಿ, ಉಮೇಶ ಐಹೊಳೇರ, ಜೀವನ ಬಾಳೇಗೌಡ, ಸಂತೋಷ ಸೋಪಿಮಠ ಸೇರಿ ಇತರರು ಇದ್ದರು.

# ಕಲಾ ಪ್ರತಿಭೋತ್ಸವಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಬೀದರ, ಅ.21 : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಜಿಲ್ಲೆಯ ವತಿಯಿಂದ ಮಕ್ಕಳು ಮತ್ತು ಯುವಜನರ ಕಲಾಪ್ರತಿಭೆಯನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡುವ ಮತ್ತು ಅವರು ತಮ್ಮ ಕಲಾನೈಪುಣ್ಯವನ್ನು ವೃದ್ಧಿಗೊಳಿಸುವಂತೆ ಪ್ರೋತ್ಸಾಹಿಸಲು ಕಲಾಪ್ರತಿಭೋತ್ಸವವನ್ನು ಏರ್ಪಡಿಸಿದ್ದು. ನಾನಾ ಪ್ರತಿಭೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಏಕವ್ಯಕ್ತಿ ಸ್ಪರ್ಧೆಗಳು: ಶಾಸ್ತ್ರೀಯ ನೃತ್ಯ (10 ನಿಮಿಷ), ಸುಗಮ ಸಂಗೀತ (7 ನಿಮಿಷ), ಚಿತ್ರಕಲೆ (120 ನಿಮಿಷ), ಜಾನಪದ ಗೀತೆ (7 ನಿಮಿಷ), ಹಿಂದೂಸ್ತಾನಿ/ಕರ್ನಾಟಕ ವಾದ್ಯ ಸಂಗೀತ (7 ನಿಮಿಷ), ಹಿಂದೂಸ್ತಾನಿ/ಕರ್ನಾಟಕ ಶಾಸ್ತ್ರೀಯ ಸಂಗೀತ (7 ನಿಮಿಷ),

ಏಕವ್ಯಕ್ತಿ ಸ್ಪರ್ಧೆಗಳು: ನನ್ನ ಮೆಚ್ಚಿನ ಸಾಹಿತಿ (ಆಶುಭಾಷಣ) (7 ನಿಮಿಷ), ಶಾಸ್ತ್ರೀಯ ನೃತ್ಯ (10 ನಿಮಿಷ), ಸುಗಮ ಸಂಗೀತ (7 ನಿಮಿಷ), ಹಿಂದೂಸ್ತಾನಿ/ಕರ್ನಾಟಕ ಶಾಸ್ತ್ರೀಯ ಸಂಗೀತ (7 ನಿಮಿಷ), ಚಿತ್ರಕಲೆ (120 ನಿಮಿಷ), ಹಿಂದೂಸ್ತಾನಿ ಕರ್ನಾಟಕ ವಾದ್ಯ ಸಂಗೀತ (7 ನಿಮಿಷ).

**ಸಮೂಹ ಸ್ಪರ್ಧೆಗಳು: ನಾಟಕ (45 ನಿಮಿಷ)**

ಅರ್ಹತೆಗಳು: ಬಾಲಪ್ರತಿಭೆಯ ವಿಭಾಗದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಕನಿಷ್ಠ 8 ವರ್ಷ ತುಂಬಿರಬೇಕು ಹಾಗೂ 14 ವರ್ಷಕ್ಕಿಂತ ಕಡಿಮೆಯಿರಬೇಕು. ಕಿಶೋರ ಪ್ರತಿಭೆಯ ವಿಭಾಗದಲ್ಲಿ ಭಾಗಹಿಸುವ ಅಭ್ಯರ್ಥಿಗಳಿಗೆ ಕನಿಷ್ಠ 14 ವರ್ಷವಾಗಿರಬೇಕು 18 ವರ್ಷಕ್ಕಿಂತ ಕಡಿಮೆಯಿರಬೇಕು. ಯುವ ಪ್ರತಿಭೆ ವಿಭಾಗದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ತುಂಬಿರಬೇಕು ಮತ್ತು 30 ವರ್ಷಕ್ಕಿಂತ ಕಡಿಮೆ ಇರಬೇಕು. ಸ್ಪರ್ಧೆಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅಭ್ಯರ್ಥಿಯು ವಯೋಮಿತಿಯ ದೃಢೀಕರಣಕ್ಕಾಗಿ ಶಾಲೆಯಿಂದ ಪಡೆದ ಪ್ರಮಾಣ ಪತ್ರ ಸಲ್ಲಿಸಬೇಕು. ಶಾಲೆಯಿಂದ ಬಾರದ ಅಭ್ಯರ್ಥಿಯು ಅವರ ವಯಸ್ಸಿನ ಬಗ್ಗೆ ಪಂಚಾಯತಿ/ನಗರಸಭೆ/ಪುರಸಭೆ/ ಪಾಲಿಕೆ ಕಚೇರಿಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸಬೇಕು. ಸಮೂಹ ಸ್ಪರ್ಧೆಯಾದ ನಾಟಕದಲ್ಲಿ ಭಾಗವಹಿಸುವ ತಂಡದ ಸದಸ್ಯರ ಸಂಖ್ಯೆ ಕನಿಷ್ಠ 10 ಮತ್ತು 15ಜನರನ್ನು ಮೀರಬಾರದು. ಒಬ್ಬ ಸ್ಪರ್ಧಿಯು ಒಂದಕ್ಕಿಂತ ಹೆಚ್ಚು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಯಾವುದೇ ಸ್ಪರ್ಧೆಯಲ್ಲಿ ತೀರ್ಪುಗಾರರು ನೀಡುವ ಆಯ್ಕೆಯೆ ಅಂತಿಮ ಎಂದು ಪರಿಗಣಿಸಲಾಗುವುದು. ಸದರಿ ಸ್ಪರ್ಧೆಗಳು ನವೆಂಬರ್.17 ಮತ್ತು 18 ರಂದು ಬೆಳಿಗ್ಗೆ 10 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ನಡೆಯಲಿದೆ.

ಆಸಕ್ತ ಬಾಲ/ಕಿಶೋರ/ಯುವಕ ಅಭ್ಯರ್ಥಿಗಳು ತಮ್ಮ ಸ್ವವಿವರದ ಪರಿಚಯದ ಪತ್ರ, ವಯಸ್ಸಿನ ದಾಖಲಾತಿಯನ್ನು ಮತ್ತು ಭಾಗವಹಿಸುವ ಕಲಾಪ್ರಕಾರವನ್ನು ಸ್ಪಷ್ಟವಾಗಿ ಪತ್ರದಲ್ಲಿ ನಮೂದಿಸಿ ದಿನಾಂಕ: 10–11–2025 ರಂದು ಸಂಜೆ 5 ಗಂಟೆಯೊಳಗಾಗಿ ಸಹಾಯಕ ನಿರ್ದೇಕಶರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರ ಬೀದರಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಕೃಷಿ ಸೌಲಭ್ಯ ಪಡೆಯಲು ಕಪಾಸ್ ಕಿಸಾನ್ ನೋಂದಣಿ ಕಡ್ಡಾಯ

ಮಲ್ಲಮ್ಮ ನುಡಿ ವಾರ್ತೆ ಬೀದರ, ಅ.21 : 2025–26 ನೇ ಸಾಲಿನ ಮುಂಗಾರು ಹಂಗಾಮಿಗೆ ಹತ್ತಿ ಬೆಳೆದ ರೈತರು ಆಧಾರ್ ಆಧಾರಿತ ಸ್ವಯಂ ನೋಂದಣಿ ಮತ್ತು ಏಳು ದಿನಗಳ ರೋಲಿಂಗ್ ಸ್ಲಾಟ್ ಬುಕಿಂಗ್ ಅನ್ನು ಹೊಸದಾಗಿ ಪ್ರಾರಂಭಿಸಲಾದ 'ಕಪಾಸ್–ಕಿಸಾನ್' ಮೊಬೈಲ್ ಅಪ್ಲಿಕೇಶನ್ ಮೂಲಕ ಸುಗಮಗೊಳಿಸಲಾಗಿದೆ. ಡಿಜಿಟಲ್ ಪ್ಲಾ –ಫಾರ್ಮ್ ಖರೀದಿ ಕಾರ್ಯಾಚರಣೆಗಳನ್ನು ಸುಗಮಗೊಳಿಸುವುದು, ಪಾರದರ್ಶಕತೆಯನ್ನು ಖಚಿತಪಡಿಸುವುದು ಮತ್ತು ರಾಷ್ಟ್ರೀಯ ಸ್ವಯಂಚಾಲಿತ ಕ್ಲಿಯರಿಂಗ್ ಹೌಸ್ (NACH) ಮೂಲಕ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಆಧಾರ್–ಸಂಯೋಜಿತ ಪಾವತಿಗಳನ್ನು ಸಕ್ರಿಯಗೊಳಿಸುವ ಗುರಿಯನ್ನು ಹೊಂದಿದೆ.

ಗುಣಮಟ್ಟದ ಹತ್ತಿಯ ಬೆಂಬಲ ಬೆಲೆ ವಿವರ: ಮಧ್ಯಮ ಎಳೆ ಪ್ರತೀ ಕ್ವಿಂ. ಗೆ ರೂ. 7,710.00 ಹಾಗೂ ಉದ್ದನೆಯ ಎಳೆ ಪ್ರತೀ ಕ್ವಿಂ. ಗೆ ರೂ. 8,110.00 ಹತ್ತಿ ಬೆಳೆಯುವ ರೈತರ ಹಿತಾಸಕ್ತಿಯಿಂದ ಭಾರತೀಯ ಹತ್ತಿ ನಿಗಮ ನಿಯಮಿತ (CCI) ಹೊರಡಿಸಿರುವ ಕನಿಷ್ಠ ಬೆಂಬಲ ಬೆಲೆ (MSP) ಯೋಜನೆಯಡಿ ಪ್ರಯೋಜನಗಳನ್ನು ಪಡೆಯಲು ಎಲ್ಲಾ ಹತ್ತಿ ಬೆಳೆಗಾರರು ಸಕಾಲದಲ್ಲಿ ನೋಂದಾಯಿಸಿಕೊಳ್ಳಬೇಕು.

ಕಪಾಸ್ ಕಿಸಾನ್ ಅಪ್ಲಿಕೇಶನಲ್ಲಿ ರೈತರು ನೋಂದಣಿ ಮಾಡಿಕೊಳ್ಳಲು ಅಕ್ಟೋಬರ್.31 ಕೆನೆಯ ದಿನಾಂಕವಾಗಿದೆ. ವೆಸೈಟ್ ಲಿಂಕ್:http// www.cottonprocurement.in/ ಹಾಗೂ ಅಪ್ಲಿಕೇಶನ್ ಡೌನ್ಲೋಡ್ ಮಾಡಿ ಕೊಳ್ಳಲು ಲಿಂಕ್:https://play.google.com/store/apps/details?id=com.cotcorp.kapaskisan ಇರುತ್ತದೆಂದು ಬೀದರ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೇಸ್‌ಬುಕ್‌ನಲ್ಲಿ ವಿವಾದಾತ್ಮಕ ಪೋಸ್ಟ್: ಪ್ರಕರಣ ದಾಖಲು




ಮಲ್ಲಮ್ಮ ನುಡಿ ವಾರ್ತೆ ಲಿಂಗಸೂಗೂರು, ಅ.21:ಲಿಂಗಸೂಗೂರು ಪಟ್ಟಣದ ಖಾದರ್ ಪಾಶಾ ಗಲ್ಲಿಯ ವ್ಯಾಪಾರಿ ಅಮೀರ್ ಹುಸೇನ್ ಅಲಿಯಾಸ್ ಫೈಸಲ್ ಕೆ.ಎಸ್.ಟಿ ವಿರುದ್ಧ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆಯುಂಟುಮಾಡುವ ರೀತಿಯ ವಿವಾದಾತ್ಮಕ ಪೋಸ್ಟ್‌ಗಳನ್ನು ಪ್ರಕಟಿಸಿರುವ ಆರೋಪದ ಮೇರೆಗೆ ಲಿಂಗಸೂಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಹನುಮಂತ ವಾಸುನಾಯಕ , ಅವರು ನೀಡಿದ ದೂರಿನ ಮೇರೆಗೆ 254/2025, ಕಲಂ 299 ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಫೇಸ್‌ಬುಕ್ ಖಾತೆ ಫೈಸಲ್ ಕೆ.ಎಸ್.ಟಿ. ಎಂಬ ಖಾತೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ವಿನಾಯಕ ದಾಮೋದರ ಸಾವರ್ಕರ್ ವಿರುದ್ಧ ಅವಹೇಳನಕಾರಿ ಪೋಸ್ಟ್‌ಗಳು ಹಾಕಿರುವುದು ಗಮನಕ್ಕೆ ಬಂದಿತೆಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ ದಿನಾಂಕ 19–10–2025 ರಂದು ಆರೋಪಿ ಎಐ ತಂತ್ರಜ್ಞಾನ ದುರುಪಯೋಗ ಮಾಡಿಕೊಂಡು ಆರ್‌ಎಸ್‌ಎಸ್ ಗಣವೇಶ ತೊಟ್ಟ ಇಬ್ಬರು ವ್ಯಕ್ತಿಗಳು ಪರಸ್ಪರ ಚುಂಬಿಸುತ್ತಿರುವಂತೆ ಸಂಪಾದಿಸಿದ ಚಿತ್ರವನ್ನು ತನ್ನ ಫೇಸ್‌ಬುಕ್ ಪುಟದಲ್ಲಿ ಹಾಕಿರುವುದು ಪತ್ತೆಯಾಗಿದೆ. ಈ ಮೂಲಕ ಆರೋಪಿ ಸಮಾಜದಲ್ಲಿ ಕೋಮುವಾದ ಉದ್ದೇಶ ಬೆಳೆಸಲು, ಸಾರ್ವಜನಿಕ ಶಾಂತಿಗೆ ಧಕ್ಕೆಯುಂಟುಮಾಡಲು ಪ್ರಯತ್ನಿಸಿದ್ದಾನೆಂದು ದೂರಿನಲ್ಲಿ ಹೇಳಲಾಗಿದೆ. ಪೊಲೀಸರು ಆರೋಪಿಯ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದು, ಪ್ರಕರಣದ ತನಿಖೆಯನ್ನು ಲಿಂಗಸೂಗೂರು ಪೊಲೀಸ್ ಠಾಣೆಯ ಹೆಡ್ ಕಾನ್ಸ್ಟೇಬಲ್ ಈರೇಶ ಗಟ್ಟು ಅವರು ಕೈಗೊಂಡಿದ್ದಾರೆ.


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)

## ದೇಶ ರಕ್ಷಣೆಗಾಗಿ ಕರ್ತವ್ಯದಲ್ಲಿ ಹುತಾತ್ಮರದವರ ಸೇವೆಯನ್ನು ಗೌರವಿಸೋಣ: ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.21–ದೇಶಕ್ಕಾಗಿ ದೇಶದ ರಕ್ಷಣೆಗಾಗಿ ವಿಧಿವಶರಾದ ಮತ್ತು ಸಾರ್ವಜನಿಕರ ನೆಮ್ಮದಿಗೆ ಕಾರಣ–ರಾದ ಪೊಲೀಸರ ಹುತಾತ್ಮರ ಬಗ್ಗೆ ಗೌರವ ಭಾವನೆ ಹೊಂದಬೇಕು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರು ಹೇಳಿದರು.

ಮಂಗಳವಾರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಏರ್ಪಡಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ದೇಶದ ಎಲ್ಲಾ ರಾಜ್ಯ ಮತ್ತು ಕೇಂದ್ರ, ಅರೆಸೇನಾ ಪಡೆಗಳಲ್ಲಿ ದೇಶದ ಆಂತರಿಕ ಭದ್ರತೆಗಾಗಿ ಸಮವಸ್ತ್ರಗಳ ಮೂಲಕ ಕರ್ತವ್ಯದಲ್ಲಿ ಹುತಾತ್ಮರಾದವರ ಸೇವೆಗೆ ನಮನ ಸಲ್ಲಿಸಬೇಕು ಎಂದು ಸ್ಮರಿಸಿದರು.

ಪೊಲೀಸರು ನನಗಿಂತ ನನ್ನ ಕರ್ತವ್ಯ ಮೇಲು ಎಂದು ಭಾವಿಸುತ್ತಾರೆ. ನಾವು ವ್ಯಕ್ತಿಯನ್ನು ಕಳೆದುಕೊಳ್ಳುವುದಿಲ್ಲ, ಬದಲಾಗಿ ಅಮೂಲ್ಯ ಜೀವವನ್ನು ಕಳೆದುಕೊಳ್ಳುತ್ತೇವೆ. ಸಮಾಜದ ಶಾಂತಿಯ ಬದುಕಿಗೆ ಪೊಲೀಸರ ಸೇವೆ ಅತ್ಯಂತ ಶ್ಲಾಘನೀಯವಾದದ್ದು. ಪೊಲೀಸರು ಕರ್ತವ್ಯದ ಒಂದು ಮಾನವ ಸಂಪನ್ಮೂಲ ಎಂದು ಹೇಳಿದರು. ಬಳ್ಳಾರಿ ವಲಯ ಉಪ ಪೊಲೀಸ್ ಮಹಾ ನಿರೀಕ್ಷಕರಾದ ವರ್ತಿಕ ಕಟಿಯಾರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಪೊಲೀಸ್ ಹುತಾತ್ಮರ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 21 ರಂದು ಆಚರಿಸಲಾಗುತ್ತದೆ. ಈ ದಿನವನ್ನು ಪೊಲೀಸ್ ಸಂಸ್ಮರಣಾ ದಿನ ಎಂದೂ ಕರೆಯುತ್ತೇವೆ. 1958 ರಲ್ಲಿ ಲಡಾಖ್‌ನ ಹಾಟ್ ಸ್ಪಿಂಗ್ ನಲ್ಲಿ ಚೀನಾ ಸೈನಿಕರೊಂದಿಗಿನ ಘರ್ಷಣೆಯಲ್ಲಿ ಪ್ರಾಣತ್ಯಾಗ ಮಾಡಿದ 10 ಪೊಲೀಸ್ ಅಧಿಕಾರಿಗಳನ್ನು ಗೌರವಿಸಲು 1960 ರ ಅಕ್ಟೋಬರ್ 21 ರಂದು, ವೀರ ಪೊಲೀಸರ ತ್ಯಾಗವನ್ನು ಗೌರವಿಸಲು ಪೊಲೀಸ್ ಸಂಸ್ಮರಣಾ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಮಾತನಾಡಿ, ಪೊಲೀಸರ ತ್ಯಾಗ ಮತ್ತು ರಾಷ್ಟ್ರೀಯ ಭದ್ರತೆ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ಎಲ್ಲರೂ ಕೈಜೋಡಿಸಬೇಕು. ದೇಶದಲ್ಲಿ 191 ಪೊಲೀಸರು ಮತ್ತು ಕರ್ನಾಟಕದಲ್ಲಿ 8 ಜನ ಪೊಲೀಸರು ಹುತಾತ್ಮರಾಗಿದ್ದರೆ ಎಂದು ಹೇಳಿದರು. ಇದಕ್ಕೂ ಮೊದಲು ಆರ್‌ಪಿಎಫ್ ಕಮಾಂಡರ್ ಸಿಕೇಂದ್ರ ಅವರು ಪೊಲೀಸ್ ತುಕಡಿಗಳಿಂದ ವಂದನೆ ಸ್ವೀಕರಿಸಿದರು. ನಂತರ ಪಥ ಸಂಚಲನ ಮೂಲಕ ಹುತಾತ್ಮರ ಶಾಂತಿಗಾಗಿ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಆ ಬಳಿಕ ಧ್ವಜವನ್ನು ಅರ್ಧಕ್ಕೆ ಇಳಿಸಿ ಏರಿಸಲಾಯಿತು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕೆ.ಪಿ.ರವಿಕುಮಾರ್, ಎಸ್.ನವೀನ್ ಕುಮಾರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ವರ್ಗ ಕುಟುಂಬ ವರ್ಗದವರು, ಸಾರ್ವಜನಿಕರು ಉಪಸ್ಥಿತರಿದ್ದರು.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ: ಕಲಾ ಪ್ರತಿಭೆಗಳಿಂದ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.21–ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಕ್ಕಳು ಮತ್ತು ಯುವಜನರಲ್ಲಿರುವ ಕಲಾ ಪ್ರತಿಭೆ ಗುರುತಿಸಿ, ಅವರಿಗೆ ಉತ್ತೇಜನ ನೀಡುವ ಮತ್ತು ತಮ್ಮ ಕಲಾ ನೈಪುಣ್ಯವನ್ನು ವೃದ್ಧಿಗೊಳಿಸುವಂತೆ ಪ್ರೋತ್ಸಾಯಿಸಲು ಜಿಲ್ಲಾ ಮಟ್ಟದ ಕಲಾಪ್ರತಿಭೋತ್ಸವ ಏರ್ಪಡಿಸಿದ್ದು, ವಿವಿಧ ಪ್ರಕಾರಗಳ ಪ್ರತಿಭೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಬಾಲಪ್ರತಿಭೆ ಹಾಗೂ ಕಿಶೋರ ಪ್ರತಿಭೆ ವಿಭಾಗದಲ್ಲಿ ಏಕ ವ್ಯಕ್ತಿಯ ಸ್ಪರ್ಧೆಯಲ್ಲಿ ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಚಿತ್ರಕಲೆ, ಜನಪದ ಗೀತೆ, ಕರ್ನಾಟಕ/ ಹಿಂದೂಸ್ತಾನಿ ವಾದ್ಯ ಸಂಗೀತ ಹಾಗೂ ಹಿಂದೂಸ್ತಾನಿ ಮತ್ತು ಶಾಸ್ತ್ರೀಯ ಸಂಗೀತ ಗಾಯನ ಕಲಾ ಪ್ರಕಾರಗಳಿವೆ.

ಬಾಲ ಪ್ರತಿಭೆ 08 ರಿಂದ 14 ವರ್ಷದ ಒಳಗಿನ ಹಾಗೂ ಕಿಶೋರ ಪ್ರತಿಭೆ 14 ರಿಂದ 18 ವರ್ಷದ ಒಳಗಿನ ಯುವ ಪ್ರತಿಭೆ ವಿಭಾಗದಲ್ಲಿ ಏಕ ವ್ಯಕ್ತಿಯ ಸ್ಪರ್ಧೆಯಲ್ಲಿ ನನ್ನ ಮೆಚ್ಚಿನ ಸಾಹಿತಿ (ಆಶುಭಾಷಣ), ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಚಿತ್ರಕಲೆ, ಕರ್ನಾಟಕ/ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹಾಗೂ ವಾದ್ಯ ಸಂಗೀತ ಕಲಾ ಪ್ರಕಾರಗಳಿವೆ.

ಯುವ ಪ್ರತಿಭೆ 18 ರಿಂದ 30 ವರ್ಷಕ್ಕಿಂತ ಕಡಿಮೆಯಾಗಿರಬೇಕು. ಸಮೂಹ ಸ್ಪರ್ಧೆಯಲ್ಲಿ ನಾಟಕ ಕಲಾ ಪ್ರಕಾರ ಇದ್ದು, ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ತಂಡದ ಸದಸ್ಯರ ಸಂಖ್ಯೆ ಕನಿಷ್ಠ 10 ಮತ್ತು ಗರಿಷ್ಠ 15 ಮೀರಬಾರದು.

ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಿಗಳು ವಯಸ್ಸಿನ ದೃಢೀಕರಣಕ್ಕಾಗಿ ದಾಖಲೆಗಳನ್ನು ತಾವು ವ್ಯಾಸಂಗ ಮಾಡುತ್ತಿರುವ ವಿದ್ಯಾಸಂಸ್ಥೆಯಿಂದ ಪಡೆದು ಅರ್ಜಿಯ ಜೊತೆಗೆ ಲಗತ್ತಿಸಬೇಕು. ಒಬ್ಬರಿಗೆ ಒಂದು ಕಲಾ ಪ್ರಕಾರದಲ್ಲಿ ಮಾತ್ರ ಸ್ಪರ್ಧಿಸಲು ಅವಕಾಶವಿದ್ದು, ಶಾಲಾ ಮುಖ್ಯಸ್ಥರು ತಮ್ಮ ಶಾಲಾ ಮೂಲಕ ಸ್ಪರ್ಧಿಗಳು ಅರ್ಜಿ ಸಲ್ಲಿಸುವಾಗ ಪ್ರತಿ ಕಲಾ ಪ್ರಕಾರ ಹಾಗೂ ಪ್ರತಿ ವಿಭಾಗದ ಸ್ಪರ್ಧಿಗಳ ಜನ್ಮ ದಿನಾಂಕವನ್ನು ದೃಢೀಕರಿಸಿದ ಪಟ್ಟಿಯನ್ನು ಪ್ರತ್ಯೇಕವಾಗಿ ಕಳುಹಿಸಬೇಕು.

ಖಾಸಗಿ ಸ್ಪರ್ಧಿಯಾಗಿದ್ದಲ್ಲಿ ಶಾಲಾ–ಕಾಲೇಜಿನ ಜನ್ಮ ದಿನಾಂಕ ದೃಢೀಕರಣ ಪತ್ರ ಅಥವಾ ಪಂಚಾಯಿತಿ, ಪುರಸಭೆ, ನಗರ ಸಭೆಗಳಿಂದ ನೀಡುವ ಜನನ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

ಸ್ಪರ್ಧೆಗಳಲ್ಲಿ ಭಾಗವಹಿಸುವವರು ಅರ್ಜಿಯನ್ನು ನ.05 ರೊಳಗಾಗಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು, ದೂ.08392–275182 ಗೆ ಅಥವಾ ಈ ವಿಳಾಸಕ್ಕೆ ನೇರವಾಗಿ ಅಂಚೆಯ ಮೂಲಕ ಸಲ್ಲಿಸಬಹುದು.

ನಿಯಮಗಳು ಮತ್ತು ನಿಬಂಧನೆಗಳಿದ್ದಲ್ಲಿ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಹಿಳೆ ಕಾಣೆ: ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.21–ಸಿರುಗುಪ್ಪ ತಾಲೂಕಿನ ಹಚ್ಚೊಳ್ಳಿ ಗ್ರಾಮದ ನಿವಾಸಿ ಈರಮ್ಮ ಗಂಡ ಗಾದೆಪ್ಪ ಎನ್ನುವ 45 ವರ್ಷದ ಮಹಿಳೆ ಕಾಣೆಯಾಗಿದ್ದು, ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಮಹಿಳೆಯ ಬಗ್ಗೆ ಸುಳಿವು ಸಿಕ್ಕಲ್ಲಿ ಹಚ್ಚೊಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ದೂ.8550833268 ಹಾಗೂ ಬಳ್ಳಾರಿ ಕಂಟ್ರೋಲ್ ರೂಂ ದೂ.08392–258100 ಗೆ ಸಂಪರ್ಕಿಸಬಹುದು ಎಂದು ಠಾಣೆಯ ಪೊಲೀಸ್ ಸಬ್‌ಇನ್ಸೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಸ್ತೆ ಸರಿಪಡಿಸಲು ಅನೀಲರೆಡ್ಡಿ ಪುಟಕಲ್ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ತಾಲ್ಲೂಕಿನ ಬಸವಂತಪೂರ ಗ್ರಾಮದ ಮರಗೇಮ್ಮಾ ದೇವಸ್ಥಾನದ ಎದುರುಗಡೆ ರಸ್ತೆಯ ಮೇಲೆ ನೀರು ನಿಂತುಕೊಂಡು ಗಬ್ಬುವಾಸನೆಯಿಂದ ಕೂಡಿದೆ. ಗ್ರಾಮದ ಗ್ರಾಮಸ್ಥರು ಮೂಗು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಮೇನ್ ರಸ್ತೆ ದುರಸ್ಥಿ ಮಾಡಬೇಕೆಂದು ಬಸವಂತಪೂರ ಗ್ರಾಮದ ನಿವಾಸಿ ಅನೀಲರೆಡ್ಡಿ ಪುಟಕಲ್ ಇವರು ಆಗ್ರಹಿಸಿದ್ದಾರೆ. ಆದ್ದರಿಂದ ಸಂಬಂಧ ಪಟ್ಟ ಅಧಿಕಾರಿಗಳು ಕ್ರಮಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

## ಜೀವನದಲ್ಲಿ ಜಿಗುಪ್ಸೆಗೊಂಡು ವ್ಯಕ್ತಿ ನೇಣಿಗೆ ಶರಣು




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.21–ಜೀವನದಲ್ಲಿ ಜಿಗುಪ್ಸೆಗೊಂಡು ವ್ಯಕ್ತಿಯೊಬ್ಬ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಡಬರಾಬಾದ ಕ್ರಾಸ್ ಹತ್ತಿರದ ಲಕ್ಷ್ಮೀ ನಗರದಲ್ಲಿ ನಡೆದಿದೆ.

ಪ್ರಭು ಹಳ್ಳಿ ಆತ್ಮಹತ್ಯೆ ಮಾಡಿಕೊಂಡವರು.

ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ ಪ್ರಭು ಹಳ್ಳಿ ಅವರು ಕುಡಿತದ ಚಟಕ್ಕೆ ಅಂಟಿಕೊಂಡಿದ್ದರು. ಪತ್ನಿ ಜೊತೆಗೆ ಜಗಳವಾಡಿದ್ದರಿಂದ ಅವರು ಮಕ್ಕಳನ್ನು ಕರೆದುಕೊಂಡು ಹತ್ತಿರದಲ್ಲಿರುವ ಸಂಬಂಧಿಕರ ಮನೆಗೆ ಹೋಗಿದ್ದರು. ಈ ವೇಳೆ ಪ್ರಭು ಅವರು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಈ ಸಂಬಂಧ ಅವರ ಪತ್ನಿ ಶಶಿಕಲಾ ಹಳ್ಳಿ ಅವರು ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

## ಬಿಜೆಪಿ ಬೂತ್ ಮಟ್ಟದ ಅಧ್ಯಕ್ಷರುಗಳ ಸಭೆ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಅ. 21–ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಬೂತ್ ಮಟ್ಟದ 269 ಅಧ್ಯಕ್ಷರುಗಳು ಕಾರ್ಯಕ್ರಮಕ್ಕೆ ಬೆಂಗಳೂರುನಗರ ದಕ್ಷಿಣ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು, ನಿಕಟಪೂರ್ವ ಬಿಬಿಎಂಪಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿರವರು ಭಾರತಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಬೂತ್ ಮಟ್ಟದ ಅಧ್ಯಕ್ಷರುಗಳು ಸಭೆಗೆ ಚಾಲನೆ ನೀಡಿದರು. ಮಾಜಿ ಪಾಲಿಕೆ ಸದಸ್ಯರುಗಳಾದ ಚಂದ್ರಶೇಖರಯ್ಯ, ರಾಮಪ್ಪ, ಬಿಜೆಪಿ ಪಕ್ಷದ ಪ್ರಮುಖರುಗಳಾದ ನಂಜಪ್ಪ, ರಾಮಪ್ಪ, ಗಂಗಣ್ಣ, ಶಾಮಣ್ಣ ನಿರಜ್ ಕಾಮತ್, ವೇಲು ಮೂರ್ತಿ ವಿನುತಾ ವೆಂಕಟೇಶ್, ಈಶಣ್ಣರವರು ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಕೆ.ಉಮೇಶ್ ಶೆಟ್ಟಿರವರು ಮಾತನಾಡಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಎಂಬ ಉಜ್ವಲ ದೀಪ ಬೆಳಗಲಿದೆ. ಎಲ್ಲರೂ ಬಿಜೆಪಿಯತ್ತ ಮುಖ ಮಾಡುತ್ತಿದ್ದಾರೆ ಎಂದರು.

ಪ್ರಧಾನಿ ನರೇಂದ್ರಮೋದಿರವರು, ಗೃಹ ಸಚಿವರು ಅಮಿತ್ ಷಾರವರು ಬೂತ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಮಾನ್ಯ ಕಾರ್ಯಕರ್ತನು ಪ್ರಧಾನಿ ಹುದ್ದೆಯನ್ನು ಬಿಜೆಪಿ ಪಕ್ಷದಲ್ಲಿ ಅಲಂಕರಿಸಬಹುದು ಎಂದರು.

ಪಕ್ಷಸಂಘಟನೆಗೆ, ಶಕ್ತಿತುಂಬಬೇಕು 269 ಬೂತ್‌ಗಳಿಗೆ ಅಧ್ಯಕ್ಷರುಗಳನ್ನು ನೇಮಿಸಲಾಗಿದೆ ಮತ್ತು 13 ವಾರ್ಡ್‌ಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ನಮ್ಮ ಕ್ಷೇತ್ರದ 269ಬೂತ್ ಅಧ್ಯಕ್ಷರುಗಳನ್ನು ಮುಂದಿನ ವಾರದಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯದ ಉಸ್ತುವಾರಿ ರಾಧಮೋಹನ್ ಅಗರವಾಲ್ ರವರು ನೇರ ಭೇಟಿ ಮಾಡಲಿದ್ದಾರೆ ಎಂದು ಹೇಳಿದರು.


## ಭಾಗ್ಯವಂತಿ ದೇವಿಯ ಪಲ್ಲಕ್ಕಿ ಮೆರವಣಿಗೆಗೆ ಮಿಲಿಂದ್ ಕುಲಕರ್ಣಿ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಅ 21 ತಾಲೂಕಿನ ಕೌಡಿಯಾಳ ಗ್ರಾಮದಲ್ಲಿ ಶ್ರೀ ಭಾಗ್ಯವಂತಿ ದೇವಯ 22 ನೇಯ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಮಂಗಳವಾರ ಭಾಗ್ಯವಂತಿ ತಾಯಿಯ ಪಲ್ಲಕ್ಕಿ ಮೆರವಣಿಗೆಯ ಕಾರ್ಯಕ್ರಮಕ್ಕೆ ಹುಮನಾಬಾದ ತಾಲೂಕಿನ ಬ್ರಾಹ್ಮಣ ಸಮಾಜದ ಉಪಾಧ್ಯಕ್ಷರಾದ ಮಿಲಿಂದ್ ಮುರಳಿಧರ್ ರಾವ್ ಕುಲಕರ್ಣಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಭಾಗ್ಯವಂತಿ ತಾಯಿ. ಗಾ. ಪಂ. ಸದಸ್ಯರಾದ ಮಾರುತಿ ಬಿರಾದಾರ ಹಾಗೂ ಧನರಾಜ ಬಿರಾದಾರ ಗೋಪಾಲ್. ವಿಜಯಕುಮಾರ. ರಾಜೇಶ್ವರ್ ಹಾಗೂ ಕೌಡಿಯಾಳ ಮಹಿಳಾ ಸಂಘದವರು ಹಾಗೂ ಗ್ರಾಮಸ್ಥರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕನಿಷ್ಠ ಬೆಂಬಲ ಬೆಲೆಯಡಿ ಹತ್ತಿ ಮಾರಾಟ: ನೋಂದಣಿ ಅವಧಿ ಅಕ್ಟೋಬರ್ 31ರವರೆಗೆ ವಿಸ್ತರಣೆ



ಮಲ್ಲಮ್ಮ ನುಡಿ ವಾರ್ತೆ


ರಾಯಚೂರು ಅಕ್ಟೋಬರ್ 21–ಹತ್ತಿ ಬೆಳೆಯುವ ರೈತರ ಹಿತದೃಷ್ಟಿಯಿಂದ ಕೇಂದ್ರ ಸರಕಾರದ ಜವಳಿ ಇಲಾಖೆಯವರ ವ್ಯಾಪ್ತಿಗೆ ಒಳಪಡುವ ಭಾರತೀಯ ಹತ್ತಿ ನಿಗಮ ನಿಯಮಿತ (The Cotton Corporation of India) ಹೊರಡಿಸಿರುವ 2025–26ನೇ ಬೆಲೆ ವರ್ಷದಲ್ಲಿ ಕನಿಷ್ಠ ಬೆಂಬಲ ಬೆಲೆ (ಒಖಕ) ಅಡಿಯಲ್ಲಿ ಹತ್ತಿ ಮಾರಾಟ ಮಾಡಲು ಲಭ್ಯವಿರುವ "ಕಪಾಸ್ ಕಿಸಾನ್"ಮೊಬೈಲ್ ಅಪ್ಲೀಕೇಶನ್ ಮೂಲಕ ನೋಂದಾಯಿಸಿಕೊಳ್ಳಲು ನೋಂದಣಿ ಅವಧಿಯನ್ನು ಅಕ್ಟೋಬರ್ 31ರವರೆಗೆ ವಿಸ್ತರಿಸಲಾಗಿದೆ.

ನೋದಾಣಿಗಾಗಿ ಸರಳ ವಿಧಾನ ಅನುಸರಿಸಬೇಕು. ಕಪಾಸ್ ಕಿಸಾನ್ ಆಪ್ ಡೌನ್ಲೋಡ್ ಮಾಡಬೇಕು. ಭೂ ದಾಖಲೆಗಳಾದ ಪಹಣಿ, ಆಧಾರ್ ಕಾರ್ಡ್, ಕೃಷಿ ಇಲಾಖೆಯವತಿಯಿಂದ ನೋಂದಾಯಿಸಲಾದ ಎಫ್ ಐಡಿ ಸಂಖ್ಯೆ ಇವುಗಳನ್ನು ಬಳಸಿಕೊಂಡು ನೋಂದಾಯಿಸಬೇಕು.

ನೋಂದಾಯಿತ ರೈತರಿಂದ ಹತ್ತಿ ಖರೀದಿಯನ್ನು ಭಾರತೀಯ ಹತ್ತಿ ನಿಗಮ ಇವರ ಜಿನ್ನಿಂಗ್ & ಪ್ರಸ್ಸಿಂಗ್ ಕೆಲಸದ ಅಧಿಕೃತ ಭಾಗಿಧಾರರಾದ ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘದ ಜಿನ್ನಿಂಗ್ & ಪ್ರಸ್ಸಿಂಗ್ ಘಟಕದಲ್ಲಿ ಅಥವಾ ರೈತರು ತಮಗೆ ಹತ್ತಿರದ ಭಾರತೀಯ ಹತ್ತಿ ನಿಗಮ ನಿಯಮಿತ ಇವರು ಸೂಚಿಸಿದ ಖಾಸಗಿ ಹತ್ತಿ ಜಿನ್ನಿಂಗ್ & ಫ್ರಸ್ಸಿಂಗ್ ಕಾರ್ಖಾನೆಗಳಿಗೆ ನೀಡಬಹುದಾಗಿದೆ.

ಹತ್ತಿಯ ಕನಿಷ್ಠ ಬೆಂಬಲ ಬೆಲೆ (MSP) ಮಧ್ಯಮ ಪ್ರಧಾನ ಹತ್ತಿಗೆ ಕ್ವಿಂಟಲ್‌ಗೆ ರೂಪಾಯಿ 7,710 ಮತ್ತು ಉದ್ದ ಪ್ರಧಾನ ಹತ್ತಿಗೆ ಕ್ವಿಂಟಲ್‌ಗೆ ರೂಪಾಯಿ 8,110 ಆಗಿದೆ. ಇನ್ನುಳಿದಂತೆ ಈ ಮೇಲಿನ ಧರಗಳಲ್ಲಿ ಬೆಲೆಯನ್ನು ಭಾರತೀಯ ಹತ್ತಿನಿಗಮ ನಿಯಮಿತ (ಅಅಖ) ಅಧಿಕಾರಿಗಳು ರೈತರ ಹತ್ತಿಯ ಗುಣಮಟ್ಟವನ್ನು ಪರಿಶೀಲಿಸಿ ಧರ ನಿಗಧಿಪಡಿಸುವರು. ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಲಾಭ ಪಡೆಯಲು ಬೆಂಬಲ ಬೆಲೆಯೋಜನೆಯ ಅಡಿಯಲ್ಲಿ ಹತ್ತಿಯನ್ನು ಮಾರಾಟ ಮಾಡುವಂತೆ ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಪತಂಗೆ ಜಯವಂತ್ ರಾವ್ ಹಾಗೂ ಉಪಾಧ್ಯಕ್ಷರಾದ ಶ್ರೀ ಶಶೀಧರ ಪಾಟೀಲ್, ಶ್ರೀ ಶೇಕ್ ಹುಸೇನ್ ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಬಂದಯ್ಯ ಸ್ವಾಮಿ ಪ್ರಧಾನ ವ್ಯವಸ್ಥಾಪಕರು ಅವರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

## ಸೈದಾಪುರ: ಭಗವಾನ ಮಹಾವೀರ ಶಾಲೆಯ ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ:ಅ.16: ಪಟ್ಟಣದ ಶ್ರೀ ಭಗವಾನ ಮಹಾವೀರ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳು 2025–26ನೇ ಸಾಲಿನ ಜಿಲ್ಲಾ ಮಟ್ಟದ ಕ್ರೀಡಾಕೂಟದ ವೈಯಕ್ತಿಕ ಕ್ರೀಡೆಗಳಲ್ಲಿ ಭಾಗವಹಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದಲ್ಲಿ ಪ್ರಶಾಂತ, ಉದ್ದ ಜಿಗಿತ ಪ್ರಥಮ, ಪ್ರೇಮಾ.ಎನ್ 800ಮೀ ಓಟ, 3 ಕಿ.ಮೀ ನಡಿಗೆ ಪ್ರಥಮ, ಗಣೇಶ ಹ್ಯಾಮರ ಥ್ರೋ–ಪ್ರಥಮ, ಸುನೀಲ್ ಹ್ಯಾಮರ ಥ್ರೋ ದ್ವಿತೀಯಾ, ನಂದಿನಿ ಹ್ಯಾಮರ್ ಥ್ರೋ–ಪ್ರಥಮ, ಶಾಹೀದ್ 100ಮೀ ಓಟ ಪ್ರಥಮ, ಮನೋಜ 100ಮೀ ಓಟ ದ್ವಿತೀಯ, ಅರುಣಕುಮಾರ 400ಮೀ ಓಟ ದ್ವಿತೀಯ, ದೀಪಕಕುಮಾರ 800 ಮೀ–ಪ್ರಥಮ, ಸಲೀಂ 800ಮೀ–ದ್ವೀತಿಯ, ಅಜಯ 400ಮೀ ಪ್ರಥಮ, ಯಶ್‌ರಾಜ 400ಮೀ–ದ್ವಿತೀಯ, ಬಾಲರಾಜ 100ಮೀ,600ಮೀ–ಪ್ರಥಮ, ರೀಕ್ಷೀತಾ ಹ್ಯಾಮರ ಥ್ರೋ– ದ್ವಿತೀಯ, ಪರಶುರಾಮ ಎತ್ತರ ಜಿಗಿತ 200ಮೀ, ಉದ್ದ ಜಿಗಿತ–ದ್ವಿತೀಯ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಾಗೂ ವಿದ್ಯಾರ್ಥಿಗಳ ಈ ಉನ್ನತ ಸಾಧನೆಗೆ ಕಾರಣಿಭೂತರಾದ ದೈಹಿಕ ಶಿಕ್ಷಕರ ವೃಂದಕ್ಕೆ, ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು, ಹಾಗೂ ಸಹ ಶಿಕ್ಷಕರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದರು.


## ದೀಪಾವಳಿ ದಿನವೇ ಭಾರತಕ್ಕೆ ಟ್ರಂಪ್ ಸುಂಕದ ಭೀತಿ



ಮಲ್ಲಮ್ಮ ನುಡಿ ವಾರ್ತೆ

ವಾಷಿಂಗ್ಟನ್.ಅ. 21: ಬೆಳಕಿನ ಹಬ್ಬ ದೀಪಾವಳಿ ದಿನವೂ ಅಮೆರಿಕ ಅಧ್ಯಕ್ಷ ಭಾರತದ ವಿರುದ್ಧ ಗುಡುಗಿದ್ದಾರೆ. ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸದಿದ್ದರೆ ಮತ್ತಷ್ಟು ಭಾರಿ ಸುಂಕ ವಿಧಿಸುವುದಾಗಿ ಎಚ್ಚರಿಸಿದ್ದಾರೆ. ಇದಲ್ಲದೆ, ಭಾರತ ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ ಮತ್ತು ಈ ವಿಷಯದ ಬಗ್ಗೆ ಪ್ರಧಾನಿ ಮೋದಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ.

## ಶಿಕ್ಷಕರ ಕೊರತೆ ವ್ಯರ್ಥವಾದ ಕಂಪ್ಯೂಟರ್ ಬಳಕೆ



ಮಲ್ಲಮ್ಮ ನುಡಿ ವಾರ್ತೆ

ಸಂಡೂರು :ಅ:21 ತಾಲೂಕಿನ ಚೋರನೂರು ಹೋಬಳಿಯ ಬಂಡ್ರಿ ಗ್ರಾಮದ ಬಳಿ ಇರುವ ಕೊಮಡಪುರದ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಲವಾರು ವರ್ಷಗಳಿಂದ ಖಾಯಂ ಶಿಕ್ಷಕರ ಕೊರತೆಯಿಂದ ಶಾಲೆಯಲ್ಲಿನ 6 ಕಂಪ್ಯೂಟರ್‌ಗಳು ಉಪಯೋಗಕ್ಕೆ ಬಾರದಂತಾಗಿದೆ.

ಶಾಲೆಯಲ್ಲಿ 1 ರಿಂದ 6ನೇ ತರಗತಿಯ ವರೆಗೆ 150 ಮಕ್ಕಳಿದ್ದು, 150 ಮಕ್ಕಳು ಅಭ್ಯಾಸ ಮಾಡುತ್ತಿದ್ದು, ಒಬ್ಬರು ಮುಖ್ಯ ಶಿಕ್ಷಕರು 4 ಜನ ಅತಿಥಿ ಶಿಕ್ಷಕರು ಸೇವೆ ಸಲ್ಲಿಸಿ ಸೇವೆಯಲ್ಲಿ ಗಣಕ ಯಂತ್ರ ಶಿಕ್ಷಕ ಇತರೆ ಶಿಕ್ಷಕರು ಖಾಯಂ ಆಗಿ ಇಲ್ಲದೇ ಇರುವುದರಿಂದ ಲಕ್ಷಾಂತರ ವೆಚ್ಚ ಮಾಡಿದ ಗಣಕ ಯಂತ್ರಗಳು ವ್ಯರ್ಥವಾಗಿದ್ದು, ಮಕ್ಕಳ ಕಲಿಕೆ ಹಿನ್ನಡೆಯಾಗಿದೆ. ಶಾಲೆಯಲ್ಲಿ 6 ಗಣಕ ಯಂತ್ರಗಳನ್ನು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಂಡಳಿಯ ಅನುದಾನ ಸೇರಿದಂತೆ ಸರ್ಕಾರದ ಇತರೆ ಅನುದಾನದಲ್ಲಿ ಗಣಕ ಯಂತ್ರಗಳನ್ನು ಖರೀದಿಸಲಾಗಿದ್ದು, ಮುಖ್ಯ ಶಿಕ್ಷಕರ ಕೊಠಡಿಯಲ್ಲಿ ಅಳವಡಿಸಲಾಗಿದೆ. ಗಣಕಯಂತ್ರ ಬಳಕೆ ಮಾಡಲು ಸೂಕ್ತವಾದ ಆಸನೆಗಳನ್ನು ಮಾಡದೇ ಇರುವುದರಿಂದ ಕಂಪ್ಯೂಟರ್ ಸೇವೆ ವ್ಯರ್ಥವಾಗಿದೆ. ಗ್ರಾಮದಲ್ಲಿನ ಸರ್ಕಾರಿ ಶಾಲೆಗೆ ಹಲವಾರು ವರ್ಷಗಳಿಂದ ಖಾಯಂ ಶಿಕ್ಷಕರ ಕೊರತೆ ಇದ್ದು, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಬಹಳ ತೊಂದರೆಯಾಗಿದೆ. ಸರ್ಕಾರವು ಕುಡಲೇ ಖಾಯಂ ಶಿಕ್ಷಕರನ್ನು ನೇಮಕ ಮಾಡಬೇಕು. ಗಣಕಯಂತ್ರವನ್ನು ಶಿಕ್ಷಕರು ಸೇರಿದಂತೆ ಇತರೆ ವಿಷಯಗಳು ಶಿಕ್ಷಕರನ್ನು ಶೀಘ್ರವಾಗಿ ನೇಮಕ ಮಾಡಬೇಕು.

ಶಾಲೆಯ ಆವರಣದಲ್ಲಿನ ಹಳೆ ಕೊಠಡಿಗಳನ್ನು ನೂತನ ಶಾಲಾ ಕೊಠಡೆಇಗಳನ್ನು ನಿರ್ಮಿಸಬೇಕು.

ಶಾಲೆಗೆ ಕುಡಿಯವ ನೀರು ಶೌಚಾಲಯ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಬೇಕೆಂದು ಗ್ರಾಮದಲ್ಲಿನ ಸಾರ್ವಜನಿಕರು ಶಿಕ್ಷಕ ಇಲಖೆಯವರನ್ನು ಒತ್ತಾಯಿಸಿದ್ದಾರೆ. ಶಾಲೆಯಲ್ಲಿನ ಗಣಕಯಂತ್ರಗಳನ್ನು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಬಿಡುವಿನ ಸಮಯದಲ್ಲಿ ಬಳಕೆ ಮಾಡಲಾಗುತ್ತಿದೆ. ಎನ್ನುವ ಅಳಲನ್ನು ತೊಡಿಕೊಂಡವರು ಮುಖ್ಯ ಶಿಕ್ಷಕ ಮಧುಕೇಶವರವರು ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ.

ಶಾಲೆಗೆ ಖಾಯಂ ಶಿಕ್ಷಕರನ್ನು ಶೀಘ್ರವಾಗಿ ನೇಮಕ ಮಾಡಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಡಾ॥ ಐ.ಆರ್. ಅಕ್ಕಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಕಷ್ಟದ ನಡುವೆಯೂ ಸಂಭ್ರಮದ ದೀಪಾವಳಿ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟೆ :ಅ.21: ಅತಿವೃಷ್ಠಿ ಮಳೆಯಿಂದ ರೈತಾಪಿ ಜನರು ಬಿತ್ತನೆ ಮಾಡಿದ ಖರ್ಚು ಬಂದರೆ ಸಾಕಪ್ಪಾ ಎಂಬ ಭಾವನೆಯ ನಡುವೆಯು ಈ ಭಾಗದ ಜನರು ಪೂಜಾ ಸಾಮಾಗ್ರಿಗಳ, ಹಣ್ಣು ಹಂಪಲುಗಳ ಬೆಲೆ ಗಗನಕ್ಕೇರುತ್ತಾ ಸಾಗಿದೆ ಅಲ್ಲದೇ ದುಡಿಯುವ ಕೈಗಳಿಗೆ ಸಿಗಬೇಕಿದ್ದ ಕೆಲಸವನ್ನು ವರುಣ ದೇವನು ಕಸಿದುಕೊಂಡಿದ್ದರ ನಡುವೆಯು ಬೆಲೆ ಜಾಸ್ತಿಯಾಗಿದ್ದರಿಂದ ಸಂಕಷ್ಟದ ನಡುವೆ ಬೆಳಕಿನ ಹಬ್ಬ ದೀಪಾವಳಿ ಸಂಭ್ರಮದಿಂದ ಆಚರಿಸುತ್ತಿರುವುದು ಕಂಡುಬರಹತ್ತಿದೆ.

ಬೆಳಕಿನ ದೀಪಾವಳಿಯು ಈ ಸಲ ಸಂಭ್ರಮದಿಂದ ಆಚರಿಸಬೇಕೆಂದರೆ, ಮಳೆ ಉತ್ತಮವಾಗಿ ಜಮೀನಿನಲ್ಲಿ ಫಸಲು ಮೈದುಂಬಿಕೊಂಡು ಬರುತ್ತದೆ ಮಳೆಯು ಚೆನ್ನಾಗಿ ಆಗಿದೆ ಎಂಬ ಸಂತೋಷದ ಸಮಯದಲ್ಲಿ ಅತಿವೃಷ್ಠಿ ಮಳೆಗೆ ತೊಗರಿ, ಹತ್ತಿ, ಇನ್ನಿತರ ಬೆಳೆಗಳು ಕೈಕೊಟ್ಟಿವೆ ಅಲ್ಲದೇ ಪೂಜಾ ಸಾಮಗ್ರಿಗಳಿಗೆ ಅವಶ್ಯವಿರುವ ಚೆಂಡು ಹೂವು ಒಳಗೊಂಡು ಇನ್ನಿತರ ಹೂವುಗಳು ಸಹ ಕೈಕೊಟ್ಟಿದ್ದರಿಂದ ಅಲ್ಪ ಸ್ವಲ್ಪ ಬಂದ ಹೂವುಗಳನ್ನು ಖರೀದಿಸುವದರೊಂದಿಗೆ ಕೈಯಲ್ಲಿ ಕಾಸಿಲ್ಲಾ ಎಂಬ ಚಿಂತೆಯೊಳಗೆ ಸಂಭ್ರಮದ ದೀಪಾವಳಿ ಆಚರಣೆಗೆ ಎಲ್ಲರೂ ಮುಂದಾಗಿದ್ದು ಆದರೆ ಪೂಜಾ ಸಾಮಗ್ರಿಗಳ ಬೆಲೆಯಿಂದ ಹಿಡಿದು ಹಣ್ಣು ಹಂಪಲಗಳ ಬೆಲೆಯೂ ಗಗನಕ್ಕೇರಿದೆ. ಸತತ ಬರಗಾಲದಿಂದ ತತ್ತರಿಸಿದ್ದ ಈ ಭಾಗದ ಜನರು ಈ ಭಾರಿ ಹಸಿ ಬರಕ್ಕೆ ನಲುಗಿರುವ ಜನರ ಕೈಯಲ್ಲಿ ಕಾಸಿಲ್ಲದೇ ಹಬ್ಬದ ಸಡಗರಕ್ಕೆ ಮಂಕು ಬಡದಂತಾಗಿದೆ. ಈ ಭಾರಿ ಉತ್ತಮ ಮಳೆಯಾಗಿದೆ ಎಂದು ಗೂಳೆ ಹೋದ ಜನರು ಮರಳಿ ತಮ್ಮ ತಮ್ಮ ಗ್ರಾಮಗಳಿಗೆ ಬಂದರೂ ದುಡಿಯುವ ಕೈಗಳಿಗೆ ಸರಿಯಾಗಿ ಕೆಲಸ ಸಿಕ್ಕಿಲ್ಲ ಇದರಿಂದ ಹಬ್ಬಕ್ಕೆ ಕಾಸಿಲ್ಲದೇ ಸಂಕಷ್ಟದ ನಡುವೆಯೂ ಹಬ್ಬ ಆಚರಿಸುವಂತಾಗಿದೆ.

ಮಾರುಕಟ್ಟೆಯಲ್ಲಿ ಈಗಾಗಲೇ ಚೆಂಡು ಹೂವು, ಬಾಳಿಗಿಡಗಳು ಅಲ್ಲದೇ ಇನ್ನಿತರ ಪೂಜಾ ಸಾಮಗ್ರಿಗಳು ಕಾಣಿಸುತ್ತಿದ್ದರೂ ಗಗನಕ್ಕೇರಿರುವ ಎಲ್ಲದರ ಬೆಲೆಯನ್ನು ಕಂಡ ಜನತೆ ಶೇ. 90 ರಷ್ಟು ಜನರು ದರ ವಿಚಾರಿಸುತ್ತಾ ಮುನ್ನಡೆಯುತ್ತಿರುವದು ಸಾಮಾನ್ಯವಾಗಿದೆ. ಅಡತ್ ಮತ್ತು ಕಿರಾಣಿ ಹಾಗೂ ಇನ್ನಿತರ ಅಂಗಡಿಗಳಿಗೆ ಸಂಬಂಧಿಸಿ ಡೆಕೋರೇಶನ್ ಸಾಮಾಗ್ರಿಗಳ ಬೆಲೆ ಕಳೆದ ವರ್ಷಕ್ಕಿಂತ ಈ ಭಾರಿ ಶೇ.30 ರಷ್ಟು ಹೆಚ್ಚಳವಾಗಿದ್ದು ಕಂಡುಬಂದಿತು.

ಕೆಲವರು ಸರ್ಕಾರದ ನಿರ್ದೇಶನ ಮತ್ತು ಮನವಿಯನ್ನು ಪರಿಗಣಿಸಿ ಪಟಾಕಿ ಖರೀದಿಗೂ ಆಸಕ್ತಿ ತೋರಿಸುತ್ತಿಲ್ಲಾ ಪಟಾಕಿ ಬೆಲೆಯಲ್ಲಿ ಈ ಭಾರಿ ಏರೀಳಿತ ಭಾರಿಯಾಗಿದ್ದರಿಂದ ಕೆಲವರು ಹಸಿರು ಪಟಾಕಿಗಳನ್ನು ಖರೀದಿಸಿದರೆ ಇನ್ನು ಕೆಲವರು ಚಕ್ರ, ಸುರಸುರ ಬತ್ತಿ, ಉಕ್ಕಿನ ಗುಳ್ಳಿ ಖರೀದಿಸಿ ಅಲ್ಪ ಖರ್ಚಿನಲ್ಲಿಯೇ ಸಂಭ್ರಮದ ಬೆಳಕಿನ ಹಬ್ಬ ಆಚರಣೆಗೆ ಮುಂದಾಗಿದ್ದಾರೆ.

ಈ ಭಾರಿ ಹಸಿ ಬರದ ಛಾಯೇ ಆವರಿಸಿದ್ದರಿಂದ ರೈತರು, ಮಧ್ಯಮವರ್ಗದ ಜನರು ಸಂಕಷ್ಟಕ್ಕೆ ಸಿಲುಕಿಕೊಂಡಿದ್ದರಿಂದ ದುಡಿಯುವ ಕೈಗಳಿಗೆ ಕೆಲಸ ಸಿಗದೇ ಸಣ್ಣ ಪುಟ್ಟ ವ್ಯಾಪಾರಕ್ಕೆ ಮುಂದಾಗಿದ್ದು ಇನ್ನೂ ಗ್ರಾಮಾಂತರ ಮಟ್ಟದ ಜನರಲ್ಲಿ ರೈತರಲ್ಲಿ ಹಣದ ಕೊರತೆ ಹೆಚ್ಚಾಗಿದ್ದರಿಂದ ಸಂಭ್ರಮದ ಬೆಳಕಿನ ಹಬ್ಬಕ್ಕೆ ಮಂಕು ಬಡಿದಂತಾಗಿದೆ.

# ಕಾನೂನಿನ ಸಹಾಯ ಕೇಳಿ ಬಂದವರಿಗೆ ಸ್ಪಂದಿಸಿ ಕೆಲಸ ಮಾಡಿ: ಶಾಂತನು ಸಿನ್ಹಾ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ನೊಂದು,ಬೆಂದು ಕಾನೂನಿನ ಸಹಾಯ ಕೇಳಿ ಪೊಲೀಸ್ ಠಾಣೆಗೆ ಬರುವ ಸಾರ್ವಜನಿಕರ ಕಷ್ಟಕ್ಕೆ ಅಧಿಕಾರಿ,ಸಿಬ್ಬಂದಿ ಸ್ಪಂದಿಸಿ ಪರಿಹಾರನೀಡುವಧ್ವನಿಯಾಗಬೇಕೆಂದು ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ ಹೇಳಿದರು.

ಇಲ್ಲಿನಜಿಲ್ಲಾಪೊಲೀಸ್ಮೈದಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪೊಲೀಸ್ ಹುತಾತ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪೊಲೀಸ್ ಹುತಾತ್ಮರಿಗೆ ರೀಥ್ ಸಮರ್ಪಣೆಗೈದು ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

ಸರ್ಕಾರ ಇಲಾಖೆಗೆ ಸಾಕಷ್ಟು ಸವಲತ್ತುಗಳನ್ನು ನೀಡಿದೆ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ನಿಯಮಗಳ ಅಡಿ ಶಿಸ್ತುನಿಂದ ಮೇಲಾಧಿಕಾರಿಗಳ ಆದೇಶಗಳನ್ವಯ ಕರ್ತವ್ಯಪಾಲಿಸಬೇಕೆಂದು ಹೇಳಿದರು.

ಪೊಲೀಸ್ ಇಲಾಖೆಗೆ ಹತ್ತು, ಹಲವಾರು ಸವಾಲುಗಳನ್ನು ಎದುರಿಸಿ ಉತ್ತಮವಾಗಿ ಕೆಲಸ ನಿರ್ವಹಿಸಬೇಕಿದೆ. ಅಧಿಕಾರಿ,ಸಿಬ್ಬಂದಿ ವರ್ಗದವರು ತಮ್ಮ ಆರೋಗ್ಯದ ಕಡೆಗೆ ಗಮನ ಹರಿಸಿ, ಕರ್ತವ್ಯದ ಜೊತೆಗೆ ಕುಟುಂಬದವರಿಗೆ ಸಮಯ ನೀಡಿ ಉತ್ತಮ ಜೀವನ ನಡೆಸಬೇಕೆಂದು ಶಾಂತನು ಸಿನ್ಹಾ ಮಾರ್ಮಿಕವಾಗಿ ಹೇಳಿದರು. ಯಾವುದೇ ಕಾರಣಕ್ಕೂ ಇಲಾಖೆಯನ್ನು ಮುಜುಗರಕ್ಕೆ ಈಡಾಗುವ ಕೆಲಸ ಮಾಡದೇ ಗೌರವ ಕಾಪಾಡುವ ಕೆಲಸ ಮಾಡಿ ಎಂದು ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ಹೇಳಿದರು. ರಾಷ್ಟ್ರರಕ್ಷಣೆಗಾಗಿ ತಮ್ಮ ಅಮೂಲ್ಯವಾದ ಪ್ರಾಣ ತೆತ್ತ ಎಲ್ಲ ವೀರಯೋಧರರನ್ನು ನೆನದ ಅವರು, ಕುಟುಂಬಕ್ಕೆ ದೇವರು ಸುಖ, ಶಾಂತಿ ನೀಡಲಿ ಎಂದರು. ಜಿಲ್ಲಾಧಿಕಾರಿ ಹರ್ಷಲ್ ಬೋಯರ್ ಮಾತನಾಡಿ, ಪೊಲೀಸ್ ಕೆಲಸ ಅತ್ಯಂತ ಕಠಿಣ ಮತ್ತು ಸವಾಲಿನದ್ದಾಗಿದೆ. ಇದನ್ನು ಜಿಲ್ಲೆಯ ಪೊಲೀಸರು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿ, 1959 ಅ.21 ರಂದು 10 ಸಿಆರ್ ಪಿಎಫ್ ಯೋಧರು ಸಹಾಯಕ ಕಮಾಂಡೆಂಟ್ ಕರಣಸಿಂಗ್ ನೇತೃತ್ವದಲ್ ನ ಅಕ್ಸಾಯಿಚಿನ್ ಗಡಿ ಕಾಯುವಾಗ ಚೀನಾ ಸೈನಿಕರು ಹಠಾತ್ ದಾಳಿ ಮಾಡಿದ ನಮ್ಮವರು ಗಡಿ ರಕ್ಷಣೆಗಾಗಿ ಜೀವದ ಹಂಗು ತೊರೆದು ಕೊನೆ ಉಸಿರು ಇರುವವರೆಗೂ ಹೋರಾಡಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ದಿವ್ಯ ಸ್ಮರಣೆಗಾಗಿ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ಜಿಪಂ ಸಿಇಒ ಲವೀಶ್ ಒರ್ಡಿಯಾ, ಹೆಚ್ಚುವರಿ ಎಸ್ ಪಿ ಧರಣೇಶ, ಶ್ರೀಮತಿ ಶಾಂತನು ಸಿನ್ಹಾ ವೇದಿಕೆಯಲ್ಲಿ ಇದ್ದರು. ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿದರು.

ಪರೇಡ್ ಕಮಾಂಡರ್ ಅವರಿಂದ ಕವಾಯತು, ಪೊಲೀಸ್ ಧ್ವಜವನ್ನು ಅರ್ಧಕ್ಕೆ ಇಳಿಸಿ ನಂತರ ಮೇಲೆ ಏರಿಸಲಾಯಿತು. ಫೈರಿಂಗ್ ಪಾರ್ಟಿಯವರಿಂದ ಮೂರು ಸುತ್ತು ಗುಂಡು ಹಾರಿಸುವುದರ ಮೂಲಕ ಗೌರವ ಸಮರ್ಪಣೆ ಸಲ್ಲಿಸಲಾಯಿತು.

ಡಿವೈಎಸ್ ಪಿಗಳಾದ ಭರತಕುಮಾರ ತಳವಾರ, ನಾಗರಾಜ್, ಸುರೇಶ ಪಿಐ ಸುನೀಲಕುಮಾರ, ಪಿಎಸ್ ಐ ಮಂಜೇಗೌಡ, ಮಂಜುಳಾ, ನಿವೃತ್ತ ಪೊಲೀಸ್ ಅಧಿಕಾರಿ ಅರುಣಕುಮಾರ ಕೊಳೂರು, ವಿವಿಧ ಸಮುದಾಯಗಳ ಮುಖಂಡರಾದ ಮರೆಪ್ಪ ಚಟ್ಟರಕರ್, ವಿಶ್ವನಾಥ ಸಿರವಾರ ಸೇರಿದಂತೆಯೇ ಇತರರಿದ್ದರು.

# ಬೆಳಕಿನ ಹಬ್ಬಕ್ಕೆ ಮೂಡಲಿ ಭರವಸೆಯ ಬೆಳಕು ಸಂಸ್ಕಾರದ ಬೆಳಕು

ಭಾರತ ದೇಶವು ಸಂಸ್ಕೃತಿಯ ತವರೂರು ಸಂಸ್ಕಾರದ ತವರು ಮನೆ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ದೇಶ ಹಲವು ಧರ್ಮಗಳ ಸಂಗಮ ಹಲವು ಜನಾಂಗಗಳ ಸಮ್ಮಿಲನ ನನ್ನ ಭಾರತ ಶ್ರೇಷ್ಠ ಭಾರತ. ಭಾರತವು ಸನಾತನ ಪರಂಪರೆಯುಳ್ಳ ಈ ಪರಂಪರೆಯಲ್ಲಿ ಹಲವಾರು ಹಬ್ಬಗಳ ಆಚರಣೆಯನ್ನು ನಾವು ಮಾಡುತ್ತಾನೆಬಂದಿದ್ದೇವೆ.ಆಹಬ್ಬಗಳಲ್ಲಿ ಅತ್ಯಂತ ವಿಶಿಷ್ಟ ಮತ್ತು ವಿಶೇಷ ಹಬ್ಬವೆಂದರೆ ಅದುವೇ ದೀಪಾವಳಿ. ಈ ಹಬ್ಬವು ಅಂಧಕಾರದ ಮೇಲೆ ಬೆಳಕಿನ ಅಜ್ಞಾನದ ಮೇಲೆ ಜ್ಞಾನದ ಅನ್ಯಾಯದ ವಿರುದ್ಧ ನ್ಯಾಯದ ವಿಜಯವನ್ನು ಸಂಕೇತಿಸುವ ಅತೀ ಪ್ರಾಚೀನವಾದ ಹಬ್ಬವಾಗಿದೆ.ಹಲವಾರು ಪೌರಾಣಿಕ ಕಥೆಗಳನ್ನು ಹೊಂದಿದೆ ಮುಖ್ಯವಾಗಿ ರಾಮಾಯಣದ ಪ್ರಕಾರ ರಾಮನು ರಾವಣನನ್ನು ಸೋಲಿಸಿ 14 ವರ್ಷಗಳ ವನವಾಸದ ನಂತರ ಅಯೋಧ್ಯೆಗೆ ಮರಳಿದ ದಿನವನ್ನು ಸಂಭ್ರಮಿಸುವ ಮೂಲಕ ಈ ಹಬ್ಬವನ್ನು ಆಚರಿಸಲಾಗುತ್ತದೆ, ಜೊತೆಗೆ ಕೃಷ್ಣನು ನರಕಾಸುರನನ್ನು ಸಂವರಿಸಿದ ದಿನವನ್ನು ದೀಪಾವಳಿ ಎಂದು ಆಚರಣೆ ಮಾಡಲಾಗುತ್ತದೆ, ಪ್ರಾಚೀನ ಸುಗ್ಗಿಯ ಹಬ್ಬವು ದೀಪಾವಳಿಯ ಮೂಲವಾಗಿದೆ. ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಬಹು ಮುಖ್ಯವಾದ ಹಬ್ಬಗಳಲ್ಲೊಂದು ದೀಪಾವಳಿ ಈ ಹಬ್ಬವು ಅಂಧಕಾರದಿಂದ ಬೆಳಕಿಗೆ ಅಜ್ಞಾನದಿಂದ ಜ್ಞಾನಕ್ಕೆ ಅಧರ್ಮದಿಂದ ಧರ್ಮದಡೆಗೆ ಸಾಗುವ ಬದುಕಿನ ಪಯಣವನ್ನು ಪ್ರತಿಬಿಂಬಿಸುತ್ತದೆ. ದೇಶದ ಎಲ್ಲ ಜನರು ಈ ಹಬ್ಬವನ್ನು ಪ್ರೀತಿ, ಮಮತೆ,ಸಂತೋಷ, ಉಲ್ಲಾಸದೊಂದಿಗೆ ಭವ್ಯವಾಗಿ ಆಚರಣೆಯನ್ನು ಮಾಡುತ್ತಾರೆ. ದೀಪಾವಳಿಯ ಹಬ್ಬದ ಮಹತ್ವವೇನೆಂದರೆ ಹಿಂದಿನ ಪೌರಾಣಿಕ ಕಥೆಗಳಲ್ಲಿ ವಿವರಣೆ ನೀಡಿರುವಂತೆ ವಿಭಿನ್ನ ಪ್ರಾಂತ್ಯಗಳಲ್ಲಿ ವಿಭಿನ್ನವಾದ ಆಚರಣೆ ಇದ್ದರೂ ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುವ ಮರ್ಯಾದೆಯ ಪುರುಷೋತ್ತಮ ಶ್ರೀ ರಾಮನು 14 ವರ್ಷಗಳ ಅರಣ್ಯವಾಸದ ನಂತರ ಅಯೋಧ್ಯೆಗೆ ಮರಳಿ ಬರುತ್ತಿರುವ ಸಂದರ್ಭದಲ್ಲಿ ಆಚರಿಸಲಾಗುತ್ತದೆ. ಜನರು ಅವರ ಮರು ಆಗಮನವನ್ನು ಗೌರವಿಸಲು ದೀಪಗಳನ್ನು ಹಚ್ಚಿದರು ಈ ಬೆಳಕು ಅಂಧಕಾರವನ್ನು ದೂರ ಮಾಡುವ ಸಂಕೇತವಾಗಿದೆ. ದಕ್ಷಿಣ ಭಾರತದ ಕೆಲವೊಂದು ಭಾಗಗಳಲ್ಲಿ ದೀಪಾವಳಿಯನ್ನು ನರಕಾಸುರನ ನಾಶದ ಜಯವನ್ನಾಗಿ ಆಚರಿಸಲಾಗುತ್ತದೆ. ಈ ಹಬ್ಬದ ಆಚರಣೆಯು, ಧರ್ಮದ ವಿಜಯ ಅಧರ್ಮದ ನಾಶ ಎಂಬ ಸಂದೇಶವನ್ನು ನೀಡುತ್ತದೆ. ಈ ಹಬ್ಬದ ವಿಶೇಷ ಆಚರಣೆಗಳೆಂದರೆ ಮನೆಯ ಶುದ್ಧೀಕರಣವನ್ನ ಮಾಡುವುದು. ದೀಪಗಳನ್ನು ಹಚ್ಚುವುದು ಲಕ್ಷ್ಮಿ ಪೂಜೆಯನ್ನ ಮಾಡುವುದು. ಪಟಾಕಿಯನ್ನು ಸಿಡಿಸುವುದು ಎಲ್ಲ ಪ್ರೀತಿ ಪಾತ್ರರಿಗೆ ಸಿಹಿ ತಿಂಡಿಗಳನ್ನು ಹಂಚುವುದು ಆಗಿದೆ. ಆಧ್ಯಾತ್ಮಿಕ ಮತ್ತು ಸಾಮಾಜಿಕ ಮಹತ್ವ ಏನೆಂದರೆ , ದೀಪಾವಳಿ ಮಾನವನಲ್ಲಿರುವ ಮೌಲ್ಯಗಳನ್ನು ಬಿಂಬಿಸುವ ಹಬ್ಬವಾಗಿದ್ದು ಇದು ನಮ್ಮಲ್ಲಿರುವ ದೋಷಗಳನ್ನು ತ್ಯಜಿಸಿ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಸರಿಯಾಗಿರುವುದನ್ನು ಆರಿಸಿಕೊಂಡು ಉತ್ತಮ ಕೆಲಸ ಕಾರ್ಯಗಳನ್ನು ಆರಂಭಿಸುವ ಅವಕಾಶವನ್ನು ಮಾಡಿಕೊಡುತ್ತದೆ ಅದರ ಜೊತೆಗೆ ಪರಿಶುದ್ಧ ಮನಸ್ಸಿನಿಂದ ಬದುಕಿನಲ್ಲಿ ಹೊಸ ಆಶಯಗಳನ್ನು ಹೊಸ ಮಾರ್ಗಗಳನ್ನು ತೋರಿಸುತ್ತದೆ. ಕೌಟುಂಬಿಕ ಬಂಧುಗಳು ಒಲವನ್ನು ತೋರುವ, ಸ್ನೇಹಿತರಿಗೆ ಉಡುಗೊರೆ, ನೀಡುವ ಬಡವರಿಗೆ ಸಹಾಯ ಮಾಡುವ, ಹಬ್ಬದ ಸಮಯ ಇದಾಗಿದೆ. ಆಧುನಿಕ ಜೀವನದಲ್ಲಿ ನಾವೆಲ್ಲರೂ ತಂತ್ರಜ್ಞಾನದ ದಾಸರಾಗಿ ಒತ್ತಡದ ಬದುಕನ್ನು ಆಧುನಿಕ ಜೀವನದಲ್ಲಿ ನಾವೆಲ್ಲರೂ ತಂತ್ರಜ್ಞಾನದ ದಾಸರಾಗಿ ಒತ್ತಡದ ಬದುಕನ್ನು ಸಾಗಿಸುತ್ತಿದ್ದೇವೆ, ಈ ದಾಸ್ಯತ್ವದಿಂದ ಹೊರಬಂದು ನಮ್ಮವರ ಜೊತೆ ಪ್ರೀತಿಯಿಂದ ಪ್ರೇಮದಿಂದ ಹಬ್ಬವನ್ನು ಆಚರಿಸಬೇಕಿದೆ.ನಮ್ಮ ನಮ್ಮಲ್ಲಿ ಹತ್ತು ಹಲವಾರು ಬೇದ ಭಾವಗಳು ಸೃಷ್ಟಿಯಾಗಿ ವೈಶ್ಯಮ್ಯ ಬೆಳೆಯುತ್ತಿದೆ ಆ ವೈಷ್ಯಮ್ಯ ತೊಡೆದುಹಾಕಿ ಸಹಬಾಳ್ವೆಯುತ ಜೀವನ ನಡೆಯುವುದರ ಕಡೆ ನಮ್ಮ ಪಯಣ ಸಾಗಬೇಕಿದೆ. ಧರ್ಮ ಧರ್ಮಗಳ ಮಧ್ಯೆ ಜಾತಿ ಜಾತಿಗಳ ಮಧ್ಯೆ ಇರುವ ಭಿನ್ನತೆ ತೊಡೆದು ಹಾಕಿ ಸಮಾನತೆಯ ತತ್ವದ ಆಧಾರದ ಮೇಲೆ ನಾವು ಬಾಳಬೇಕಾಗಿದೆ ನಾವೆಲ್ಲರೂ ಒಂದೇ ಎನ್ನುವ ಭಾವನೆಗಳನ್ನು ಬೆಳೆಸಬೇಕಿದೆ. ಸಮಾನತೆಯ ದೀಪವನ್ನು ಹಚ್ಚಬೇಕಾಗಿದೆ ಜಾತ್ಯಾತೀತೇಯ ದೀಪ ಹಚ್ಚಬೇಕಿದೆ.ನಾವು ನಮ್ಮವರು ಎನ್ನುವ ಭಾವನೆಯ ದೀಪವನ್ನು ಹಚ್ಚಬೇಕಾಗಿದೆ. ಸುಂದರವಾದ ಬದುಕಿನೆಡೆಗೆ ಸಾಗುವ ದೀಪ ಹಚ್ಚಬೇಕಿದೆ. ಪ್ರತಿ ಮನೆಯಲ್ಲೂ ಪ್ರತಿಯೊಬ್ಬರ ಮನದಲ್ಲೂ ಭರವಸೆಯ ಬೆಳಕನ್ನು ಮೂಡಿಸೋಣ. ದೀಪಾವಳಿ ಎಂಬುದು ಕೇವಲ ಒಂದು ಹಬ್ಬವಾಗದೆ ಅದು ಪ್ರಕಾಶದ ಪರಿಶುದ್ಧತೆಯ ಪ್ರೇಮ ಮತ್ತು ಶಾಂತಿಯ ಸಂಕೇತ ಈ ಹಬ್ಬದಲ್ಲಿ ನಾವುಗಳು ನೀವುಗಳು ಎಲ್ಲರ ಮನಸ್ಸಿನಲ್ಲಿ ಸಮಾನತೆಯ ಸಹೋದರತ್ವದ ಮಮತೆಯ ಬೆಳಕು ಅನ್ನು ಮೂಡಿಸುವ ದೀಪವನ್ನು ಹಚ್ಚೋಣ ಪ್ರೀತಿಯನ್ನು ಹಂಚಿ ನಗುನಗುತ ನಗಿಸುತ ನೆಮ್ಮದಿಯ ಬದುಕಿನ ಕಡೆಗೆ ಸಾಗಿಸೋಣ ಎಲ್ಲರಿಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.



**ಬಸವರಾಜ ಎಸ್**
**ಸೇರಿ ಉಪನ್ಯಾಸಕರು**
**ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯ ಬಸವಕಲ್ಯಾಣ**
**7829204013**

# ಕಾಂಗ್ರೆಸ್ ಸರ್ಕಾರದಿಂದ ತೆರಿಗೆ ಚೋರಿ : ಆರ್. ಅಶೋಕ್ ಆರೋಪ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಅ.21– ರಾಜ್ಯ ಕಾಂಗ್ರೆಸ್ ಸರ್ಕಾರ ತೆರಿಗೆ ಚೋರಿ (ತೆರಿಗೆ ಕಳ್ಳತನ) ಮಾಡಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ಬೆಂಗಳೂರು ಮೂಲಸೌಕರ್ಯ ಸಮಸ್ಯೆಗಳ ಪರಿಹಾರಕ್ಕೆ ಕ್ರಮಕ್ಕೆ ಅರ್ಹವಾಗಿದೆಯೇ ಹೊರತು ಕ್ಷಮೆ ಮತ್ತು ಬೆದರಿಕೆಗೆ ಅಲ್ಲ ಎಂದು ಅವರು ಸರ್ಕಾರದ ವಿರುದ್ಧ ವಾಗ್ದಳಿ ನಡೆಸಿದ್ದಾರೆ. ಈ ಸಂಬಂಧ ಸಾಮಾಜಿಕ ಜಾಲ ತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಅವೈಜ್ಞಾನಿಕ ಮತ್ತು ಅಪೂರ್ಣ ಕಾಮಗಾರಿಗಳು ರಸ್ತೆಗಳು ಹದಗೆಡಲು ಕಾರಣವಾಗಿವೆ. ತೆರಿಗೆ ಚೋರಿ ಆರೋಪವು ಬಿಜೆಪಿ ಮತ್ತು ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಮತ ಚೋರಿ (ಮತಗಳ ಕಳ್ಳತನ) ಆರೋಪಕ್ಕೆ ಪ್ರತಿಯಾಗಿ ಕಂಡುಬರುತ್ತದೆ ಎಂದು ಆರೋಪಿಸಿದ್ದಾರೆ..

# ಅ. 26 ರಂದು ಪ್ರತಿಭಾ ಪುರಸ್ಕಾರ, ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

## ವಾಲ್ಮೀಕಿ ನಾಯಕ ಮಹಾಸಭಾದಿಂದ ಕಾರ್ಯಕ್ರಮ ಆಯೋಜನೆ : ನರಸಪ್ಪ ನಾಯಕ ಮಾಹಿತಿ.




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಜಿಲ್ಲಾ ಘಟಕದಿಂದ ಅ.26 ರಂದು ಬೆಳಗ್ಗೆ 11 ಕ್ಕೆ ಇಲ್ಲಿನ ಜಿಲ್ಲಾ ವಾಲ್ಮೀಕಿ ಭವನದಲ್ಲಿ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಉತ್ತಮ, ಆರ್ದಶ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಬಿ.ಬಿ.ನರಸಪ್ಪ ನಾಯಕ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಸುಮಾರು 100 ಅಧಿಕ ವಿದ್ಯಾರ್ಥಿಗಳನ್ನು ಅಂದು ಸನ್ಮಾನಿಸಲಾಗುದೆಂದು ಅವರು ಹೇಳಿದ್ದಾರೆ.

ವಾಲ್ಮೀಕಿ ಗುರುಪೀಠದ ಪ್ರಸನಾಂದಪುರಿ ಸ್ವಾಮಿಗಳು, ಗೋಲಪಲ್ಲಿ ಮಠದ ಶ್ರೀಗಳು, ಅಬ್ಬೆತುಮಕೂರು ವಿಶ್ವಾರಾಧ್ಯ ಮಠದ ಶ್ರೀಗಳು, ಹೆಡಗಿಮದ್ರಾ ಮಠದ ಶ್ರೀಗಳ ಸಾನಿಧ್ಯದಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಉದ್ಘಾಟಿಸುವರು. ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್, ಶರಣಗೌಡ ಕಂದಕೂರು, ವೇಣು ಗೋಪಾಲ ನಾಯಕ್ ಹಾಗೂ ಸಂಸದ ಕುಮಾರ ನಾಯಕ್, ಮುಖಂಡ ಹಣಮೇಗೌಡ ಬಿರನಕಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮಾಜಿ ಸಚಿವರಾದ ಶ್ರೀ ರಾಮುಲು, ರಾಜೂ ಗೌಡ , ಶಿವನಗೌಡ ನಾಯಕ, ಶಾಸಕಿ ಕರೆಮ್ಮ ನಾಯಕ, ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ ಸೇರಿದಂತೆಯೇ ಇತರರು ವಿಶೇಷ ಅತಿಥಿಗಳಾಗಿ ಭಾಗವಹಿಸುವರು.

ಅಂದು ಬೆಳಗ್ಗೆ ವಾಲ್ಮೀಕಿ ವೃತ್ತದಿಂದ ಕಾರ್ಯಕ್ರಮದ ವೇದಿಕೆಯವರೆಗೂ ಮೆರವಣಿಗೆ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ದೇವೆಂದ್ರನಾಯಕ, ಬಸವಲಿಂಗ ನಾಯಕ, ಬಸವರಾಜ ಹತ್ತಿಕುಣಿ, ಶಿವಶರಣಪ್ಪ ಹತ್ತಿಕುಣಿ, ವೀರಣ್ಣ ನಾಯಕ, ಶರಣು ನಾಯಕ ಸೇರಿದಂತೆಯೇ ಇತರರಿದ್ದರು.

# ಬೆಂಗಳೂರು: ಹೆಬ್ಬಾಳದಲ್ಲಿ 4 ಟನ್ ತ್ಯಾಜ್ಯ ವಿಲೇವಾರಿ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಬೆಂಗಳೂರು ಉತ್ತರ ವ್ಯಾಪ್ತಿಯ ಹೆಬ್ಬಾಳ ವಿಭಾಗದಲ್ಲಿ ಶನಿವಾರ ನಡೆದ ಬೃಹತ್ ಸ್ವಚ್ಛತಾ ಅಭಿಯಾನದಲ್ಲಿ ನಾಲ್ಕು ಟನ್ ತ್ಯಾಜ್ಯ ವಿಲೇವಾರಿ ಮಾಡಲಾಯಿತು.

ಡಾಲರ್ಸ್ ಕಾಲೋನಿ ಪೆಬಲ್ ಬೇ ಅಪಾರ್ಟ್‌ಮೆಂಟ್‌ಗಳಿಂದ ವಾರ್ಡ್ ಸಂಖ್ಯೆ18 ರ ಬೌಲೆವಾರ್ಡ್ ಪಾರ್ಕ್‌ವರೆಗೆ 1.5 ಕಿ.ಮೀ. ಪ್ರದೇಶವನ್ನು ಸ್ವಚ್ಛಗೊಳಿಸುವ ಅಭಿಯಾನವು ನಡೆಸಲಾಯಿತು. – 2.5 ಟನ್ ಸಾಮಾನ್ಯ ತ್ಯಾಜ್ಯ ಮತ್ತು 1.5 ಟನ್ ಕಟ್ಟಡ ನಿರ್ಮಾಣ ಅವಶೇಷ ತೆರವುಗೊಳಿಸಲಾಗಿದೆ.

ಮಣ್ಣು ಮತ್ತು ಘನತ್ಯಾಜ್ಯ ತೆಗೆಯುವ ಕಾರ್ಯಾಚರಣೆಗಾಗಿ ಒಟ್ಟು 40 ಪೌರಕಾರ್ಮಿಕರು, ಎರಡು ಟ್ರ್ಯಾಕ್ಟರ್‌ಗಳು, ಮೂರು ಆಟೋ–ಟಿಪ್ಪರ್‌ಗಳು ಮತ್ತು ಒಂದು ಕಾಂಪ್ಯಾಕ್ಟರ್ ಅನ್ನು ನಿಯೋಜಿಸಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ. ನಗರದ ಈ ಭಾಗದ ಆಕರ್ಷಣೆಯನ್ನು ಹೆಚ್ಚಿಸಲು ಗೋಡೆಗೆ ಬಣ್ಣ ಬಳಿಯಲಾಯಿತು. ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ನಗರ ನಿಗಮದೊಂದಿಗೆ ಕೈಜೋಡಿಸುವಂತೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

ತ್ಯಾಜ್ಯ ಸಂಗ್ರಹಣಾ ವಾಹನಗಳ ಕೊರತೆ: ಖಾಲಿ ಜಾಗಗಳಲ್ಲಿ ಕಸ ಸುರಿಯುತ್ತಿರುವ ಹೊರಮಾವು ನಿವಾಸಿಗಳು!

ಅದೇ ರೀತಿ, ಬೆಂಗಳೂರು ಕೇಂದ್ರ ನಗರ ನಿಗಮ ವ್ಯಾಪ್ತಿಯಲ್ಲಿ ಭಾನುವಾರ ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಲಾಯಿತು. ಚಿಕ್ಕಪೇಟೆ ವಿಭಾಗದಲ್ಲಿ, ಬಿಟಿಎಸ್ ಮುಖ್ಯ ರಸ್ತೆಯಲ್ಲಿರುವ ನಾರಾಯಣಸ್ವಾಮಿ ಉದ್ಯಾನವನ ಮತ್ತು ಹೊಂಬೇಗೌಡ ನಗರದ ಇಂದಿರಾ ಕ್ಯಾಂಟೀನ್ ಬಳಿ ಅಭಿಯಾನ ನಡೆಯಿತು.

ಶಾಂತಿನಗರ ವಿಭಾಗದಲ್ಲಿ, ಬನ್ನೇರುಘಟ್ಟ ರಸ್ತೆಯಲ್ಲಿರುವ ಪ್ರಮುಖ ಮಳೆನೀರು ಚರಂಡಿಯಿಂದ ಹೊಸೂರು ಮುಖ್ಯ ರಸ್ತೆಯವರೆಗೆ ಎರಡೂ ಬದಿಗಳಲ್ಲಿ ಶುಚಿಗೊಳಿಸುವ ಕಾರ್ಯಾಚರಣೆ ನಡೆಸಲಾಯಿತು. ಸಿ.ವಿ. ರಾಮನ್ ನಗರ ವಿಭಾಗದಲ್ಲಿ, ಫಿಲಿಪ್ಸ್ ಮಿಲೇನಿಯಂನಿಂದ ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದವರೆಗೆ ಎರಡೂ ಬದಿಗಳಲ್ಲಿ ಮತ್ತು ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದಿಂದ ಟಿನ್ ಫ್ಯಾಕ್ಟರಿಯವರೆಗೆ ಎರಡೂ ಬದಿಗಳಲ್ಲಿ ಸ್ವಚ್ಛತಾ ಕಾರ್ಯಾಚರಣೆ ನಡೆಸಲಾಯಿತು. ಹಸಿ ಕಸ ಮತ್ತು ಒಣ ತ್ಯಾಜ್ಯ, ಪ್ಲಾಸ್ಟಿಕ್, ತ್ಯಜಿಸಿದ ಪೀಠೋಪಕರಣಗಳು ಮತ್ತು ಇತರ ಭಗ್ನಾವಶೇಷಗಳನ್ನು ತೆರವುಗೊಳಿಸಲಾಯಿತು. ಅನಧಿಕೃತ ಅಂಗಡಿಗಳು ಮತ್ತು ಪಾದಚಾರಿ ಮಾರ್ಗಗಳ ಉದ್ದಕ್ಕೂ ಇರುವ ಇತರ ಅತಿಕ್ರಮಣಗಳನ್ನು ತೆಗೆದುಹಾಕಲಾಗಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



ಬಸವಕಲ್ಯಾಣ :– ನಗರದ ಶಿವಾಜಿ ಕಾಲೋನಿಯಲ್ಲಿ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶ್ರೀಚನ್ನ ಜ್ಞಾನೋದಯ ಶಾಲೆ ಉದ್ಘಾಟನಾ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಜಗನ್ನಾಥ ಪಾಟೀಲ, ಶ್ವೇತಾರಾಣಿ ಪಾಟೀಲ, ಶಿವರಾಜ ತಾಟೆ, ಅಮರ ಬಡದಾಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಪರಿಸರ ಮಿತ್ರ ಶಾಲಾ ಕಾರ್ಯಕ್ರಮ ಪುನರಾಂಭಿಸಲು ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಆರಂಭಿಸಿದ್ದ ಪರಿಸರ ಮಿತ್ರ ಶಾಲಾ ಕಾರ್ಯಕ್ರಮ ಪುನರಾಂಭಿಸಬೇಕೆಂದು ಪರಿಸರವಾದಿ ಶೈಲೇಂದ್ರ ಕಾವಡಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಪಿ. ನರೇಂದ್ರಸ್ವಾಮಿ ಅವರಿಗೆ ಬೀದರಗೆ ಭೇಟಿ ನೀಡಿದಾಗ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದರು. ಈ ಪರಿಸರ ಮಿತ್ರ ಶಾಲಾ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಒಡಮೂಡಿಸಲು ತುಂಬಾ ಸಹಾಯವಾಗಿದೆ. ಈ ಪರಿಸರ ಮಿತ್ರ ಶಾಲಾ ಕಾರ್ಯಕ್ರಮ ಅತ್ಯುತ್ತಮವಾಗಿ ಪರಿಸರ ನಿರ್ವಹಣೆ ಮಾಡಿರುವ ಶಾಲೆಗಳಿಗೆ ಹಸಿರು ಕೇಸರಿ ಆಯ್ಕೆ ಮಾಡಿ ಬಹುಮಾನ ಕೊಡುವಂತ ಯೋಜನೆ ಇದಾಗಿತ್ತು. ಕಳೆದ 12 ವರ್ಷಗಳಿಂದ ಈ ಯೋಜನೆ ರದ್ದುಪಡಿಸಿದ್ದಾರೆ. ಕಾರ್ಯಕ್ರಮ ಮತ್ತೆ ಪುನರಾಂಭಿಸಬೇಕೆಂದು ಪರಿಸರವಾದಿ ಶೈಲೇಂದ್ರ ಕಾವಡಿ ಅವರು ಶನಿವಾರ ಬೀದರ ನಗರಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಪಿ. ನರೇಂದ್ರಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಿ ಕಲ್ಯಾಣ ಕರ್ನಾಟಕದ ಕುಂಚವರಂ ವನ್ಯಜೀವಿಧಾಮದ ಪಕ್ಷಿಗಳ ಕಿರು ಪುಸ್ತಕವನ್ನು ನೀಡಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ್ ಪಾಟೀಲ್, ಕಾಂಗ್ರೆಸ್ ಮುಖಂಡ ಶಾಮರಾವ ಬಂಬಳಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು

# ಮಾಧವರಾವ್ ಇಂಚುರೇ ನಿಧನ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಪಟ್ಟಣದ ಹಿರಿಯ ಪತ್ರಕರ್ತ ಶ್ರೀಮಂತರಾವ್ ಇಂಚುರೇ ಅವರ ಹಿರಿಯ ಸಹೋದರ ಮಾಧವರಾವ್ ಇಂಚುರೇ ಮಂಗಳವಾರ ಬೆಳಿಗ್ಗೆ ಹೃದಯಘಾತದಿಂದ ನಿಧನ ಹೊಂದಿದ್ದಾರೆ. ಇವರು ಹುಮನಾಬಾದ ತಾಲೂಕಿನ ಮದರಗಾಂವ ಗ್ರಾಮದ ಪಶು ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೃತರಿಗೆ ಹೆಂಡತಿ, ಒಬ್ಬ ಗಂಡು ಮಗು, ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಬಿಟ್ಟು ಅಗಲಿದ್ದಾರೆ.

ಇಂದು ಬೆಳಿಗ್ಗೆ 9 ಘಂಟೆಗೆ ಚಿಟಗುಪ್ಪದಲ್ಲಿ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬ ಮೂಲಗಳಿಂದ ತಿಳಿದು ಬಂದಿದೆ.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ: 9449732000

# ಜಾತಿ ಸಮೀಕ್ಷೆಯಿಂದ ರಾಜ್ಯದ ಮಕ್ಕಳಿಗೆ ಊಟ–ಪಾಠ ಇಲ್ಲದಾಗಿದೆ: ವಿಶ್ವನಾಥ್



ಮಲ್ಲಮ್ಮ ನುಡಿ ವಾರ್ತೆ

ಮೈಸೂರು: ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದ ಶಿಕ್ಷಣ ಕ್ಷೇತ್ರವು "ಕೆಳಮಟ್ಟಕ್ಕೆ" ತಲುಪಿದ್ದು, ಜಾತಿ ಸಮೀಕ್ಷೆಯಿಂದ ರಾಜ್ಯದ ಮಕ್ಕಳಿಗೆ ಊಟ–ಪಾಠ ಇಲ್ಲದಾಗಿದೆ ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಅವರು ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸರ್ಕಾರ ನಿರ್ವಹಿಸುತ್ತಿರುವ ರೀತಿಯನ್ನು ಟೀಕಿಸಿದರು,

‘ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗಾಗಿ ದಸರಾ ರಜೆಯನ್ನು ವಿಸ್ತರಿಸಿರುವುದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಶಾಲಾ ಶಿಕ್ಷಣ ಅಧೋಗತಿಗೆ ಹೋಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. 2010 ರಲ್ಲಿ ಆಹಾರ ಹಕ್ಕು ಕಾಯ್ದೆಯನ್ನು ತಂದವರು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್, ಆದರೆ, ಸಿದ್ದರಾಮಯ್ಯ ಅವರ ಆಡಳಿತದಲ್ಲಿ, ಶಿಕ್ಷಣ ಮತ್ತು ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಗಳನ್ನು ನಿರ್ವಹಿಸುವಲ್ಲಿ ಸರ್ಕಾರ ವಿಫಲವಾದ ಕಾರಣ ಮಕ್ಕಳು ಹಸಿವಿನಿಂದ ಬಳಲುವಂತಾಗಿದೆ.

ಸಮೀಕ್ಷೆಯಿಂದ ರಾಜ್ಯದ ಮಕ್ಕಳಿಗೆ ಊಟ–ಪಾಠ ಇಲ್ಲದಾಗಿದೆ. ಉತ್ತರ ಕರ್ನಾಟಕದಲ್ಲಿ ಮಕ್ಕಳು ಹಸಿವಿನಿಂದ ಮಲಗುತ್ತಿದ್ದಾರೆ. ಶಾಲೆಗಳನ್ನು ಕೂಡಲೇ ಆರಂಭಿಸಬೇಕು. ಅಕ್ಷರ ಹಾಗೂ ಆರೋಗ್ಯವನ್ನು ಕಡೆಗಣಿಸಬಾರದು ಎಂದು ಆಗ್ರಹಿಸಿದರು.

ನಿನ್ನ ಹೆಂಡತಿಗೂ ಫ್ರೀ, ನನ್ನ ಹೆಂಡತಿಗೂ ಫ್ರೀ; ಯಾರಪ್ಪನ ಮನೆ ದುಡ್ಡು ಅಂತಾ ಜನರ ತೆರಿಗೆ ಹಣ ಹಾಳು ಮಾಡ್ತಿದ್ದೀರಾ?: ವಿಶ್ವನಾಥ್

ಇದೇ ವೇಳೆ ಶಾಲಾ ಶಿಕ್ಷಣ ಸಚಿವರ ಹೊಸ ನೀತಿಯಾದ ಉತ್ತೀರ್ಣತೆಯನ್ನು ಶೇ.33ಕ್ಕೆ ಇಳಿಸುವ ನೀತಿಯನ್ನು ವಿಶ್ವನಾಥ್ ಅವರು ಟೀಕಿಸಿದರು. ಸರ್ಕಾರದ ಕ್ರಮವು ಮಕ್ಕಳ ಕಲಿಕಾ ಉತ್ಸಾಹವನ್ನು ಕುಗ್ಗಿಸುತ್ತದೆ ಎಂದು ಹೇಳಿದರು.

ಇಂದಿನ ವಿದ್ಯಾರ್ಥಿಗಳು 90 ರಿಂದ 95% ಅಂಕಗಳಿಸಲು ಬಯಸುತ್ತಾರೆ, ಆದರೆ, ನೀವು ಅವರ ನೈತಿಕತೆಯನ್ನು ಕುಗ್ಗಿಸಲು ಪ್ರಯತ್ನಿಸುತ್ತಿದ್ದೀರಿ ಎಂದು ಟೀಕಿಸಿದರು.

ರಾಜ್ಯ ಸರ್ಕಾರ ಒಂದು ಲಕ್ಷಕ್ಕೂ ಹೆಚ್ಚು ಶಿಕ್ಷಕರ ಕೊರತೆಯನ್ನು ಎದುರಿಸುತ್ತಿದೆ. ಇದರಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂದರು.

ಬಳಿಕ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ ಅವರು, ಮೈಸೂರಿಗೆ ನಿಯೋಜನೆಗೊಳ್ಳಲು ಎಸಿಪಿ 1 ಕೋಟಿ ರೂ. ಪಾವತಿಸಬೇಕಾಗುತ್ತದೆ. ಇನ್ಸ್‌ಪೆಕ್ಟರ್ 70 ಲಕ್ಷ ರೂ. ಪಾವತಿಸಬೇಕಾಗುತ್ತಿದೆ. ಸಿದ್ದರಾಮಯ್ಯ ಅವರ ಆಡಳಿತದಲ್ಲಿ ಆಡಳಿತವು ಪ್ರತಿದಿನ ಹೊಸ ಕೆಳಮಟ್ಟಕ್ಕೆ ಇಳಿಯುತ್ತಿದೆ ಎಂದು ಹೇಳಿದರು.

# ಕಮಲನಗರದಲ್ಲಿ ಗಮನ ಸೆಳೆದ ಆರ್.ಎಸ್.ಎಸ್ ಪಥ ಸಂಚಲನ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಅ.21:ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷ ಹಾಗೂ ವಿಜಯದಶಮಿಯ ಅಂಗವಾಗಿ ರವಿವಾರ ರಂದು ಕಮಲನಗರದಲ್ಲಿ ಸಹಸ್ರಾರು ಗಣವೇಷಧಾರಿ ಸ್ವಯಂ ಸೇವಕರು ಪಥ ಸಂಚಲನ ನಡೆಸಿ ಗಮನ ಸೆಳೆದರು.ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಬಿಳಿ ಅಂಗಿ, ಖಾಕಿ ಪ್ಯಾಂಟು, ಕಪ್ಪು ಟೊಪ್ಪಿಗೆ, ಕೈಯಲ್ಲಿ ಲಾಠಿ ಹಿಡಿದು ಶಿಸ್ತಿನಿಂದ ಪಥ ಸಂಚಲನ ನಡೆಸುತ್ತಿದ್ದ ಸ್ವ-ಯಂ ಸೇವರ ಮೇಲೆ ಪುಷ್ಪಮಳೆ ಸುರಿಸಿ ಗೌರವ ಸಲ್ಲಿಸಿದರು. ಶಿಸ್ತಿನ ಶಿಪಾಯಿಗಳಂತೆ ಪಥ ಸಂಚಲನ ಮಾಡುತ್ತಿದ್ದ ಗಣವೇಶಧಾರಿಗಳು ನೋಡುಗರ ಗಮನ ಸೆಳೆದರು.

ಪಥ ಸಂಚಲನವು ಶನೇಶ್ವರ ಮಂದಿರದಿಂದಆರಂಭಗೊಂಡು,ಕೃಷಿ ಉತ್ಪನ್ನ ಮಾರುಕಟ್ಟೆ,ಅಲ್ಲಮಪ್ರಭು ವೃತ್ತ,ಅತಿಥಿ ಗೃಹ,ಹಳೆ ಪೊಲೀಸ್ ಠಾಣೆ, ಬಸವೇಶ್ವರ ವೃತ್ತ, ಗ್ರಾಮ ಪಂಚಾಯತ್ ಕಛೇರಿ,ಅಕ್ಕಮಹಾದೇವಿ ವೃತ್ತ, ವಿಠಲ ರುಕ್ಮಿಣಿ ಮಂದಿರ, ಶಿವಾಜಿ ವೃತ್ತ, ಡಾ.ಚನ್ನಬಸವ ಪಟ್ಟದೇವರ ಸ್ಮಾರಕ ಭವನದಿಂದ ಸಾಗಿ ಡಾ.ಚನ್ನಬಸವ ಪಟ್ಟದೇವರ ಪ್ರೌಢಶಾಲೆ ಆವರಣಕ್ಕೆ ಬಂದು ಸಂಪನ್ನಗೊಂಡಿತು. ಪಥ ಸಂಚಲನ ನೋಡಲು ಮಹಿಳೆಯರು,ಮಕ್ಕಳು ಹಾಗೂ ಯುವಕರು ರಸ್ತೆ ಎರಡು ಬದಿಗಳಲ್ಲಿ ಜಮಾಯಿಸಿದ್ದರು. ಹಲವು ಕಡೆ ಸಾರ್ವಜನಿಕರು ಹೂವುಗಳನ್ನು ಸ್ವಯಂ ಸೇವಕರ ಮೇಲೆ, ಭಗವಾಧ್ವಜ, ಹಾಗೂ ಭಾರತ ಮಾತೆಗೆ, ಡಾ.ಗುರೂಜಿ, ಡಾ.ಹೆಡ್ಗೆವಾರ್ ಅವರ ಭಾವಚಿತ್ರಕ್ಕೆ ಹೂವು ಅರ್ಪಿಸುವ ಮೂಲಕ ಗೌರವ ಸಲ್ಲಿಸಿದರು. ಮೆರವಣಿಗೆಯಲ್ಲಿ ಭಾರತ ಮಾತಾ ಕೀ ಜೈ ಸೇರಿ ಮಹಾಪುರುಷರ ಘೋಷಣೆಗಳು ಮೊಳಗಿದವು.ಪಥ ಸಂಚಲನ ಸಾಗುವ ಎಲ್ಲ ರಸ್ತೆಗಳನ್ನು ಭವ್ಯ ಕಮಾನುಗಳಿಂದ ಅಲಂಕರಿಸಲಾಗಿತ್ತು. ಅಲ್ಲಲ್ಲಿ ಭಾರತಾಂಬೆ,ಡಾ.ಚನ್ನಬಸವ ಪಟ್ಟದೇವರ ಭಾವಚಿತ್ರಗಳನ್ನಿಟ್ಟು ಪೂಜಿಸುವುದು ಕಂಡುಬಂತು. ಮನೆಗಳ ಮುಂದೆ ರಂಗೋಲಿ ಬಿಡಿಸಿ ಅಂದ ಹೆಚ್ಚಿಸಿದ್ದರು. ಅಲ್ಲಮಪ್ರಭು ವೃತ್ತದ ಬಳಿ ಡೋಣಗಾಂವ ಮಠದ ಪೂಜ್ಯ ಡಾ.ಶಂಭುಲಿಂಗ ಶಿವಾಚಾರ್ಯರು ಹಾಗೂ ಠಾಣಾಕುಶನೂರ ಮಠದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಯವರು ಸ್ವಯಂ ಸ್ವೇವಕರ ಮೇಲೆ ಪುಷ್ಪಾರ್ಚನೆಗೈದು ಗೌರವಿಸಿದರು. ಸಂಘದ ಪ್ರಮುಖರಾದ ದಯಾನಂದ ಪವಾರ ಅವರು ವಿಶೇಷ ಉಪನ್ಯಾಸ ನೀಡಿ, ಹಿಂದೂ ಸಮುದಾಯವನ್ನು ಒಗ್ಗೂಡಿಸಲು, ನಾಗರಿಕರಲ್ಲಿ ದೇಶಭಕ್ತಿಯನ್ನು ಜಾಗೃತಗೊಳಿಸಲು ಮತ್ತು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದುವರಸಿಕೊಂಡು ಹೋಗಲು ಸ್ಥಾಪನೆಯಾಗಿರುವ ಸಂಘವು ಇಂದು ದೇಶಾದ್ಯಂತ ವಿಸ್ತಾರಗೊಂಡಿದೆ ಎಂದು ಹೇಳಿದರು. ಸಂಘದ ಪ್ರಮುಖರಾದ ಹಣಮಂತರಾವ ಪಾಟೀಲ, ಶಿವಲಿಂಗ ಕುಂಬಾರ, ರಾಜೇಂದ್ರ ಪಾಂಚಾಳ, ಸತೀಷ ಮುಧಾಳೆ, ಪ್ರಮುಖರಾದ ವಸಂತ ಬಿರಾದಾರ, ಬಸವರಾಜ ಪಾಟೀಲ, ಶಿವಾನಂದ ವಡ್ಡೆ, ಕಿರಣ ಪಾಟೀಲ, ಅರಹಂತ ಸಾವಳೆ, ಶಿವು ಝುಲ್ಫೆ, ನಾಗೇಶ ಪತ್ರೆ, ರಾಮಶೆಟ್ಟಿ ಪನ್ನಾಳೆ, ಖಂಡೋಬಾ ಕಂಗಟೆ, ಬಂಟಿ ರಾಂಪೂರೆ, ಬಸವರಾಜ ಹಳ್ಳೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಲಿಷ್ಠ ಭಾರತ ನಿರ್ಮಾಣದ ಸಂಕಲ್ಪದೊಂದಿಗೆ ಸ್ಥಾಪನೆಯಾಗಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಯಶಸ್ವಿಯಾಗಿ 100 ವರ್ಷಗಳು ಪೂರೈಸಿರುವುದು ಅತ್ಯಂತ ಹೆಮ್ಮೆಯ ವಿಷಯ. ವಿಶ್ವದ ಅತಿ ದೊಡ್ಡ ಸಂಘಟನೆಯಾಗಿ ಬೆಳೆದು ನಿಂತಿರುವ ಸಂಘವು ನೂರು ವರ್ಷಗಳಲ್ಲಿ ಭವ್ಯ ಭಾರತ ನಿರ್ಮಾಣಕ್ಕಾಗಿ ಮಾಡಿರುವ ಸೇವೆ ಅನನ್ಯ. ಹೆಚ್ಚಿನ ಯುವಕರು ಸಂಘದ ತತ್ವ ಸಿದ್ಧಾಂತಗಳನ್ನು ನೆಚ್ಚಿ-ಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದಕ್ಕೆ ದೇಶಾದ್ಯಂತ ನಡೆಯುತ್ತಿರುವ ಪಥ ಸಂಚಲನವೇ ಸಾಕ್ಷಿ. ಯುವಜನತೆ ದೇಶಪ್ರೇಮ, ಶಿಸ್ತು, ಸೇವಾ ಭಾವನೆಗಳನ್ನು ಬೆಳೆಸಿಕೊಂಡು ಸಂಘದ ತತ್ವಗಳನ್ನು ಜೀವನದಲ್ಲಿ ಮೈಗೂಡಿಸಿಜೊಳ್ಳಬೇಕು.

**ಪ್ರಭು ಬಿ.ಚವ್ಹಾಣ – ಮಾಜಿ ಸಚಿವರು ಹಾಗೂ ಶಾಸಕರು ಔರಾದ(ಬಿ)**

# ಒಪಿಎಸ್ ಮಂಜೂರಿಗೆ ಒತ್ತಾಯ

ಕಲಬುರಗಿ;ಅ.21: 2006 ಏಪ್ರಿಲ್ 1ರ ಪೂರ್ವದ ಅನುದಾನಿತ ನೌಕರರಿಗೆ ಹಳೆ ಪಿಂಚಣಿ ಮಂಜೂರಾತಿ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಂಘಟನೆಗಳ ಒಕ್ಕೂಟದ ಮುಖಂಡರು ಡಿಸಿ ಕಚೇರಿಯ ಅಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

2006 ಏಪ್ರಿಲ್ 1ರ ಪೂರ್ವದ ಅಧಿ. ಸೂಚನೆ ಹೊರಡಿಸಿ ನಂತರ ಕರ್ತವ್ಯಕ್ಕೆ ಹಾಜರಾದ ಸರಕಾರಿ ನೌಕರರಿಗೆ ಹಾಗೂ ನಿಗಮ ಮಂಡಳ ನೌಕರರಿಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಹಳೆ ಪಿಂಚಣಿ ಮಂಜೂರಾತಿಗೆ ' ಸರಕಾರ ಆದೇಶ ಮಾಡಿರುತ್ತಾರೆ. ಅದರಂತೆ ನಮಗೂ ಹಳೆ ಪಿಂಚಣೆ



ನೀಡಬೇಕೆಂದು ಆಗ್ರಹಿಸಿದರು. ಒಕ್ಕೂಟದ ರಾಜ್ಯ ಕಾರ್ಯಾಧ್ಯಕ್ಷ ಬಿ.ಎಸ್. ಮಾಲಿಪಾಟೀಲ್, ಮಹಾದೇವಪ್ಪ ಹೊಸಳ್ಳಿ, ದಯಾನಂದ ಬಂದರವಾಡ, ವೀರಣ್ಣಗೌಡ, ಭೀಮಣ್ಣನಾಯಕ್, ಶಿವುಕುಮಾರ ಸಜ್ಜನ್, ಶಿವರಾಜ ನಂದಗಾಂವ, ಅಶೋಕ ನಂದಿ, ಕಾಂತಪ್ಪ ಬಡಿಗೇರ ಇದ್ದರು.

# ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ,
## ಆವರಣ, ಸಾರ್ವಜನಿಕ ಆಸ್ತಿ ಬಳಸುವುದನ್ನು ನಿಯಂತ್ರಿಸಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ : ಅ 21: ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಬಳಸುವುದನ್ನು ನಿಯಂತ್ರಿಸಲು ಸೂಚಿಸಿದೆ ಎಂದು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

ಸರ್ಕಾರದ, ಸರ್ಕಾರಿ ಸಾಮ್ಯದ, ನಿಗಮ, ಮಂಡಳಿಗಳ ಶಾಲಾ–ಕಾಲೇಜುಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಉದ್ಯಾನವನಗಳು, ಆಟದ ಮೈದಾನಗಳು, ಸಾರ್ವಜನಿಕ ರಸ್ತೆಗಳು, ತೆರೆದ ಸ್ಥಳಗಳು ಮತ್ತು ಇತರ ಆಸ್ತಿ, ಜಾಗಗಳು ನಾಗರೀಕರ ಸದ್ಬಳಕೆಗೆ ನಿರ್ಧಿಷ್ಟಪಡಿಸಲಾಗಿರುತ್ತದೆ. ಇವುಗಳನ್ನು ಸಾರ್ವಜನಿಕರು ಬಳಸಲು ಯಾವುದೇ ಅಡಚಣೆಗಳು, ಬೆದರಿಕೆಗಳು ಉದ್ಭವಿಸದಂತೆ ಕ್ರಮವಹಿಸುವುದು ಅತ್ಯಗತ್ಯವಾಗಿರುತ್ತದೆ. ಹಾಗೆಯೇ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳು, ಸಾರ್ವಜನಿಕರ ಸಾರ್ವತ್ರಿಕ ಅಸಮಾಧಾನಗಳನ್ನು ನಿವಾರಿಸುವುದು ಸಹ ಅವಶ್ಯವಾಗಿರುತ್ತದೆ.

ರಾಜ್ಯದಲ್ಲಿ ಹಲವಾರು ಖಾಸಗಿ ಸಂಸ್ಥೆಗಳು, ಸಂಘಗಳು ತಮ್ಮ ಚಟುವಟಿಕೆಗಳು, ಪ್ರಚಾರ, ತರಬೇತಿ, ಉತ್ಸವಗಳು ಹಾಗೂ ಸದಸ್ಯರ ಮತ್ತು ಬೆಂಬಲಿಗರ ಸಭೆಗಳು ನಡೆಸುವ ಉದ್ದೇಶದಿಂದ ಸಾರ್ವಜನಿಕ ಸ್ಥಳಗಳು, ಸರ್ಕಾರದ ಆಸ್ತಿಗಳು, ಜಮೀನುಗಳು, ಆಟದ ಮೈದಾನಗಳು, ಸಾರ್ವಜನಿಕ ರಸ್ತೆಗಳು ಇತ್ಯಾದಿಗಳನ್ನು ಸರ್ಕಾರ ಅಥವಾ ಸಂಬಂಧಿತ ಇಲಾಖೆಗೆ ಮುಂಚಿತವಾಗಿ ಅನುಮತಿ ಪಡೆಯದೆ, ಅನೇಕ ಸಂದರ್ಭಗಳಲ್ಲಿ ಮಾಹಿತಿ ನೀಡದೆ ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ. ಇಂತಹ ಕ್ರಿಯೆಗಳು ಅಕ್ರಮ ಪ್ರವೇಶ (ಖಿಡಿಜಬಿಚಿ) ಎಂದು ಪರಿಗಣಿಸಲ್ಪಡುತ್ತವೆ ಮತ್ತು ಸಾರ್ವಜನಿಕ ಸುರಕ್ಷತೆಗೆ ಗಂಭೀರ ಬೆದರಿಕೆಯನ್ನು ಉಂಟುಮಾಡುತ್ತವೆ.

ಈ ಕಾರಣದಿಂದ ಸರ್ಕಾರದ ಯಾವುದೇ ಆಸ್ತಿ, ಸ್ಥಳದ ಬಳಕೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿಯಂತ್ರಿಸುವ ಸಲುವಾಗಿ ಯಾವುದೇ ಸಂಘಟನೆ, ಸಂಸ್ಥೆ, ಸಂಘವು ಆಯಾ ಸಾರ್ವಜನಿಕ ಆಸ್ತಿ, ಸ್ಥಳದ ಮಾಲೀಕತ್ವ ಹೊಂದಿದ ಸಕ್ಷಮ ಪ್ರಾಧಿಕಾರಗಳಿಂದ ಪೂರ್ವಾನುಮತಿ ಪಡೆದು ಬಳಸಿಕೊಳ್ಳಲು ಅನುಮತಿ ನೀಡುವುದು ಅಗತ್ಯವಾಗಿರುತ್ತದೆ. ಯಾವುದೇ ಚಟುವಟಿಕೆಗಳು ಸಾರ್ವಜನಿಕರಿಗೆ ಅನಾನುಕೂಲವಾಗುವುದಾದಲ್ಲಿ ಹಾಗೂ ಸಂಬಂಧಿಸಿದ ಸಂಸ್ಥೆಗಳ ಆವರಣ, ಜಾಗದಲ್ಲಿ ನಡೆಯುವ ಚಟುವಟಿಕೆಗಳಿಂದ ಆ ಸಂಸ್ಥೆಗಳ ಮೂಲ ಧ್ಯೆಯಕ್ಕೆ ಧಕ್ಕೆ ಉಂಟಾಗುವುದಾದಲ್ಲಿ ಅಂತಹ ಚಟುವಟಿಕೆಗಳ ಆಯೋಜನೆಗೆ ಸಕ್ಷಮ ಪ್ರಾಧಿಕಾರಗಳು ಅನುಮತಿಯನ್ನು ನಿರಾಕರಿಸಬೇಕು. ಈ ಸಾರ್ವಜನಿಕ ಸ್ಥಳಗಳಲ್ಲಿ ನಡೆಸಲಾಗುವ ಖಾಸಗಿ ಸಂಘ, ಸಂಸ್ಥೆಗಳು, ಸಂಘಟನೆಗಳ ಚಟುವಟಿಕೆಗಳಿಗೆ ಅವುಗಳ ಎದುರಿಗೆ ನಮೂದಿಸಲಾದ ಮಾಲಿಕತ್ವ ಹೊಂದಿದ ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡುವುದನ್ನು ಪರಿಶೀಲಿಸಬೇಕು.

ಸರ್ಕಾರದ, ಸರ್ಕಾರಿ ಸಾಮ್ಯದ ಶಾಲಾ–ಕಾಲೇಜುಗಳು, ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಆವರಣ ಉನ್ನತ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ, ಉದ್ಯಾನವನಗಳು, ಆಟದ ಮೈದಾನಗಳು, ಇತರೆ ತೆರೆದ ಸ್ಥಳಗಳು ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಸಾರ್ವಜನಿಕ ರಸ್ತೆಗಳು, ಸರ್ಕಾರದ ಇತರ ಆಸ್ತಿ, ಸ್ಥಳಗಳು ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು, ಪೊಲೀಸ್ ಅಧೀಕ್ಷಕರು. ಮೇಲೆ ನಮೂದಿಸಿದ ಇಲಾಖೆ, ಸಕ್ಷಮ ಪ್ರಾಧಿಕಾರಗಳು ಇಂತಹ ಅನುಮತಿ ನೀಡುವ ಸಂದರ್ಭದಲ್ಲಿ ಸಂವಿಧಾನ ಬದ್ಧವಾದ ನಾಗರಿಕರ ಹಕ್ಕುಗಳಿಗೆ ಚ್ಯುತಿ ಉಂಟಾಗದಂತೆ ಎಚ್ಚರಿಕೆ ವಹಿಸಲು ಅನುವಾಗುವಂತೆ ಸೂಕ್ತ, ವಿವರವಾದ ಮಾರ್ಗಸೂಚಿಯನ್ನು ಆಯಾ ಇಲಾಖೆಗಳು ಹೊರಡಿಸಬೇಕು.

# ದೀಪಾವಳಿ ಸಂಭ್ರಮದಲ್ಲಿ ಅವಘಡ : ಬೆಂಗ್ಳೂರಲ್ಲಿ 68 ಮಂದಿ ಕಣ್ಣಿಗೆ ಗಾಯ

ಬೆಂಗಳೂರು: ಬೆಳಕಿನ ಹಬ್ಬ ದೀಪಾವಳಿ ಸಂಭ್ರಮ ಒಂದಡೆ-ಯಾದ್ರೇ, ಪಟಾಕಿ ಹಚ್ಚೋಕೆ ಹೋಗಿ, ಬೇರೆಯವರು ಸಿಡಿಸಿದ ಪಟಾಕಿ ಕಿಡಿ ಕಣ್ಣಿಗೆ ತಾಕಿ ಹಲವರ ಬದುಕು ಕತ್ತಲಾಗಿದೆ.

ಕಳೆದೆರಡು ದಿನದಿಂದ ಬೆಂಗಳೂರಿನ ಮಿಂಟೋ ಆಸ್ಪತ್ರೆಯಲ್ಲಿ 25 ಜನ ಪಟಾಕಿ ಸಿಡಿದು ಕಣ್ಣಿಗೆ ಹಾನಿಯಾಗಿ ದಾಖಲಾಗಿದ್ದಾರೆ. ನಾರಾಯಣ ನೇತ್ರಾಲಯದಲ್ಲಿ 43 ಜನ ಪಟಾಕಿ ಸಿಡಿತದಿಂದ ಗಾಯಗೊಂಡು ಚಿಕಿತ್ಸೆ ಪಡೆದಿದ್ದಾರೆ. ಮೂರು ಜನರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಮಿಂ-ಟೋ ಆಸ್ಪತ್ರೆಯಲ್ಲಿ ದಾಖಲಾದ ನಾಲ್ಕು ಜನರಿಗೆ ಗಂಭೀರವಾಗಿ ಕಣ್ಣಿನ ಭಾಗಕ್ಕೆ ಗಾಯವಾಗಿದೆ.

ಬಿಹಾರ ಮೂಲದ 16 ವರ್ಷದ ಬಾಲಕ ಪಟಾಕಿ ಸಿಡಿದು ದೃಷ್ಟಿ ಕಳೆದುಕೊಂಡಿದ್ದಾನೆ. 18 ವರ್ಷದ ಯುವಕನೊಬ್ಬ ಕುಡಿದು ಪಟಾಕಿ ಹಚ್ಚಲು ಹೋಗಿ, ಹಚ್ಚುತ್ತಿದ್ದ ವೇಳೆಯಲ್ಲಿಯೇ ಸ್ಫೋಟಗೊಂಡು ಕಣ್ಣಿಗೆ ಗಂಭೀರವಾಗಿ ಹಾನಿಯಾಗಿದೆ. 10 ವರ್ಷದ ಬಾಲಕನ ಮುಖದ ಬಳಿಯೇ ಪಟಾಕಿ ಸ್ಫೋಟಗೊಂಡು ಕಣ್ಣಿನ ರೆಪ್ಪೆ ಸುಟ್ಟುಹೋಗಿದೆ. ಇದರಿಂದ ದೃಷ್ಟಿ ಸಮಸ್ಯೆ ಎದುರಾಗಿದೆ. ಗಾಯಾಳುಗಳಿಗೆ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಇಂದು (ಅ.21) ಮಿಂಟೋ ಆಸ್ಪತ್ರೆಗೆ ಇಲ್ಲಿಯವರೆಗೂ, ಇಬ್ಬರು ಯುವಕರು, ಓರ್ವ ಯುವತಿ, ಒಂದು ಗಂಡು ಮಗುವನ್ನು ದಾಖಲಿಸಲಾಗಿದೆ. ಇದರಲ್ಲಿ ಎರಡು ಗಂಭೀರ, ಎರಡು ಸಾಧಾರಣ ಗಾಯಗಳಾಗಿವೆ. ಮೊದಲ ದಿನದಿಂದ ಇಲ್ಲಿ ತನಕ 17 ಜನರಿಗೆ ಹೆಚ್ಚಿನ ಗಾಯವಾಗಿದೆ ಎಂದು ತಿಳಿದು ಬಂದಿದೆ.

ಮಕ್ಕಳು ಪಟಾಕಿ ಹಚ್ಚುವಾಗ ಪೋಷಕರು ಜೊತೆಯಲ್ಲಿಯೇ ಇರಬೇಕು. ಕಣ್ಣಿನ ಸುರಕ್ಷತೆಗಾಗಿ ಕನ್ನಡಕ ಧರಿಸಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ.

# ಪರಸ್ಪರರಲ್ಲಿ ಸೌಹಾರ್ದತೆ ಬೆಳೆಸಲು ಕ್ರೀಡೆಗಳು ಪೂರಕ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.21:ಮುಕ್ತಪಂದ್ಯಾವಳಿಗಳ ಆಯೋಜನೆಯ ಮೂಲಕ

ಸಮಾಜದ ವಿವಿಧ ವರ್ಗಗಳ ಯುವಕ,ಯುವತಿಯರ ಮಧ್ಯದಲ್ಲಿ ಸೌಹಾರ್ದತೆಯ ಭಾವ ಬೆಳೆಸಲು ಕ್ರೀಡೆಗಳು ಪೂರಕ ಎಂದು ಸಂಸದ ಸಾಗರ್ ಖಂಡ್ರೆ ಮಾತನಾಡಿದರು.

ಪಟ್ಟಣದ ಬಾಲಯೇಸು ಪುಣ್ಯಕ್ಷೇತ್ರದಲ್ಲಿ ನವೆಂಬರ್ 7 ರಿಂದ ನಡೆಯಲಿರುವ ಜಾತ್ರೆ ಪ್ರಯುಕ್ತ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳ ಮುಕ್ತ ಪಂದ್ಯಾವಳಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಗಳಲ್ಲಿ ಸೋಲು ಗೆಲುವಿಗಿಂತ ಮುಖ್ಯವಾದದ್ದು ಭಾಗವಹಿಸುವಿಕೆ ಎಂಬುದನ್ನು ಅರಿತುಕೊಂಡು ಕ್ರೀಡಾಪಟುಗಳು ಸೌಹಾರ್ದತೆಯಿಂದ ಆಟವಾಡಬೇಕು ಎಂದು ತಿಳಿಸಿದರು.

ಫಾದರ್ ಸಚಿನ್ ಪ್ರಾಸ್ತಾವಿಕ ಮಾತನಾಡಿದರು.

ಫಾದರ್ ಕ್ರಿಸ್ಟೋಫರ್, ಫಾದರ್ ಅಭಿಷೇಕ್, ಫಾದರ್ ವಿಲ್ಸನ್, ಫಾದರ್ ರಾಬರ್ಟ್ ಕ್ರಾಸ್ತಾ, ಫಾದರ್ ಕ್ಲಾರಿ ಡಿಸೋಜಾ, ಫಾದರ್ ಸಲ್ವಾದರ್, ಬ್ರದರ್ ಎನ್ಸಿ, ಧರ್ಮ ಕೇಂದ್ರದ ಉಪಾಧ್ಯಕ್ಷ ರಾಜಕುಮಾರ್ ನಲ್ವಾಡೆ, ಶ್ರೀನಿವಾಸ್ ಬೇಂದ್ರೆ, ವಿದ್ಯಾಸಾಗರ್ ಬೇಂದ್ರೆ, ರಮೇಶ ವಾಗ್ಗೆ, ಸಂಜೀವಕುಮಾರ ಸಾಳುಂಕೆ, ಬಾಲಾಜಿ, ಉಮೇಶ, ಗೋದಾವರಿ, ಸುಕನ್ಯಾ ರೇಷ್ಮೆ ಇದ್ದರು.

# ಬ್ರಾಹ್ಮಣ ಸಮುದಾಯದ ವಿರುದ್ಧ ಹೇಳಿಕೆ: ಶ್ರೀಕಾಂತ ಸ್ವಾಮಿ ವಿರುದ್ಧ ಖಂಡನೆ



ಬೀದರ್. ಅ. 21 : ನಗರದಲ್ಲಿ ಇತ್ತಿಚೀಗೆ ನಡೆದ ಡಾ. ಬಿ.ಆರ್. ಅಂಬೇಡ್ಕರ್ ವ್ಯಾಖ್ಯಾನ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಶ್ರೀಕಾಂತ ಸ್ವಾಮಿ ಬ್ರಾಹ್ಮಣ ಸಮುದಾಯದ ವಿರುದ್ಧ ನೀಡಿದ ಅವಹೇಳನಕಾರಿ, ಜಾತಿ ನಿಂದನ ಹಾಗೂ ದ್ವೇಷಪೂರ್ಣ ಹೇಳಿಕೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಬೀದರ್ ಘಟಕವು ತೀವ್ರವಾಗಿ ಖಂಡಿಸಿದೆ.

ಸಂಘದ ಜಿಲ್ಲಾ ಅಧ್ಯಕ್ಷ ವೇಂಕಟೇಶ ಕುಲಕರ್ಣಿ ಅವರು ಪ್ರಕಟಣೆಯಲ್ಲಿ ಹೇಳಿಕೆ ನೀಡಿ, "ಶ್ರೀಕಾಂತ ಸ್ವಾಮಿ ಅವರಂತಹ ವ್ಯಕ್ತಿಗಳ ಹೇಳಿಕೆಗಳು ಸಮಾಜದಲ್ಲಿ ಅಸಮರಸತೆ ಉಂಟು ಮಾಡುತ್ತವೆ. ಬ್ರಾಹ್ಮಣ ಸಮುದಾಯ ಸದಾ ಶಾಂತಿ, ಸಮಾನತೆ ಮತ್ತು ಸಾಮಾಜಿಕ ಸೌಹಾರ್ದಕ್ಕಾಗಿ ಬದ್ಧವಾಗಿದೆ. ಇಂತಹ ನಿಂದನಾತ್ಮಕ ಮಾತುಗಳು ಸಂವಿಧಾನಾತ್ಮಕ ಮೌಲ್ಯಗಳ ವಿರುದ್ಧವಾಗಿವೆ" ಎಂದು ಹೇಳಿದರು.

ಡಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ರಾಜ್ಯ ಹಾಗೂ ಜಿಲ್ಲಾ ಘಟಕಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕಾನೂನು ಕ್ರಮ ಕೈಗೊಳ್ಳುವ ನಿರ್ಧಾರ ಕೈಗೊಂಡಿವೆ ಎಂದು ತಿಳಿಸಿದರು.

ಬೀದರ್ ಜಿಲ್ಲೆಯಾದ್ಯಂತ ಬ್ರಾಹ್ಮಣ ಸಮುದಾಯದ ಸದಸ್ಯರು ಈ ಹೇಳಿಕೆಯನ್ನು ಖಂಡಿಸಿ ಪ್ರತಿಭಟನೆ ಕೈಗೊಳ್ಳಲು ಸಿದ್ಧತೆ ನಡೆಸಿದ್ದಾರೆ.

ಧರ್ಮ, ಸಂವಿಧಾನ ಮತ್ತು ಸೌಹಾರ್ದ ಮೌಲ್ಯಗಳ ರಕ್ಷಣೆಯ ಸಲುವಾಗಿ ಬ್ರಾಹ್ಮಣ ಮಹಾಸಭೆ ಎಲ್ಲರನ್ನು ಶಾಂತಿಯುತವಾಗಿ ಧ್ವನಿ ಎತ್ತುವಂತೆ ಕರೆ ನೀಡಿದ್ದಾರೆ.

# ಬರ್ತ್ ಡೇ ಆಚರಣೆ ಇಲ್ಲ : ಪ್ರಕಾಶ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.21: ತಾಲೂಕಿನಲ್ಲಿ ಅತಿವೃಷ್ಟಿಯಿಂದ ರೈತರು ಸಂಕಷ್ಟದಲ್ಲಿದ್ದಾರೆ. ಹಾಗಾಗಿ ಅ.22 ರಂದು ನನ್ನ ಜನ್ಮದಿನವನ್ನು ಆಚರಿಸಿಕೊಳ್ಳದಿರಲು ನಿರ್ಧರಿಸಿದ್ದೇನೆ ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ತಿಳಿಸಿದ್ದಾರೆ. ಕ್ಷೇತ್ರದಲ್ಲಿ ಎರಡು ಅವಧಿಗೆ ಶಾಸಕನಾಗಿ ಸೇವೆ ಸಲ್ಲಿಸಿದ್ದೇನೆ. ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅನೇಕ ಅಭಿವೃದ್ಧಿ ಪರ ಕೆಲಸಗಳ ಜತೆಗೆ ಬಡಜನರ, ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕೊಡಿಸುವ ಕೆಲಸ ಮಾಡಿದ್ದೇನೆ. ಹಾಗಾಗಿ ಕ್ಷೇತ್ರದ ಜನರು ಇಂದಿಗೂ ನನ್ನನ್ನು ಅತ್ಯಂತ ಪ್ರೀತಿ, ವಿಶ್ವಾಸದಿಂದ ಕಾಣುತ್ತಾರೆ. ಪ್ರತಿವರ್ಷ ಕಾರ್ಯಕರ್ತರು, ಅಭಿಮಾನಿಗಳು ಸೇರಿ ನನ್ನ ಬರ್ತ್ ಡೇ ಅರ್ಥಪೂರ್ಣವಾಗಿ ಆಚರಿಸಿ ಕೊಂಡು ಬರುತ್ತಿದ್ದಾರೆ.ಆದರೆ, ಈ ವರ್ಷ ವಾಡಿಕೆಗಿಂತ ಮಳೆ ಹೆಚ್ಚಾಗಿದ್ದರಿಂದ ರೈತರು ಮುಂಗಾರಿನಲ್ಲಿ ಬೆಳೆದ ಎಲ್ಲ ಬೆಳೆಗಳು ಜಲಾವೃತಗೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ.

ವಿರೋಧ ಪಕ್ಷದಲ್ಲಿದ್ದು ರೈತರ ಸಂಕಷ್ಟ ಪರಿಹರಿಸುವ ಪ್ರಯತ್ನ ಮಾಡುತ್ತಿದ್ದೇನೆ. ಕೇಂದ್ರ ಸರಕಾರ ಈಗಾಗಲೇ ರಾಜ್ಯಕ್ಕೆ ಸುಮಾರು 385 ಕೋಟಿ ರೂ ಅತಿವೃಷ್ಟಿ ಪರಿಹಾರ



ನೀಡಿದೆ.ರಾಜ್ಯ ಸರಕಾರ ಕೂಡ ಕೂಡಲೇ ಹೆಚ್ಚುವರಿ ಪರಿಹಾರ ಬಿಡುಗಡೆ ಮಾಡಿ ರೈತರ ನೆರವಿಗೆ ಧಾವಿಸಬೇಕು. ಬಡ ಜನರು, ರೈತರು ಸಂಕಷ್ಟದಲ್ಲಿರುವುದರಿಂದ ಈ ಬಾರಿ ಬರ್ತ್ ಡೇ ಆಚರಿಸಿಕೊಳ್ಳುತ್ತಿಲ್ಲ. ಕಾರ್ಯಕರ್ತರು, ಅಭಿಮಾನಿಗಳು ಬರ್ತ್ ಡೇ ಹೆಸರಿನಲ್ಲಿ ಬ್ಯಾನರ್, ಕೇಕ್, ಹಾರ ತುರಾಯಿ ಅಂತೆಲ್ಲ ದುಂದು ವೆಚ್ಚ ಮಾಡದೇ ತಾವು ಇದ್ದ ಸ್ಥಳದಲ್ಲಿಂದಲೇ ನನ್ನ ಜನ್ಮದಿನದ ಶುಭ ಕೋರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಒಳಗು ಹೊರಗು ಅರಿವಿನ ಬೆಳಗು ಪ್ರಜ್ವಲಿಸಲಿ

ವಾರಾಣಾಸಿ(ಉತ್ತರಪ್ರದೇಶ) :ಅ.21: ಬೆಳಕನ್ನು ಸಂಭ್ರಮಿಸುವ ದೀಪಗಳ ದೊಡ್ಡಹಬ್ಬವೇ ದೀಪಾವಳಿ. ಮನೆಯ ಒಳಗೆ ಹೊರಗೆ ಬೆಳಗುವ ಸಾಲು ಸಾಲು ಹಣತೆಗಳಿಂದ ಹೊರಸೂಸುವ ಬೆಳಕಿನೊಂದಿಗೆ ಮನುಕುಲದ ಅಂತರ0ಗ(ಒಳಗು)ಮತ್ತು ಬಹಿರಂಗ(ಹೊರಗು)ದಲ್ಲಿ ಅರಿವಿನ ಮಹಾಪ್ರಕಾಶದ ಬೆಳಗು ಪ್ರಜ್ವಲಿಸುವಂತಾಗಲಿ ಎಂದು ವೀರಶೈವ ಪಂಚಪೀಠಗಳಲ್ಲಿ ಒಂದಾದ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದ್ದಾರೆ.



ಅವರು ದೀಪಾವಳಿಯ ಸಂದರ್ಭದಲ್ಲಿ ಶುಭಾಶೀರ್ವಾದ ಧರ್ಮಸಂದೇಶ ನೀಡಿದ್ದು, ಬೆಳಕಿನ ತಿಂಗಳು ಕಾರ್ತಿಕ ಮಾಸವು ಸಂಪೂರ್ಣ ದೀಪಾರಾಧನೆಗೆ ತೆರೆದುಕೊಳ್ಳುತ್ತದೆ. ಕಾರ್ತಿಕ ಶುದ್ಧ ಪ್ರತಿಪದೆಯ ದಿನ ದೀಪಾವಳಿ ಹಬ್ಬದ ಸಡಗರವು ಹಚ್ಚಿಟ್ಟ ಹಣತೆಗಳ ಬೆಳಕಿನಲ್ಲಿ ಎಲ್ಲರ ಮನಗಳು ನಳನಳಿಸುವಂತೆ ಮಾಡುತ್ತದೆ. ಬದುಕಿನ ಪ್ರತೀ ಕ್ಷಣಗಳನ್ನೂ ಅರಿವಿನ ಬೆಳಗಿನೊಂದಿಗೆ ಕಳೆಯಬೇಕೆನ್ನುವುದೇ ಈ ಹಬ್ಬದ ಬಹುಮುಖ್ಯ ಸಂದೇಶ.

ಬೆಳಕಿನೆಡೆಗೆ ಸಾಗುವ ಹಂಬಲವು ಎಲ್ಲ ಜಾತಿ-ಧರ್ಮಗಳನ್ನು ಮೀರಿದ್ದು. ನಿತ್ಯವೂ ನಾವು ಸೂರ್ಯೋದಯವನ್ನು ಕಾಯುತ್ತಿರುತ್ತೇವೆ. 'ಕತ್ತಲು ಬೇಡ, ಬೆಳಕು ಬೇಕು' ಎಂಬ ಸರ್ವರ ಮನದ ಬಯಕೆಯಲ್ಲಿಯೂ ವಿಸ್ತೃತ ಅನುಭಾವದ ಸಂದೇಶವಿದೆ. ದೀಪಾವಳಿಯೊಂದಿಗೆ ಪ್ರಜ್ವಲಿಸುವ ಅರಿವಿನ ಮಹಾಪ್ರಕಾಶವು ಎಲ್ಲರ ಮನೆ-ಮನಗಳಲ್ಲಿ ಶಾಂತಿ, ಸ್ನೇಹ, ಸಹೋದರ ಭಾವ ಸಿಂಚನಗೈದು ಸರ್ವರ ಬಾಳು ಬೆಳೆದು ಬಲಿಯಲು ಅಗತ್ಯವಾದ ಸಂಪತ್ತು-ಸಮೃದ್ಧಿಯನ್ನು ತುಂಬಿತರಲೆ0ದು ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಶುಭ ಹಾರೈಸಿದ್ದಾರೆ.

# ಗದಗ ಶ್ರೀಗಳ ಮೇಲಿನ ಆರೋಪ ಸತ್ಯಕ್ಕೆ ದೂರವಾದದ್ದು:ಡಾ.ಬಸವಲಿಂಗ ಪಟ್ಟದ್ದೇವರು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.21: ಗದಗಿನ ಜಗದ್ಗುರು ತೋಂಟದಾರ್ಯ ಮಠದ ಜಗದ್ಗುರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ಮೇಲೆ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮಿಗಳು 20 ತೋಲ ಬಂಗಾರ ತಮ್ಮ ಪೂರ್ವಾಶ್ರಮದ ಸಂಬಂಧಿಕರ ಮದುವೆಯಲ್ಲಿ ನೀಡಿದ್ದಾರೆಂದು ಹಸಿ ಸುಳ್ಳು ಆರೋಪ ಮಾಡುವ ಮೂಲಕ ಅವರ ಚಾರಿತ್ರ ಹನನ ಮಾಡಿರುವುದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತೀವ್ರವಾಗಿ ಖಂಡಿಸಿದ್ದಾರೆ. ಕರ್ನಾಟಕ ರಾಜ್ಯಾದ್ಯಂತ ಗದಗ ಜಗದ್ಗುರುಗಳ ನೇತೃತ್ವದಲ್ಲಿ ಬಸವ ಸಂಸ್ಕೃತಿ ಅಭಿಯಾನ ಅದ್ದೂರಿಯಾಗಿ ಯಶಸ್ವಿ ಆಗಿರುವುದರಿಂದ ಕನ್ಹೇರಿ ಸ್ವಾಮೀಜಿ ನಿದ್ದೆ ಕೆಡಿಸಿದೆ. ಹಾಗಾಗಿ ಅವರು ತಮ್ಮ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದಾರೆ. ಅವರು ಸೈದ್ಧಾಂತಿಕ ಹೋರಾಟವನ್ನು ಬಿಟ್ಟು ವೈಯಕ್ತಿಕವಾಗಿ ಸುಳ್ಳು ಆರೋಪ ಮಾಡುವಷ್ಟು ಕೆಳಮಟ್ಟಕ್ಕೆ ಇಳಿದಿರುವುದು ತೊಟ್ಟ ಕಾವಿ ಬಟ್ಟೆಗೆ ಅವಮಾನಿಸುತ್ತಿದ್ದಾರೆ. ಬಸವತತ್ವಪರವಾಗಿ ಗಟ್ಟಿಯಾಗಿ ನಿಂತಿರುವ ಪೂಜ್ಯರು ಹಾಗೂ



ನಾಯಕರನ್ನು ಗುರಿಯಾಗಿ ಇಟ್ಟು-ಕೊಂಡು ಅವರ ಕುರಿತು ಅನೇಕ ಸುಳ್ಳಿನ ಕಟ್ಟು ಕಥೆಗಳನ್ನು ಹೆಣೆಯುವ ಕನ್ಹೇರಿ ಸ್ವಾಮೀಜಿ ಸುಳ್ಳಿನ ಸರದಾರರಾಗಿದ್ದಾರೆ. ಸತ್ಯಂ ವದ ಧರ್ಮಂ ಚರ ಎಂದು ಉಪದೇಶ ಮಾಡುವ ಸಂಸ್ಕೃತಿಯ ಕನ್ಹೇರಿ ಸ್ವಾಮಿ ಬಾಯಿ ಬಿಚ್ಚಿದಾಗ ಒಂದು ಸುಳ್ಳು ಮಾತನಾಡುವ ಚಾಳಿ ಮಾಡಿಕೊಂಡಿದ್ದಾರೆ. ಗದಗಿನ ತೋಂಟದಾರ್ಯ ಮಠ ಹಾಗೂ ನಾಗನೂರಿನ ರುದ್ರಾಕ್ಷಿ ಮಠದ ಪೂಜ್ಯರು ತಮ್ಮ ಪೂರ್ವಾಶ್ರಮದ ಸಂಬಂಧಿಕರಿಂದ ಸಾವಿರ ಸಾವಿರ ಕಿಲೋ ಮೀಟರ್ ದೂರ ಉಳಿದಿದ್ದಾರೆ. ಅವರು ಎಂದು ಪೂರ್ವಾಶ್ರಮದ ಸಂಬಂಧಿಕರನ್ನು ಶ್ರೀಮಠದ ಸಮೀಪ ಸುಳಿಯಲು ಅವಕಾಶ ನೀಡಿಲ್ಲ. ಶ್ರೀಮಠದ ಭಕ್ತರ ಎಲ್ಲ ಕಾರ್ಯಗಳಲ್ಲಿ ಭಾಗಿಯಾಗುವುದು ಜಂಗಮ ಕಾರ್ಯ, ಆದರೆ ಅದಕ್ಕೆ ಸುಳ್ಳಿನ ಬಣ್ಣ ಹಚ್ಚಿ ಗದಗ ಶ್ರೀಗಳ ವೈಯಕ್ತಿಕ ಚಾರಿತ್ರ ಹಾಳು ಮಾಡುತ್ತಿರುವುದು ಅತ್ಯಂತ ನೀಚತನವಾಗಿದೆ.

ಗದುಗಿನ ಮಠ ಬಸವತತ್ವದ ಗಟ್ಟಿ ಧ್ವನಿಯಾಗಿದೆ. ಹಿಂದಿನ ಜಗದ್ಗುರುಗಳು ನಾಡು, ನುಡಿ, ಕೃಷಿ, ಸಾಹಿತ್ಯ, ಸಂಸ್ಕೃತಿ, ಪರಿಸರ ಮತ್ತು ಸಾಮಾಜಿಕ ಸೌಹಾರ್ದತೆಗೆ ಹೆಸರುವಾಸಿಯಾದವರು. ಅದೇ ಪರಂಪರೆಯನ್ನು ಇಂದಿನ ಜಗದ್ಗುರುಗಳಾದ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಅವರ ಮೇಲೆ ಸುಳ್ಳು ಆರೋಪ ಮಾಡುವುದೆಂದರೆ ಬಸವತತ್ವ ಗಟ್ಟಿಯಾಗಿ ನಂಬಿದ ಎಲ್ಲ ಪೂಜ್ಯರ ಹಾಗೂ ಬಸವಭಕ್ತರ ಮೇಲೆ ಸುಳ್ಳುತನ ಹೇರಿದ ಹಾಗೆ ಆಗುತ್ತದೆ. ಅದಕ್ಕಾಗಿ ಕನ್ಹೇರಿ ಶ್ರೀಗಳ ಈ ಸುಳ್ಳುದಾರಿಯ ನಡೆಯನ್ನು ಎಲ್ಲ ಬಸವಪರ ಸಂಘಟನೆಗಳು ತೀವ್ರವಾಗಿ ಖಂಡಿಸಬೇಕು.

ಕನ್ಹೇರಿ ಸ್ವಾಮಿಗಳು ಲಿಂಗಾಯತ ಮಠಾಧೀಶರ ಹಾಗೂ ಸಮಾಜದ ಮೇಲೆ ಸುಳ್ಳು ಆರೋಪ ಮಾಡುವುದು ಇದೇ ರೀತಿ ಮುಂದುವರೆಸಿದರೆ ಸಮಾಜ ಅವರಿಗೆ ತಕ್ಕ ಪಾಠ ಕಲಿಸುತ್ತದೆ. ಕನೇರಿ ಸ್ವಾಮಿಗಳು ಲಿಂಗಾಯತ ಹೋರಾಟದ ಮುಂಚೂಣಿಯಲ್ಲಿದ್ದ ಮಠಾಧೀಶರ ಮೇಲೆ ವೈಯಕ್ತಿಕ ಸುಳ್ಳು ಆರೋಪಗಳನ್ನು ಮಾಡಿ ಹೆದರಿಸುವ ಮೂಲಕ ಈ ಹೋರಾಟದ ದಿಕ್ಕು ತಪ್ಪಿಸಬೇಕೆಂದು ಕನಸು ಕಾಣುತ್ತಿದ್ದಾರೆ. ಅದು ಎಂದಿಗೂ ನನಸಾಗುವುದಿಲ್ಲ. ಇಂದು ಸಮಾಜ ಜಾಗೃತವಾಗಿದೆ. ತಮ್ಮ ಶತ್ರುಗಳು ಯಾರು? ಮಿತ್ರರು ಯಾರು? ಎಂದು ತಿಳಿದುಕೊಂಡಿದೆ. ಹಾಗಾಗಿ ನಿಮ್ಮ ಸುಳ್ಳುಗಾರಿಕೆಗೆ ಯಾರು ಮೋಸ ಹೋಗುವುದಿಲ್ಲ. ಇಂತಹ ಸುಳ್ಳು ಆರೋಪಗಳಿಂದ ಯಾರೂ ಕುಗ್ಗದೆ ಜಗ್ಗದೆ ಈ ಹೋರಾಟ ಮತ್ತಷ್ಟು ಗಟ್ಟಿಗೊಳಿಸಿ

# ಯುವ ಕಾಂಗ್ರೆಸ್ ಬೀದರ ಕಾರ್ಯದರ್ಶಿಯಾಗಿ ನಾಗಪ್ಪ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಬೀದರ್. ಅ. 21 : ಕಾಂಗ್ರೆಸ್ ಬೀದರ್ ದಕ್ಷಿಣ ಯುವ ಘಟಕದ ಕಾರ್ಯದರ್ಶಿಯಾಗಿ ನಾಗಪ್ಪ ಕುರಿಕಾಯಿನೋರ್ ಅವರನ್ನು ನೇಮಕ ಮಾಡಲಾಗಿದೆ ಬೀದರ್ ದಕ್ಷಿಣ ಯುವ ಘಟಕದ ಅಧ್ಯಕ್ಷ ಇಮ್ರಾನ್ ಖಾನ್ ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.



ಘೋಡಂಪಳ್ಳಿ ಗ್ರಾಮದ ನಾಗಪ್ಪ ಅವರು ಒಂದು ದಶಕದಿಂದ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಬಲವರ್ಧನೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅನೇಕ ಹೋರಾಟಗಳಲ್ಲಿ ಪಾಲ್ಗೊಳ್ಳುವ ಮೂಲಕ ಗಮನ ಸೆಳೆದಿದ್ದಾರೆ.

**ನೇಮಕಾತಿ ಪತ್ರ ವಿತರಣೆ** ಬೀದರನಲ್ಲಿ ನಾಗಪ್ಪ ಕುರಿಕಾಯಿನೋರ್ ಅವರಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ಕಾಂಗ್ರೆಸ್ ಜಿಲ್ಲಾ ಯುವ ಘಟಕದ ಉಪಾಧ್ಯಕ್ಷ ವಿಶಾಲ್ ಪಾಟೀಲ, ಬೀದರ್ ದಕ್ಷಿಣ ಘಟಕದ ಉಪಾಧ್ಯಕ್ಷ ಗೋಪಾಲ್ ದೊಡ್ಡಿ,

ಪ್ರಧಾನ ಕಾರ್ಯದರ್ಶಿ ರಾಹುಲ್, ಮುಖಂಡ ಶಿವಕುಮಾರ ಶಹಾಪುರೆ ಇದ್ದರು.


# ಮರಿಯಮ್ಮದೇವಿ ಮತ್ತು ಸೇವಾಲಾಲ ಮಹಾರಾಜರ ನೂತನ ದೇವಸ್ಥಾನ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ 24ರಂದು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.20: ಶಹಾಬಾದ ರಸ್ತೆಯ ಶ್ರೀ ಸೇವಾಲಾಲ ನಗರ, ನೃಪತುಂಗ ಕಾಲೋನಿ ಹತ್ತಿರ ಶ್ರೀ ಮರಿಯಮ್ಮ ದೇವಿ ಮತ್ತು ಶ್ರೀ ಸೇವಾಲಾಲ ಮಹಾರಾಜರ ದೇವಸ್ಥಾನದಶ್ರೀಮರಿಯಮ್ಮದೇವಿ ಮತ್ತುಶ್ರೀಸೇವಾಲಾಲಮಹಾರಾಜರ ನೂತನ ದೇವಸ್ಥಾನ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮ ಶುಕ್ರವಾರ ದಿನಾಂಕ: 24–10–2025 ರಂದು ಬೆಳಗ್ಗೆ 6:45 ನಿಮಿಷಕ್ಕೆ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ,ಮಹಾಪೂರ್ಣ ಆಹುತಿ ಕಾರ್ಯಕ್ರಮ, ಬೆಳಿಗ್ಗೆ 11:30 ನಿಮಿಷಕ್ಕೆ ಧಾರ್ಮಿಕ ಕಾರ್ಯಕ್ರಮ ಜರುಗುವುದು ಎಂದು ಶ್ರೀ ಸೇವಾಲಾಲ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಸುಭಾಷ ಹೆಚ್ ಚವ್ಹಾಣ ಹಾಗೂ ಉಪಾಧ್ಯಕ್ಷ ರಾಜು ಎಮ್.ಚವ್ಹಾಣ (ಆರ್‌ಎಮ್‌ಸಿ) ಅವರು ತಿಳಿಸಿದ್ದಾರೆ.

ಶುಕ್ರವಾರ ಹೋಮ, ಹವನ ಪೂಜೆ, ನವಗ್ರಹ ಪೂಜೆ ಹಾಗೂ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ,ಮಹಾಪೂರ್ಣ ಆಹುತಿ, ಮಹಾ ಪ್ರಸಾದ ಕಾರ್ಯಕ್ರಮಗಳು ನಿರಂತರವಾಗಿ ಬಹು ವಿಜೃಂಭಣೆಯಿಂದ ಜರುಗುವವು.

ಬಂಜಾರಾ ಕಾಶಿ ಶಕ್ತಿ ಪೀಠ, ಪೌರಾಗಢ, ಮಹಾರಾಷ್ಟ್ರದ ಪರಮ ಪೂಜ್ಯಶ್ರೀ ಬಾಬುಸಿಂಗ ಮಹಾರಾಜರು, ಸುಕ್ಷೇತ್ರ ಮುಗಳನಾಗಾವಿಯ ಪರಮ ಪೂಜ್ಯ ಶ್ರೀ ಷ. ಬ್ರ ಅಭಿನವ ಸಿದ್ದಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸುವರು, ಪರಮ ಪೂಜ್ಯ ಶ್ರೀ ಅಪ್ಪಾರಾವ



ದೇವಿ ಮುತ್ಯಾ, ಪರಮ ಪೂಜ್ಯ ಶ್ರೀ ಪರ್ವತಲಿಂಗ ಪರಮೇಶ್ವರ ಮಹಾರಾಜರು, ಪರಮ ಪೂಜ್ಯ ಶ್ರೀಜೇಮಸಿಂಗ್ ಮಹಾರಾಜರು, ಪರಮ ಪೂಜ್ಯ ಶ್ರೀ ಸಿದ್ದಲಿಂಗ ಮಹಾ ಸ್ವಾಮಿಗಳು ಇವರು ಸಾನಿಧ್ಯ ವಹಿಸುವರು.

ಪರಮ ಪೂಜ್ಯಶ್ರೀ ಬಳಿರಾಮ ಮಹಾರಾಜರು, ಪರಮ ಪೂಜ್ಯ ಶ್ರೀ ದತ್ತ ದಿಗಂಬರ ಶರಣ ಶಂಕರಲಿಂಗ ಮಹಾರಾಜರು, ಪರಮ ಪೂಜ್ಯಶ್ರೀ ಮುರಾಹಲ ಮಹಾರಾಜರು, ಪರಮ ಪೂಜ್ಯ ಮಾತೋಶ್ರೀ ಲತಾದೇವಿ,

ಪರಮ ಪೂಜ್ಯಶ್ರೀ ಸೋಮನಾಥ ಮಹಾರಾಜರು, ಪರಮ ಪೂಜ್ಯ ಶ್ರೀ ಮಾತಾ ಶಾಂತಾದೇವಿ, ಪರಮ ಪೂಜ್ಯ ಮಾತೋಶ್ರೀ ಕಲಾವತಿದೇವಿ, ಪರಮ ಪೂಜ್ಯ ಶ್ರೀ ಗಣಪತ ಮಹಾರಾಜರು, ಪರಮ ಪೂಜ್ಯ ಶ್ರೀ ಅನೀಲ ಮಹಾರಾಜರು, ಪರಮ ಪೂಜ್ಯ ಶ್ರೀ ಅನೀಲ ಮಹಾರಾಜರು ಇವರು ಮಹಾಭೋಗ ಪೂಜೆ ಸಲ್ಲಿಸುವರು.

ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಫೋಟೋ ಪೂಜೆ ಮಾಡುವರು, ಸಚಿವ ಸಂಜಯ ಭಾವು ರಾಠೋಡ, ಶಾಸಕರಾದ ಬಸವರಾಜ ಮತ್ತಿಮೂಡ, ಅಲ್ಲಮ ಪ್ರಭು ಪಾಟೀಲ, ಡಾ. ಅವಿನಾಶ ಜಾಧವ ಅವರು ಕಾರ್ಯಕ್ರಮ ಜ್ಯೋತಿ ಬೆಳಗುವವರು, ಮಾಜಿ ಸಚಿವ ರೇವುನಾಯಕ ಬೆಳಮಗಿ, ಮಾಜಿ ಸಂಸದರಾದ ಉಮೇಶ ಜಾಧವ, ಹರಿಬಾ ರಾಠೋಡ ಇವರು ನಗಾರೆ ಭಾರಿಸುವವರು,

ಕೆನಬ್ರಿಡ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ನವಶಾದ್ ಎನ್. ಇರಾನಿ, ಮಾಜಿ ಸಚಿವ ಬಾಬುರಾವ ಚವ್ಹಾಣ, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಸೇರಿದಂತೆ ವಿವಿಧ ಮಠಾಧೀಶರು, ರಾಜಕಿಯ ಮುಖಂಡರು, ಬಡಾವಣೆಯ ಮುಖಂಡರು, ಮಹಿಳೆಯರು, ಯುವಕರು ಆಗಮಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇವಣಿರವರು ಉನ್ನತ ಸ್ಥಾನಕ್ಕೇರಲಿ: ಸುರೇಶ ಸೀಗಿ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಅ.21:ಸಾಮಾಜಿಕ ಕಳಕಳಿ ಉಳ್ಳ ಇಲ್ಲಿನ ಜೇರಪೇಟ್ ಬಡಾವಣೆಯ ಶ್ರೀನಾಥ ದೇವಣಿ ರವರು ಉನ್ನತ ಸ್ಥಾನಕ್ಕೇರಲಿ ಎಂದು ಶ್ರೀ ಮಾಣಿಕಪ್ರಭು

ವಾಯು ವಿಹಾರದ ಅಧ್ಯಕ್ಷ ಸುರೇಶ ಸೀಗಿ ರವರು ತಿಳಿಸಿದ್ದಾರೆ.

ಸೋಮವಾರ ಮಾಣಿಕ ಪ್ರಭು ವಿಹಾರದ ಕಾರ್ಯದರ್ಶಿ ಶ್ರೀನಾಥ ದೇವಣಿರವರ 47ನೇ ಹುಟ್ಟುಹಬ್ಬವನ್ನಾಚರಿಸಿಮಾತನಾಡಿದರು

ಈ ಸಂದರ್ಭದಲ್ಲಿ, ಉಪಾಧ್ಯಕ್ಷ ವೈಜಿನಾಥಪಾಟೀಲ,ಹಣಮಂತರಾವ ಕುಂಬ್ಳೆ, ಸುಭಾಷ್ ಪಾಟೀಲ, ಗುರಪ್ಪಾ ವಿಭೂತ್ತಿ, ರಮೇಶಲಾಲ ಜಾಧವ,

ರಮೇಶರಡ್ಡಿಉಸ್ತೇಲಿ,ಮನೋಜ ಬುನ್ನಾ, ಶಂಕರರಾವ ಅವಳಿ, ಮಲ್ಲಿಕಾರ್ಜುನಮಠಪತಿ,ರಾಜಕುಮಾರ ಚನಶಟ್ಟಿ,ವೆಂಕಟರಾವ ಕುಲಕರ್ಣಿ, ಶ್ರೀ ಕಾಂತ ಕುಲಕರ್ಣಿ, ಸಿದ್ದು ಸ್ವಾಮಿ, ಮಡವಾಳಯ್ಯ

ಸ್ವಾಮಿ, ಮಹಾದೇವರಡ್ಡಿ, ವಿನಾಯಕ ಮಂಡಾ,ಬಸ್ಸಪ್ಪ ಕನಕಟ, ಬಸವರಾಜ ಮಜಕೊರೆ, ಭೀಮೇಶ ಪಂಚಾಳ ಹಾಗೂ ಇತರರಿದ್ದರು.

# ಸಂಗೀತದಿಂದ ಏಕಾಗ್ರತೆ, ಆತ್ಮಸ್ಥೈರ್ಯ ಹೆಚ್ಚಳ:ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ




ಬೀದರ, ಅ.20:ಸಂಗೀತವು ಭಾರತೀಯ ಸಂಸ್ಕೃತಿಯನ್ನು ಬೆಳೆಸುವುದರ ಜತೆಗೆ ವ್ಯಕ್ತಿಗಳಲ್ಲಿ ಏಕಾಗ್ರತೆ ಮತ್ತು ಆತ್ಮಸ್ಥೈರ್ಯ ಹೆಚ್ಚಿಸುತ್ತದೆ ಎಂದು ಬೀದರ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹೇಳಿದರು.

ನಗರದ ಜಿಲ್ಲಾ ರಂಗ ಮಂದಿರದಲ್ಲಿ ಪ್ರಗತಿ ಸಂಗೀತ ಕಲಾ ಸಂಸ್ಥೆಯ 17ನೇ ವಾರ್ಷಿಕೋತ್ಸವ ನಿಮಿತ್ತ ಆಯೋಜಿಸಿದ್ದ 'ಸಂಗೀತ ಸೌರಭ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂಗೀತ ಕೇವಲ ಮನೋರಂಜನೆ ಸಾಧನವಲ್ಲ. ಆತ್ಮದ ಆನಂದ ಹಾಗೂ ಮನ ಶಾಂತಿ ನೀಡುತ್ತದೆ. ಭಾರತೀಯ ಸಂಗೀತದಲ್ಲಿ ಭಾವನಾತ್ಮಕ ಸ್ಪರ್ಷ ವಿದೆ. ಪಾಶ್ಚಾತ್ಯ ಸಂಗೀತದಲ್ಲಿ ಅದನ್ನು ಕಾಣಲು ಸಿಗದು ರಾಗಗಳಿಂದ ರೋಗವೂ ನಿವಾರಣೆಯಾಗಬಹುದು. ಹಾಗಾಗಿ ಶಾಸ್ತ್ರೀಯ, ಹಿಂದುಸ್ಥಾನಿ ಸಂಗೀತಕ್ಕೆ ವಿಶ್ವದಲ್ಲೇ ಮನ್ನಣೆ ಇದೆ ಎಂದು ಅಭಿಪ್ರಾಯಪಟ್ಟರು.

ಕಲಾವಿದ ರಮೇಶ ಕೋಳಾರಕರ್ ಕುಟುಂಬವೇ ಸಂಗೀತಕ್ಕೆ ಅರ್ಪಿಸಿಕೊಂಡಿದ್ದು, ಕಳೆದ ಹಲವು ವರ್ಷಗಳಿಂದ ನೆಲಮೂಲದ ಸಂಗೀತದ ಜ್ಞಾನವನ್ನು ಉಣಬಡಿಸಿ, ಈ ಭಾಗದ ಕಲಾವಿದರಿಗೆ ವೇದಿಕೆಗಳನ್ನು ಒದಗಿಸಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ. ಬರುವ ದಿನಗಳಲ್ಲಿ ನಗರದಲ್ಲಿ ಬೃಹತ್ ಸಂಗೀತೋತ್ಸವ ಆಯೋಜನೆ ಮಾಡೋಣ, ಇದಕ್ಕೆ ಎಲ್ಲ ರೀತಿಯ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದ ಶಾಸಕರು, ಬೀದರನಲ್ಲಿಯೇ ಈ ಹಿಂದಿನಂತೆ ಸಂಗೀತ ಪರೀಕ್ಷಾ ಕೇಂದ್ರ ಸ್ಥಾಪಿಸುವ ನಿಟ್ಟಿನಲ್ಲಿ ಅಗತ್ಯಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ ಮಾತನಾಡಿ, ಸಂಗೀತ, ನೃತ್ಯದಂತ ಕಲೆಗಳಿಂದ ಮಕ್ಕಳು ಸಂಸ್ಕಾರವಂತರಾಗಿ ಬೆಳೆಯುತ್ತಾರೆ. ಸಂಗೀತದ ಸೇವೆಯಲ್ಲಿ ತೊಡಗಿರುವ ಕೋಳಾರಕರ್ ಕುಟುಂಬಕ್ಕೆ ಮುಂದಿನ ವರ್ಷದ ದಸರಾ ಉತ್ಸವದಲ್ಲಿ ವೇದಿಕೆ ಕಲ್ಪಿಸಿಕೊಡಲು ಮತ್ತು ಅಕಾಡೆಮಿಯಿಂದ ಒಂದು ಕಾರ್ಯಕ್ರಮನೀಡಲುಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ರಮೇಶ ಕೋಳಾರಕರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಪ್ರಗತಿ ಸಂಸ್ಥೆ ಶ್ರಮಿಸುತ್ತದೆ. ಕಲೆ, ಕಲಾವಿದರನ್ನು ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಮನವಿ ಮಾಡಿದರು. ತ್ರಿವೇಣಿ ಕೊಳಾರಕರ್ ಸ್ವಾಗತಿಸಿ ದೇವಿದಾಸ ಜೋಶಿ ನಿರೂಪಿಸಿದರು. ಈ ಸಂದರ್ಭದಲ್ಲಿ ವಿವಿಧನ ಕ್ಷೇತ್ರದ ಸಾಧನೆಗಾಗಿ ಹಿರಿಯ ಕಲಾವಿದರಾದ ಪಂ. ಡಾ. ವೀರಭದ್ರಪ್ಪ ಗಾದಗೆ, ಪಂ. ಕೇಶವರಾ ಸೂರ್ಯವಂಶಿ, ಪಂ. ಜನಾರ್ಧನ ವಾಘಮಾರೆ, ಪ್ರೊ. ಎಸ್.ವಿ ಕಲ್ಮಠ, ಹಿರಿಯ ಚಿಂತಕ ರಾಮಕೃಷ್ಣ ಸಾಳೆ ಮತ್ತು ಪತ್ರಕರ್ತ ಸದಾನಂದ ಜೋಶಿ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಗುದಗೆ ಆಸ್ಪತ್ರೆಯ ಮುಖ್ಯಸ್ಥ ಡಾ. ಚಂದ್ರಕಾಂತ ಗುದಗೆ, ಜ್ಞಾನಸುಧಾ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ. ಜಿ. ಪೂರ್ಣಿಮಾ, ಗುದಗೆ, ಧರ್ಮಸ್ಥಳ ಜನಜಾಗೃತಿ ವೇದಿಕೆ ಅಧ್ಯಕ್ಷ ವಿರೂಪಾಕ್ಷ ಗಾದಗಿ, ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಫರ್ನಾಂಡಿಸ್ ಹಿಪ್ಪಳಗಾಂವ್, ಸೈನಿಕ ಅಕಾಡೆಮಿ ಅಧ್ಯಕ್ಷ ಕರ್ನಲ್ ಶರಣಪ್ಪ ಸಿಕೆನಪುರ, ಉದ್ಯಮಿ ಚಂದ್ರಶೇಖರ ಹೆಬ್ಬಾಳೆ ಮತ್ತಿತರರು ವೇದಿಕೆಯಲ್ಲಿದ್ದರು.

ನಂತರ ಶ್ರೇಯಾ ಕೊಳಾರಕ್ ಅವರ ಕಥಕ್ ನೃತ್ಯ ಜನಮನ ಸೆಳೆಯಿತು. ಪುಣೆಯ ಸೀತಾರ ವಾದನ ಮತ್ತು ರೋಶನ್ ಕೊಳಾರಕರ್ ತಬಲಾ ಜುಗಲ ಬಂದಿ ಪ್ರೇಕ್ಷಕರನ್ನು ತಲೆದೂಗಿಸುವಂತೆ ಮಾಡಿತು. ಬಳಿಕ ಸಂಸ್ಥೆಯ ವಿದ್ಯಾರ್ಥಿಗಳು ಸಂಗೀತದ ರಸದೌತಣ ಉಣಬಡಿಸಿದರು.

**ಸಂಗೀತದಲ್ಲಿ ಮನುಷ್ಯನ ಹೃದಯಶಾಂತಗೊಳಿಸುವ, ಆತ್ಮ ಪಾವನಗೊಳಿಸುವ ಶಕ್ತಿಯಿಂದೆ. ಇದು ಆತ್ಮ ಸಾಕ್ಷಾತ್ಕಾರದ ಸರಳ ಮಾರ್ಗವಾಗಿದೆ. ನಾದಬ್ರಹ್ಮ ಎಂಬ ತತ್ವವೇ ಭಾರತೀಯ ಪರಂಪರೆಯ ಮಹಾನ್ ಆಲೋಚನೆಯಾಗಿದೆ. ಮಕ್ಕಳು ಪಠ್ಯ ಶಿಕ್ಷಣದ ಜತೆಗೆ ಸಂಗೀತಕ್ಕೂ ಸಮಯ ಕೊಟ್ಟರೆ ಅವರ ವ್ಯಕ್ತಿತ್ವ ವಿಕಸನವಾಗಿ ಶ್ರೇಷ್ಠ ಸಾಧನೆ ಮಾಡಲು ಸಾಧ್ಯವಿದೆ.**

**# ಸ್ವಾಮಿ ಜ್ಯೋತಿರ್ಮಯಾನಂದ ಸ್ವಾಮೀಜಿ, ಅಧ್ಯಕ್ಷರು, ರಾಮಕೃಷ್ಣ ವಿವೇಕಾನಂದ ಆಶ್ರಮ, ಬೀದರ.**

# ಹಾಸನದಲ್ಲಿ ಕಿರು ಚಲನಚಿತ್ರೋತ್ಸವದ ಸಂಭ್ರಮ ಆಯ್ಕೆಯಾದ ಕಿರು ಚಿತ್ರಗಳಿಗೆ ಪ್ರಶಸ್ತಿ ಪ್ರದಾನ

ಮಲ್ಲಮ್ಮನುಡಿವಾರ್ತೆಹಾಸನ:ಅ.21:ಹಾಸನಾಂಬೆ ದರ್ಶನ ಸಂದರ್ಭದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಹಾಸನಾಂಬ ಚಲನಚಿತ್ರೋತ್ಸವ ಹಾಸನಾಂಬ ಕಲಾಕ್ಷೇತ್ರದಲ್ಲಿ ಸಂಭ್ರಮ ಸಡಗರದಿಂದ ನಡೆಯಿತು.

ಹಾಸನ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮ್ಯಾಕ್ಸ್ ಕಾನ್, ಡ್ರೀಮ್ ಸ್ಟುಡಿಯೋ ಎಂಟರ್ಟೈನ್ಮೆಂಟ್ ಮತ್ತು ವೆಂಚರ್ ಮೂವೀಸ್ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ಹಾಸನಾಂಬ ಚಲನಚಿತ್ರೋತ್ಸವ–2025 ಅನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ಉದ್ಘಾಟಿಸಿದರು.

ಹಾಸನಾಂಬ ಮತ್ತು ಸಿದ್ದೇಶ್ವರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಕಿರು ಚಿತ್ರಗಳ ಚಲನಚಿತ್ರೋತ್ಸವ ಏರ್ಪಾಡು ಮಾಡುವ ಮೂಲಕ ಹಾಸನದ ಹಿರಿಮೆಯನ್ನು ಸಾಂಸ್ಕೃತಿಕವಾಗಿ ಹೆಚ್ಚಿಸಲು ಹೊಸ ಪ್ರಯತ್ನ ಮಾಡಿದಂತಾಗಿದೆ ಎಂದರು.

ಹಾಸನ ಕಲಾವಿದರಿಗೆ ಹುಟ್ಟು ನೀಡಿದ ಭೂಮಿ. ಹಾಸನದ ದನಗಳ ಜಾತ್ರೆ ಒಂದು ಕಾಲಕ್ಕೆ ನಾಡಿಗೆ ಹೆಸರುವಾಸಿ. ಇಂಥ ನೆಲದಲ್ಲಿ ಕಿರು ಚಿತ್ರೋತ್ಸವ ನಡೆಯುತ್ತಿರುವುದು ಅಭಿನಂದನಾರ್ಹ ಎಂದರು.

ಎರಡು ದಿನಗಳ ಕಾಲ ನಡೆದ ಈ ಚಲನಚಿತ್ರೋತ್ಸವದಲ್ಲಿ 10 ಕಿರುಚಿತ್ರಗಳು, 2 ವಿಶೇಷ ಕಿರುಚಿತ್ರಗಳು ಹಾಗೂ 3 ಕನ್ನಡ ಚಲನಚಿತ್ರಗಳು ಪ್ರದರ್ಶನಗೊಂಡವು. ಪ್ರೇಕ್ಷಕರಿಂದ ಉತ್ತಮ ಉತ್ಸಾಹಭರಿತ ಪ್ರತಿಕ್ರಿಯೆ ದೊರೆಯಿತು.




ಉದ್ಘಾಟನಾ ಸಮಾರಂಭದಲ್ಲಿ ಹಾಸನ ಮಹಾನಗರ ಪಾಲಿಕೆಯ ಉಪ ಮಹಾಪೌರ ಹೇಮಲತಾ ಕಮಲ್ ಕುಮಾರ್, ನಗರಸಭೆಯ ಮಾಜಿ ಸದಸ್ಯ ಕಮಲ್ ಕುಮಾರ್, ನಮ್ಮ ಹಾಸನ ಟಿವಿ ಪ್ರಧಾನ ಸಂಪಾದಕ ತೌಫಿಕ್ ಅಹಮ್ಮದ್, ಹಾಗೂ ಆಯೋಜಕರಾದ ಗುರು ಪ್ರಸಾದ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದರು.

ವಿಭಿನ್ನ ವಿಭಾಗಗಳಲ್ಲಿ ಆಯ್ಕೆಯಾದ ಅತ್ಯುತ್ತಮ ಕಿರುಚಿತ್ರಗಳಿಗೆ ಪ್ರಶಸ್ತಿಗಳನ್ನು ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಪ್ರದಾನ ಮಾಡಿದರು. ಬಳಿಕ ಸಾಧಕರಿಗೆ ಸನ್ಮಾನಿಸಲಾಯಿತು.

ಆಯೋಜನಾ ಸಮಿತಿಯಲ್ಲಿ ಗುರು ಪ್ರಸಾದ್, ಸ್ಟಾನಿ ಜೋಯ್ಸನ್, ಶಕೀಲ್ ಅಹಮ್ಮದ್, ಪ್ರಶಾಂತ್ ಹಾಸನ್, ಪರಮೇಶ್ ದೊಡ್ಡಮಗ್ಗೆ, ದೇವರಾಜ್ ರಾಯಚೂರು, ಜೀವನ್ ರತ್ನ, ವಿನಾಯಕ್ ಬಿದಾರ್ ಹಾಗೂ ನಾಗರಾಜ್ ಭಂಡಾರಿ ಹಾಜರಿದ್ದರು.

ಹಾಸನದ ನಿರೂಪಕರಾದ ಕಾರ್ತಿಕ್, ರಕ್ಷಿತಾ ಕಾರ್ತಿಕ್ ಮತ್ತು ಮಿಲನ ಗೌಡ ಅವರು ಮನೋಜ್ಞವಾಗಿ ನಿರೂಪಿಸಿದರು.

# 10 ದಿನ ಮಳೆ ಮುಂದುವರಿಕೆ, ನಾಳೆ ಭಾರಿ ವರ್ಷಧಾರೆ ಸಾಧ್ಯತೆ,

ಬೆಂಗಳೂರು: ಅ.21:ರಾಜ್ಯದಲ್ಲಿ ವರುಣಾರ್ಭಟ ಮುಂದುವರೆದಿದ್ದು ಮುಂದಿನ 10 ದಿನಗಳ ಕಾಲ ರಾಜ್ಯಾದ್ಯಂತ ಮಳೆ ಮುಂದುವರೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ರಾಜ್ಯದಲ್ಲಿ ಮಳೆ ಮತ್ತಷ್ಟು ದಿನ ಮುಂದುವರಿಯುವ ಸಾಧ್ಯತೆ ಇದ್ದು, ಮುಂದಿನ 10 ದಿನಗಳ ಕಾಲ ರಾಜ್ಯದಲ್ಲಿ ಮಳೆ ಮುಂದುವರೆಯಲಿದೆ. ಕರಾವಳಿ ಜಿಲ್ಲೆಗಳಲ್ಲಿ ವರುಣ ಅಬ್ಬರಿಸಲಿದ್ದು, ಚಾಮರಾಜನಗರದಲ್ಲೂ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

**ನಾಳೆ ಭಾರಿ ಮಳೆ ಸಾಧ್ಯತೆ**

ಪ್ರಮುಖವಾಗಿ ನಾಳೆ ರಾಜ್ಯದಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ರಾಜ್ಯದ 7 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಉಳಿದ 24 ಜಿಲ್ಲೆಗಳಲ್ಲಿಯೂ ಸಾಧಾರಾಣ ಮಳೆಯಾಗಲಿರುವ ಹಿನ್ನಲೆಯಲ್ಲಿ ಯೆಲ್ಲೋ ಅಲರ್ಟ್ ಇರಲಿದೆ.

ದಕ್ಷಿಣ ಒಳನಾಡು ಭಾಗದಲ್ಲೂ ಮಳೆಯಾಗಲಿದ್ದು, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು, ಚಾಮರಾಜನಗರ ಮತ್ತು ಹಾಸನದಲ್ಲಿ ಆರೆಂಜ್ ಅಲರ್ಟ್ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

**ಕರಾವಳಿಗೆ ಅಲರ್ಟ್**

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಭಾರಿ ಪ್ರಮಾಣದ ಮಳೆಯಾಗಲಿದ್ದು, ಆರೆ–ಂಜ್ ಅಲರ್ಟ್ ಘೋಷಿಸಲಾಗಿದೆ. ಮಳೆ ಜೊತೆ ಹೆಚ್ಚಿನ ಪ್ರಮಾಣದ ಗಾಳಿಯೂ ಬೀಸುವ ಸಾಧ್ಯತೆ ಹಿನ್ನಲೆ ಮುನ್ನೆಚ್ಚರಿಕೆಯಾಗಿ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚಿಸಲಾಗಿದೆ. ಬೆಂಗಳೂರಲ್ಲಿ ಗಾಳಿ ಮಳೆ ಸಾಧ್ಯತೆರಾಜಧಾನಿ ಬೆಂಗಳೂರಲ್ಲಿ ನಾಳೆ ಗಾಳಿ ಸಹಿತ ಸಾಧಾರಣ ಮಳೆಯ ಮುನ್ಸೂಚನೆ ಇದೆ. ಶೇಕಡಾ 86ರಷ್ಟು ಮಳೆಯಾಗುವ ಸಾಧ್ಯತೆ ಇದ್ದು, ಗಾಳಿಯ ವೇಗ ಗಂಟೆಗೆ 11–20 ಕಿ.ಮೀ. ಇರಲಿದೆ.

# ಹಡಪದ ಅಭಿವೃದ್ದಿ ನಿಗಮ ಸ್ಥಾಪನೆ: ಚಿತ್ತಾಪುರದಲ್ಲಿ ವಿಜಯೋತ್ಸವ

ಚಿತ್ತಾಪುರ,ಅ.21–ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಕರ್ನಾಟಕ ಹಡಪದ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿರುವುದರಿಂದ ಈಗ ಹಡಪದ ಸಮಾಜದ ಅಭಿವೃದ್ದಿಗೆ ಕಾಲ ಕೂಡಿ ಬಂದಿದೆ ಎಂದು ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ತಾಲೂಕು ಅಧ್ಯಕ್ಷ ರಮೇರ್ಶ ಹಡಪದ ಕೊಲ್ಲೂರ್ ಅವರು ಹೇಳಿದರು.

ರಾಜ್ಯ ಸರ್ಕಾರ ಕರ್ನಾಟಕ ಹಡಪದ ಅಭಿವೃದ್ದಿ ನಿಗಮವನ್ನು ಸ್ಥಾಪಸಿ ಆದೇಶ ಮಾಡಿರುವುದರಿಂದ ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ತಾಲೂಕು ಘಟಕದವತಿಯಿಂದ ಮಂಗಳವಾರ ಪಟ್ಟಣದ ಲಾಡ್ಜಿಂಗ್ ಕ್ರಾಸ್ ಬಳಿ ವಿಜಯೋತ್ಸವ ಆಚರಣೆ ನೇತೃತ್ವವಹಿಸಿ ಮಾತನಾಡಿದ ಅವರು, ಹಡಪದ ಸಮಾಜ ಅಭಿವೃದ್ಧಿ ನಿಗಮ ಮಾಡಬೇಕೆಂದು ಅನೇಕ ವರ್ಷಗಳ ಕನಸಾಗಿತ್ತು. ರಾಜ್ಯದ ಎಲ್ಲ ಸರ್ಕಾರಗಳಿಗೆ ಅನೇಕ ವರ್ಷಗಳಿಂದ ಮನವಿ ಪತ್ರ ಕೊಟ್ಟು ಹೋರಾಟ ಮಾಡಲಾಗಿತ್ತು. ಆದರೆ ಈಗ ಕಾಲ ಕೂಡಿ ಬಂದಿದೆ ಎಂದರು.

ನಿಗಮ ಸ್ಥಾಪನೆಗೆ ರಾಜ್ಯ ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಕ್ಷೇತ್ರದ ಶಾಸಕ, ಕಲಬುರ್ಗಿ ಜಿಲ್ಲಾ ಉಸ್ತುವಾರ ಸಚಿವ ಪ್ರಿಯಾಂಕ್ ಖರ್ಗೆ ಅವರ ಪ್ರಯತ್ನದಿಂದ ಕರ್ನಾಟಕ ಹಡಪದ ಅಭಿವೃದ್ದಿ ಸ್ಥಾಪನೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ ಅವರು, ಶೈಕ್ಷಣಿಕ ಜತೆಗೆ ಉದ್ಯೋಗದಲ್ಲಿಯೂ ಅವಕಾಶ ಹೆಚ್ಚಾಗಲಿದೆ. ಅಭಿವೃದ್ದಿ ನಿಗಮ ಸ್ಥಾಪನೆಯಿಂದಾಗಿ ಹಡಪದ ಸಮಾಜದ ಸರ್ವತೋಮುಖ ಅಭಿದ್ದಿಯಾಗಲಿದೆ ಎಂದರು.

ಪಟ್ಟಣದ ಲಾಡ್ಜಿಂಗ್ ಕ್ರಾಸ್ ಬಳಿ ಶರಣ ಹಡಪದ ಅಪ್ಪಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪಟಾಕಿ ಸಿಡಿಸಿ. ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಪ್ರಮುಖರಾದ ಅಶೋಕ್ ಹಡಪದ್, ಕಲ್ಯಾಣಿ ಹಡಪದ, ಅಶೋಕ ಚೌಕೆ, ಪಂಡಿತ್, ಮಹಾದೇವ್ ಚೌಕಿ, ಮುರುಳಿ ಸಾತನೂರ್, ಸೋಮನಾಥ ಹಡಪದ, ಕಾಶಿನಾಥ ಹಡಪದ, ಸಿದ್ದು ಹಡಪದ, ವಿಶ್ವನಾಥ ಹಡಪದ, ನಂದೇಶ್ ಹಡಪದ, ಚಂದ್ರಶೇಖರ್ ಹಡಪದ, ಮಹೇಶ್ ಹಡಪದ, ಗಣಪತಿ ಹಡಪದ, ಸಂಜಯ್ ಬುಳಕರ್, ಸಂತೋಷ ಪೂಜಾರಿ ಮುಂತಾದವರು ಉಪಸ್ಥಿತರಿದ್ದರು.

# ಭೋಗಾವತಿ ನದಿಯ ನೀರಿನ ಸುಳಿಗೆ ಸಿಲುಕಿ ಜೊಡೆತ್ತು, ಆಕಳು ಸಾವು

ಚಿಂಚೋಳಿ, ಅ.21– ತಾಲ್ಲೂಕಿನ ಕನಕಪೂರ್ ಗ್ರಾಮದ ರೈತ ವೀರಶೇಟ್ಟಿ ಶರಣಪ್ಪ ಉಳಾಗಡ್ಡಿ ಎನ್ನುವವರ ಎರಡು ಎತ್ತುಗಳು ಮತ್ತು ಒಂದು ಆಕಳು ನದಿಯಲ್ಲಿನ ನೀರಿನ ಸುಳಿಗೆ ಸಿಲುಕಿ ಸಾವನ್ನಪ್ಪಿರುವ ಘಟನೆ ಮಂಗಳವಾರ ಬೆಳಿಗ್ಗೆ ಸಂಭವಿಸಿದೆ.

ರೈತ ದೀಪಾವಳಿ ಹಬ್ಬ ನಿಮಿತ್ಯ ತನ್ನ ಎರಡು ಎತ್ತುಗಳು ಹಾಗೂ ಒಂದು ಆಕಳು ತೊಳೆಯಲು ಭೋಗಾವತಿ ನದಿಗೆ ಹೋಗಿದ್ದು, ನದಿಯಲ್ಲಿ ಜಾನುವಾರುಗಳನ್ನು ತೊಳೆಯುವ ವೇಳೆ ನೀರಿನ ಸುಳಿಗೆ ಸಿಲುಕಿ ಸ್ಥಳದಲ್ಲೆ ಒಂದು ಎತ್ತು ಮತ್ತು ಆಕಳು ಸಾವನ್ನಪ್ಪಿದ್ದು, ಇನ್ನೊಂದು ಎತ್ತು ನೀರಿನಲ್ಲಿ ಕೊಚ್ಚಿ ಹೋಗಿದೆ. ಗ್ರಾಮಸ್ಥರು ಹುಡುಕಾಟದಲ್ಲಿ ನಿರತರಾಗಿದ್ದು, ಸರಾಸರಿ ಅಂದಾಜು ಸುಮಾರು 1.40 ಲಕ್ಷಕ್ಕೂ ಅಧಿಕ ಹಾನಿಯಾಗಿವೆ ಎಂದು ನೊಂದ ರೈತ ವೀರಶೆಟ್ಟಿ ಅವರು ಅಳಲು ತೊಡಿಕೊಂಡಿದ್ದಾನೆ.

ಘಟನೆ ತಿಳಿದು ಸ್ಥಳಕ್ಕೆ ಧಾವಿಸಿದ ಪಶು ವೈದ್ಯ ಬಾಬು ಪಟೇಲ್ ಹಾಗೂ ಗ್ರಾಮ ಲೇಖಪಾಲಕಿ ಅನೀತಾ ಅವರು ಭೇಟಿ ನೀಡಿ ಸಾವನ್ನಪ್ಪಿರುವ ಜಾನುವಾರುಗಳನ್ನು ಪರಿಶೀಲನೆ ನಡೆಸಿ ತಕ್ಷಣವೇ ಉನ್ನತ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು, ಸರ್ಕಾರದಿಂದ ಬರುವ ಪರಿಹಾರವನ್ನು ಶೀಘ್ರದಲ್ಲೆ ಕಲ್ಪಿಸುವುದಾಗಿ

# ಮನುಷ್ಯನಿಗೆ ನೆಮ್ಮದಿಯೇ ಅತಿ ದೊಡ್ಡ ಸಂಪತ್ತು : ಡಾ.ಬಸವಲಿಂಗ ಅವಧೂತರು

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಅ.21:ಮನುಷ್ಯನಿಗೆ ನೆಮ್ಮದಿಯೇ ಅತಿ ದೊಡ್ಡ ಸಂಪತ್ತು. ಹೀಗಾಗಿ ಬಡತನವೇ ಇರಲಿ, ಸಿರಿತನವೇ ಇರಲಿ ಸಂತೃಪ್ತಿಯಿಂದ ಬದುಕಬೇಕು ಎಂದು ತೆಲಂಗಾಣದ ಜಹೀರಾಬಾದ್ ತಾಲ್ಲೂಕಿನ ಮಲ್ಲಯ್ಯಗಿರಿ ಹಾಗೂ ದೇಗಲಮಡಿ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ನುಡಿದರು.

ತಾಲ್ಲೂಕಿನ ಹುಡಗಿ ಗ್ರಾಮದ ವೀರಕ್ತ ಮಠದಲ್ಲಿ ಶ್ರೀ ಗುರು ಚನ್ನಮಲ್ಲೇಶ್ವರ ಪುಣ್ಯಸ್ಮರಣೋತ್ಸವದ ಅಂಗವಾಗಿ ಈಚೆಗೆ ನಡೆದ ಶ್ರೀ ಹಾನಗಲ್ಲಿ ಗುರುಕುಮಾರೇಶ್ವರ ಪುರಾಣ ಮಂಗಲ ಸಮಾರೋಪ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮಕ್ಕಳು ಮೊಬೈಲ್‌ನ್ನು ಜ್ಞಾನವೃದ್ಧಿಗೆ ಮಾತ್ರ ಬಳಕೆ ಮಾಡಿಕೊಳ್ಳಬೇಕು. ಇಂದಿನ ಕೇಲ ಮಕ್ಕಳು ಕೆಟ್ಟ ಚಟಕ್ಕೆ ಬಿದ್ದು ತಮ್ಮ ಜೀವನ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಎಂದ ಅವರು ಕೆಟ್ಟ ಚಟಗಳಿಂದ ಆರೋಗ್ಯ ಹಾಳಾಗುತ್ತದೆ ಪೋಷಕರು ಮಕ್ಕಳನ್ನೂ ಪೊಷಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಹಾತ್ಮರ ಜೀವನ ಸಾಧನೆ ಪುಸ್ತಕಗಳನ್ನು ಓದಿ ಪ್ರೇರಣೆ ಪಡೆದು ಅವರು ಹಾಕಿ ಕೊಟ್ಟ



ಮಾರ್ಗದಲ್ಲಿ ನಡೆಯಬೇಕು. ಶಕ್ತಿ ಇರುವಾಗಲೇ ಎಲ್ಲರೂ ಕೆಲಸ ಮಾಡಿ ಬದುಕಬೇಕು, ಪರಮಾತ್ಮನನ್ನು ದಿನಾಲು ಬೆಳಗಿನ ಜಾವ ಪೂಜಿಸುವುದರ ಜತೆಗೆ ಜನ್ಮಕೊಟ್ಟ ತಂದೆ, ತಾಯಿಯ ಸೇವೆ ಮಾಡಬೇಕು ಎಂದರು. ನಾವು ಎಲ್ಲಿಂದ ಬಂದಿದ್ದೇವೆ. ಎಲ್ಲಿಗೆ ಹೋಗಲಿದ್ದೇವೆ ಎಂಬುದ್ದನ್ನು ಅರ್ಥ ಮಾಡಿಕೊಳ್ಳಬೇಕು. ಗಳಿಸಿದ ಎಲ್ಲವನ್ನೂ ಇಲ್ಲೇ ಬಿಟ್ಟು ಹೋಗಲಿದ್ದೇವೆ. ಸತ್ಕಾರ್ಯಗಳ ಪುಣ್ಯ ಮಾತ್ರ ನಮ್ಮೊಂದಿಗೆ ಬರಲಿದೆ ಎಂದರು.

ಶಾಸಕ ಡಾ.ಸಿದ್ದಲಿಂಗಪ್ಪಾ ಪಾಟೀಲ ಅವರು ಮಾತನಾಡಿ, ಹುಡಗಿ ವೀರಕ್ತ ಮಠದ ಶ್ರೀ ಗುರು ಚನ್ನಮಲ್ಲೇಶ್ವರ ಮಹಿಮೆ ಅಪಾರವಾಗಿದ್ದು, ಮಠದ ಅಭಿವೃದ್ಧಿಗೆ ಅಗತ್ಯ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದರು.

ಹುಡಗಿ ವೀರಕ್ತ ಮಠದ ಪುಜ್ಯ ಶ್ರೀ ಚನ್ನಮಲ್ಲ ದೇವರು ಸಾನಿಧ್ಯ ವಹಿಸಿ ಮಾತನಾಡಿ, ಜೀವನದಲ್ಲಿ ಎಲ್ಲರು ಸನ್ಮಾರ್ಗದಲ್ಲಿ ನಡೆಯುವುದರ ಜತೆಗೆ ಗುರುವಿನ ಉಪದೇಶಗಳನ್ನು ಚಾಚೂತಪ್ಪದೆ ಪಾಲಿಸಬೇಕು, ದೇವರು ಕೊಟ್ಟ ಮನುಷ್ಯ ಜನ್ಮ ಅಮೂಲ್ಯವಾಗಿದೆ. ಅದನ್ನು ಒಳ್ಳೆಯ ನಡೆ, ನುಡಿಯ ಮೂಲಕ ಅದನ್ನು ಸಾರ್ಥಕ ಮಾಡಿಕೊಳ್ಳಬೇಕು. ಎಂದು ನುಡಿದರು.

ಹೀರನಾಗಾಂವ್‌ನ ಜಯಶಾಂತಲಿಂಗ ಮಹಾಸ್ವಾಮಿ, ಉದಗೀರ ಹಾವಗಿಸ್ವಾಮಿ ಮಠದ ಡೋಣಗಾಂವ್‌ನ ಡಾ. ಶಂಭುಲಿಂಗ ಶಿವಾಚಾರ್ಯ, ಹುಡಗಿ ಹಿರೇಮಠದ ಸೋಮೇಶ್ವರ ಶಿವಾಚಾರ್ಯ, ಸಾನಿಧ್ಯ ವಹಿಸಿದರು. ಇಲ್‌ಕಲ್ (ಗುಡೂರ)ನ್ ಹಿರೇಮಠದ ಶ್ರೀ ಅನ್ನದಾನೇಶ್ವರ ಸ್ವಾಮಿಗಳಿಂದ ಅಕ್ಟೋಬರ್ 13 ರಿಂದ 19 ವರೆಗೆ ಶ್ರೀ ಹಾನಗಲ್ಲಿ ಗುರುಕುಮಾರೇಶ್ವರ ಪುರಾಣ ಜರುಗಿತು. ಸಂಗೀತ ಕಲಾವಿದ ಚಿದಾನಂದ ಝಳಕಿ (ಕೆ), ಖ್ಯಾತ ತಬಲಾವಾದಕ ಜ್ಞಾನೇಶ್ವರ ಬೆಳಕೋಟಾ ಅವರು ಸಂಗೀತ ಕಾರ್ಯಕ್ರಾಮ ನಡೆಸಿಕೊಟ್ಟರು, ನಿವೃತ್ತ ಶಿಕ್ಷಕ ಶಶಿಕಾಂತ ಕೋಡ್ಲಾ, ನಿರೂಪಿಸಿದರು.

ಕಾರ್ಯಕ್ರಮದಲ್ಲಿ ವೀರಕ್ತಮಠದ ಸಮಸ್ತ ಸದ್ಭಕ್ತ ಮಂಡಳಿ ಅವರು ಉಪಸ್ಥಿತರಿದ್ದರು.


ನಾಡಿನ ಸಮಸ್ತ ಜನತೆಗೆ ಪುರಸಭೆ ಚಿಟಗುಪ್ಪ ವತಿಯಿಂದ
ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು
ನಿಮ್ಮೆಲ್ಲರ ಕನಸುಗಳು ಈಡೇರಲಿ ನಿಮ್ಮ ಬದುಕಿನ ಹಾದಿಯಲ್ಲಿದ್ದ ಅಡೆತಡೆಗಳು
ಬೆಳಕಿನ ಹಬ್ಬದಲ್ಲಿ ನಿವಾರಣೆಯಾಗಲಿ, ನಿಮ್ಮ ಇಷ್ಟಾರ್ಥಗಳೆಲ್ಲಾ ಸಿದ್ಧಿಯಾಗಲಿ.
ಸರ್ವರಿಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು
ಶ್ರೀ ದಿಲೀಪಕುಮಾರ ಬಗ್ದಲಕರ್
ಅಧ್ಯಕ್ಷರು, ಪುರಸಭೆ ಚಿಟಗುಪ್ಪ
ಶ್ರೀ ನಸೀರ್ ಖಾನ್
ಉಪಾಧ್ಯಕ್ಷರು, ಪುರಸಭೆ ಚಿಟಗುಪ್ಪ
ಶ್ರೀ ಹುಸಾಮುದ್ದೀನ್ ಬಾಬಾ
ಮುಖ್ಯಾಧಿಕಾರಿಗಳು ಪುರಸಭೆ ಚಿಟಗುಪ್ಪ
ಪುರಸಭೆ ಚಿಟಗುಪ್ಪ ಎಲ್ಲಾ ಸಿಬ್ಬಂದಿ ಹಾಗೂ ಸದಸ್ಯರು,